ಕರ್ನಾಟಕ ವಿಧಾನ ಸಭೆ

ಮಂಗಳವಾರ 10ನೇ ಏಪ್ರಿಲ್ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.35 ಗಂಟೆಗೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

(ಸದನವು ಬೆಳಿಗ್ಗೆ 12 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1. ಪ್ರಕಟಣೆ

ವಿಷಯ : ಶ್ರೀ ಕೃಷ್ಣ ಪಾಲೇಮಾರ್ ಮತ್ತು ಶ್ರೀ ಯೋಗೀಶ್ ಭಟ್ ಇವರುಗಳ ಬಂಧನ ಮತ್ತು ಬಿಡುಗಡೆ ಬಗ್ಗೆ :

ಅಧ್ಯಕ್ಷರು : –

ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಮೇಲೆ ಮೊಕದ್ದಮೆ ಖಲು ಮಾಡಿರುವ ವಿರುದ್ಧ ವಿಧಾನಸಭಾ ಸದಸ್ಯರುಗಳಾದ ಶ್ರೀ ಕೃಷ್ಣ ಪಾಲೇಮಾರ್ ಗೂ ಶ್ರೀ ಎನ್.ಯೋಗೀಶ್ ಭಟ್ ಅವರುಗಳು ದಿನಾಂಕ 9–4–2007 ರಂದು ಂಗಳೂರು ನಗರದಲ್ಲಿ ಹಮ್ಮಿಕೊಂಡಿದ್ದ ರಸ್ತೆ ರೋಕೋ ಸಂದರ್ಭದಲ್ಲಿ ಸಂಜೆ)2 ಗಂಟೆಯಲ್ಲಿ ಅವರುಗಳನ್ನು ಸ್ಥಳದಿಂದ ತೆರವುಗೊಳಿಸಿ, ನಂತರ ಸಂಜೆ 5.17 ಟೆಗೆ ಮಂಗಳೂರಿನ ಮಹಾವೀರ ವೃತ್ತದಲ್ಲಿ ಕಳುಹಿಸಲಾಯಿತೆಂದು ದಕ್ಷಿಣ ್ನಡ ಜಿಲ್ಲೆಯ ಸೂಪರಿನ್‌ಡೆಂಟ್ ಆಫ್ ಪೊಲೀಸ್ ಅವರು ತಿಳಿಸಿರುತ್ತಾರೆ.

12–30

ಅಧ್ಯಕ್ಷರು :– ಮಾನ್ಯ ಮುಖ್ಯಮಂತ್ರಿಗಳು ನಿರ್ಣಯವನ್ನು ಮಂಡಿಸುವುದು.

2. ನಿರ್ಣಯ

ವಿಷಯ : ಐಐಎಂ, ಐಐಟಿ ಮುಂತಾದ ಉನ್ನತ ಶಿಕ್ಷಣದಲ್ಲಿ ಇತರೇ ಹಿಂದುಳಿದ ವರ್ಗದವರ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27 ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವಂತೆ ಸದನವು ಸರ್ವಾನುಮತದಿಂದ ನಿರ್ಣಯಿಸುವ ಬಗ್ಗೆ :

ಶ್ರೀ ಹೆಚ್.ಡಿ. ಕುಮಾರಸ್ವಾಮಿ [ಮುಖ್ಯಮಂತ್ರಿ] :- ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

> "ಐಐಎಂ, ಐಐಟಿ ಮುಂತಾದ ಉನ್ನತ ಶಿಕ್ಷಣದಲ್ಲಿ ಇತರೇ ಹಿಂದುಳಿದ ವರ್ಗದವರ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವಂತೆ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ".

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

> "ಐಐಎಂ, ಐಐಟಿ ಮುಂತಾದ ಉನ್ನತ ಶಿಕ್ಷಣದಲ್ಲಿ ಇತರೇ ಹಿಂದುಳಿದ ವರ್ಗದವರ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವಂತೆ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ".

ಶ್ರೀ ಹೆಚ್.ಡಿ. ಕುಮಾರಸ್ವಾಮಿ [ಮಾನ್ಯ ಮುಖ್ಯಮಂತ್ರಿ] :– ಸನ್ಮಾನ್ಯ ಅಧ್ಯಕ್ಷರೆ, ಈ ದಿನಗಳಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಐಐಎಂ., ಐಐಟಿ ಮತ್ತು ಉನ್ನತ ಶಿಕ್ಷಣ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರ ಕೆಲವು ಮೀಸಲಾತಿಯನ್ನು ತರುವ ಒಂದು ನಿರ್ಣಯವನ್ನು ಮಾಡಿರುವ ಸಂದರ್ಭದಲ್ಲಿ, ಆ ಒಂದು ನಿರ್ಣಯಕ್ಕೆ ಈ ಸದನ ಸಂಪೂರ್ಣವಾದ ಬೆಂಬಲ ಕೊಡುವುದಕ್ಕೆ ಹಾಗೂ ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರುವುದಕ್ಕೆ ಇವತ್ತು ಈ ಸದನದ ಮುಖಾಂತರ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಣಯವನ್ನು ಬೆಂಬಲಿಸುವುದಾಗಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಮೀಸಲಾತಿಗೆ ವ್ಯವಸ್ಥೆಗಳಿಗೆ ಸಂಬಂಧಪಟ್ಟ ಹಾಗೆ ಕರ್ನಾಟಕ ರಾಜ್ಯದಲ್ಲಿ ಮೈಸೂರಿನ ಅರಸರು ಆಳ್ವಿಕೆ ನಡೆಸುವ ಸಂದರ್ಭದಲ್ಲೂ, ಮೀಸಲಾತಿಯ ವಿಷಯದಲ್ಲಿ ಏನು ಹಲವಾರು ಪ್ರಗತಿಪರವಾದ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ, ಅದಾದ ನಂತರ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ಪ್ರಥಮವಾಗಿ ಈ ರಾಜ್ಯದಲ್ಲಿ ದಿ: ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿ, ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದಂತಹ ಸಂದರ್ಭದಲ್ಲಿ, ಪ್ರಥಮ ಬಾರಿಗೆ ಈ ರಾಷ್ಟ್ರದಲ್ಲಿ ಹಾವನೂರು ಕಮಿಷನ್ ಅನ್ನು, ಹಿಂದುಳಿದ ವರ್ಗಗಳ ಮೀಸಲಾತಿಯ ವ್ಯವಸ್ಥೆಯ ವಿಷಯದಲ್ಲಿ ಆ ಸಂದರ್ಭದಲ್ಲೇನು ನಿರ್ಣಯವನ್ನು ಮಾಡಿದರು, ಅದರ ಮುಖಾಂತರ ಈ ಒಂದು ರಾಜ್ಯ ಮೀಸಲಾತಿಗೆ ಸಂಬಂಧಪಟ್ಟ ಹಾಗೆ ಇವತ್ತು ಇಡೀ ರಾಷ್ಟ್ರಕ್ಕೆ ಮಾದರಿಯಾಗುವ ರೀತಿಯಲ್ಲಿ, ಹಿಂದಿನ ಹಲವಾರು ಸರ್ಕಾರಗಳು ನಿರ್ಣಯಗಳನ್ನು ತೆಗೆದುಕೊಂಡು ಈ ಮೀಸಲಾತಿಯ ವ್ಯವಸ್ಥೆಗಳ ವಿಷಯದಲ್ಲಿ ಪ್ರಗತಿಪರವಾದ ಚಿಂತನೆಯನ್ನು ಏನು ಮಾಡಿದ್ದೇವೆ, ಇಂತಹ ಒಂದು ಸನ್ನಿವೇಶದಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಮೀಸಲಾತಿಯ ಹೊಸ ಮಾರ್ಪಾಡುಗಳನ್ನು ನಿರ್ಣಯವನ್ನೇನು ಮಾಡಿದ್ದಾರೆ, ಅದಕ್ಕೆ ನಾನು ಬೆಂಬಲವನ್ನು ಸೂಚಿಸುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಈ ಒಂದು ಜಾಗತೀಕರಣ, ಆಧುನೀಕರಣದ ಒಂದು ವ್ಯವಸ್ಥೆಯೊಳಗೆ ಗ್ರಾಮೀಣ ಪ್ರದೇಶಗಳಲ್ಲಿರುವ ಹಲವಾರು ಜನ, ಹಿಂದುಳಿದ ವರ್ಗಗಳಿಗೆ ಸೇರಿರುವ ವಿದ್ಯಾರ್ಥಿಗಳಿಗೆ, ಈ ಒಂದು ಶಿಕ್ಷಣದಲ್ಲಿ ವ್ಯಾಪಾರಿ ಮನೋಭಾವನೆಯನ್ನು ಏನು ನಾವು ಕಾಣುತ್ತಿದ್ದೇವೆ, ಇಂತಹ ಒಂದು ಸಂದರ್ಭದಲ್ಲಿ ಮೀಸಲಾತಿಯನ್ನು ತರುವ ವಿಷಯದಲ್ಲಿ ಇವತ್ತು ನಾವೆಲ್ಲಾ ಹಿಂದುಳಿದ ವರ್ಗಗಳ ಪರವಾಗಿ ಏನು ಕೆಲವು ತೀರ್ಮಾನಗಳನ್ನು ಮಾಡಬೇಕಾಗುತ್ತದೆ, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಂಪೂರ್ಣ ಬೆಂಬಲವನ್ನು ಸೂಚಿಸಲು ಈ ಸದನ ತೀರ್ಮಾನ

ಮಾಡಿ ಸರ್ವಾನುಮತದಿಂದ ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿವಸಗಳಲ್ಲಿ ಸುಪ್ರೀಂ ಕೋರ್ಟ್ ಹಿಂದುಳಿದ ವರ್ಗಗಳ ಕುರಿತು ಏನು ತೀರ್ಪನ್ನು ಕೊಟ್ಟಿದೆ, ಬೇರೆ ಬೇರೆ ರಾಜ್ಯಗಳಲ್ಲಿನ ಸದನಗಳು ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ ಒಂದು ನಿರ್ಣಯವನ್ನು ಮಾಡಿದೆ. ಆ ಬಗ್ಗೆ ಪ್ರಸ್ತಾಪ ಬಂದಾಗ ಸಂಸದೀಯ ವ್ಯವಹಾರಗಳ ಸಚಿವರಾದ ಎಂ.ಪಿ.ಪ್ರಕಾಶ್‌ರವರು, ಮುಖ್ಯಮಂತ್ರಿಗಳೇ ಈ ಒಂದು ನಿರ್ಣಯವನ್ನು ತರುತ್ತಾರೆಂದು ಹೇಳಿದರು. ಇವತ್ತು ಮುಖ್ಯಮಂತ್ರಿಗಳು ನಿರ್ಣಯವನ್ನು ಮೂವ್ ಮಾಡಿದ್ದಾರೆ. ಇವತ್ತು ಕರ್ನಾಟಕ ಸರ್ಕಾರ ಯಾವಾಗಲೂ ಕೂಡ, ಮಹಾರಾಜರ ಕಾಲದಿಂದಲೂ ಕೂಡ, ಈ ಸಮಾಜದಲ್ಲಿರುವ ವ್ಯವಸ್ಥೆ ಏನಿದೆ ಅವರಿಗೆ ಸಹಾಯ ಮಾಡತಕ್ಕಂತಹ ರೀತಿಯಲ್ಲಿ ಮೀಸಲಾತಿಯನ್ನು ಮಾಡಿದೆ ಎನ್ನುವ ಮಾತನ್ನು ಹೇಳಿದರು. Supreme Court ನವರು ಏನು ಈ judgement ಕೊಟ್ಟಿದ್ದಾರೆ, ಅವರು ಪೂರ್ಣವಾಗಿ ತಿರಸ್ಕಾರ ಮಾಡಿಲ್ಲ. ಅವರು ಏನು ಹೇಳಿದ್ದಾರೆ, 1931 census ಪ್ರಕಾರ ನೀವು ಮಾಡಿದ್ದೀರಿ. 76 ವರ್ಷಗಳ ಹಿಂದೆ ಏನು census ಆಗಿತ್ತು, ಆ ಪ್ರಕಾರ ಇದೆ. ಇವತ್ತಿನ ಜನಗಣತಿ ಪ್ರಕಾರ ತಾವು ಮಂಡಿಸಬೇಕೆಂದು ಎನ್ನತಕ್ಕಂತಹ ರೀತಿಯಲ್ಲಿ ಅವರು ಆದೇಶ ಕೊಟ್ಟಿದ್ದಾರೆ. ಇದು 27% reservation ಕೊಡತಕ್ಕಂತಹ ರೀತಿಯಲ್ಲಿ IIM, IIT ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ employees ಗೆ ಸೀಮಿತವಾಗಿ ಇದೆ. ಈಗ ಅವರು ಏನು ಹೇಳಿದ್ದಾರೆ, ಇದರ ಬಗ್ಗೆ latest census ಮಾಡಿ ಎಂದು ತಾತ್ಕಾಲಿಕವಾಗಿ ತಡೆ ಆಜ್ಞೆ ಕೊಟ್ಟಿದ್ದಾರೆ. ಇದರ ಬಗ್ಗೆ ಪಾರ್ಲಿಮೆಂಟಿನಲ್ಲಿ ಬಿಲ್ ಪಾಸಾಗಿದೆ. ಅದಕ್ಕೂ ಮುಂಚೆ ಇದರ ಬಗ್ಗೆ ಬಹಳ ವ್ಯಾಪಕವಾದ ಚರ್ಚೆ ಇಡೀ ರಾಷ್ಟ್ರದಾದ್ಯಂತ ನಡೆದಿದೆ. ಆ ಆಧಾರದ ಮೇಲೆ ಕೊನೆಯಾಗಿ ಸಂಪುಟದ ಸಭೆಯಲ್ಲಿ ತೀರ್ಮಾನವಾಗಿ, ಪಾರ್ಲಿಮೆಂಟ್ ಕೂಡ bill ಗೆ ಅಸ್ತು ಕೊಟ್ಟಿದೆ. ಇವತ್ತು ನಾವು ಏಕೆ ಈ ಬಿಲ್ ತರಬೇಕೆಂದರೆ, ತಮಿಳುನಾಡಿನಲ್ಲಿ ಕೂಡ ಇದರ ವಿಚಾರವಾಗಿ ಚರ್ಚೆಯಾಗಿದೆ. ಅವರೂ ಕೂಡ ಕೇಂದ್ರಕ್ಕೆ ಇಂತಹ ಒಂದು ಸಂದಿಗ್ಧ ಸಮಯದಲ್ಲಿ ನಾವು ಅವರಿಗೆ ಬೆಂಬಲ ವ್ಯಕ್ತ ಮಾಡಬೇಕು. ಅದೇ ರೀತಿಯಾಗಿ ಆಂಧ್ರಪ್ರದೇಶದಲ್ಲಿ ಕೂಡ ಎಲ್ಲ ಪಕ್ಷದವರೂ ಕೂಡಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಇವತ್ತಿನ ದಿವನ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ

ಮನಸ್ಸು ಮಾಡಿ ನೀವೇ resolution move ಮಾಡಿದ್ದೀರಿ. ಇವತ್ತು enormous ಆಗಿ ಈ ಸದನದಲ್ಲಿ ಚರ್ಚೆಯಾದ ಮೇಲೆ, ಈ ಸರ್ಕಾರ ಬದ್ಧವಾಗಿದೆ. ಈಗಾಗಲೇ ಮಾನ್ಯ ಪ್ರಧಾನ ಮಂತ್ರಿಯವರು UPA partners ಜೊತೆಯಲ್ಲಿ ಮಾತುಕತೆ ಮಾಡಿದ್ದಾರೆ. Even BJP ಜೊತೆಯಲ್ಲಿ ಕೂಡ ಮಾತನಾಡಿದ್ದಾರೆ. ಎಲ್ಲರ ಮನವನ್ನು ಒಲಿಸತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆ. ಇಂತಹ ಸಮಯದಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಒಂದು resolution ಏನು ಮೂವ್ ಮಾಡಿದ್ದಾರೆ, ಅದಕ್ಕೆ ನಾನು ಸಮರ್ಥನೆ ಮಾಡುತ್ತಿದ್ದೇನೆ. ಒಂದು ಮಾತು ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಹಾವನೂರು ಕಮಿಷನ್ ಇದೆ, ತದ ನಂತರ ವೆಂಕಟಸ್ವಾಮಿ ಕಮೀಷನ್ ಬಂದಿತು. ತದ ನಂತರ ರವಿ ಕುಮಾರ್ ವರ್ಮರವರ ಕಮೀಷನ್ ಬಂದಿತು. ಇವತ್ತು ರವಿವರ್ಮಕುಮಾರ್‌ರವರು he went to the extent of 63% ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಅದಕ್ಕೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಕೊಡತಕ್ಕಂತಹ ರೀತಿಯಲ್ಲಿ ಮಾನ್ಯ ದೇವರಾಜು ಅರಸುರವರು 8 ವರ್ಷಗಳ ಕಾಲ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಾಗ ಅದಕ್ಕೆ ಹೆಚ್ಚಿನ ಒಂದು ರಕ್ಷಣೆ, ಒಂದು ಬದ್ಧತೆ ಮಾಡತಕ್ಕಂತಹ ರೀತಿಯಲ್ಲಿ ಮಾಡಿದ್ದಾರೆ. ಅದಕ್ಕೆ ನಾವು ಇವತ್ತು ರೆಸಲ್ಯೂಷನ್ ಮೂವ್ ಮಾಡುತ್ತಿದ್ದೇವೆ. Permanent Backward Class Commission constitute ಮಾಡುತ್ತೇವೆ ಎಂದು ಹೇಳಿ ಮೊನ್ನೆ ತಾವು Council ನಲ್ಲಿ ಹೇಳಿದಿರಿ. ಇವತ್ತು 10 ವರ್ಷಗಳಿಗೊಮ್ಮೆ ಜನಗಣತಿ ಸರ್ವೆ ಆಗುತ್ತಿದೆ. ಈ ಸರ್ವೆ ಆಗಲಿಕ್ಕೆ ಕೇಂದ್ರ ಸರ್ಕಾರ 21 ಕೋಟಿ ರೂಪಾಯಿಗಳನ್ನು ಕೊಟ್ಟು, ಈಗಾಗಲೇ ಏಳು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ರಾಜ್ಯ ಸರ್ಕಾರವು ಕೂಡ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ತಾವು immediate ಆಗಿ Permanent Backward Class Commission constitute ಮಾಡಿ ಇದರ ಕೆಲಸವನ್ನು ಕೂಡ ಪ್ರಾರಂಭ ಮಾಡಬೇಕು. ಇದೆಲ್ಲಾ ಆದರೆ ಇಂತಹ ಪರಿಸ್ಥಿತಿ ನಿಮಗೆ ಉದ್ಭವವಾಗುವುದಿಲ್ಲ. ಅದಕ್ಕೋಸ್ಕರ ನಾನು ತಮಗೆ ಕೇಳಿಕೊಳ್ಳುತ್ತಿದ್ದೇನೆ ಇದನ್ನು ಮಾಡಲೇಬೇಕಾಗಿದೆ, ರಾಜ್ಯದ ಹಿತದೃಷ್ಟಿಯಿಂದ ಏನು ಜನ ಯಾರು Social Justice ಗೆ ಇವತ್ತು ಅರ್ಹರಾಗಿದ್ದಾರೆ, ಯಾರಿಗೆ ನಾವು ಮೇಲೆ ಎತ್ತತಕ್ಕಂತಹ ಪ್ರಯತ್ನ ಮಾಡಬೇಕಾಗಿದೆ, ಅದು ನಮ್ಮ Politic

Philosophy ಅಲ್ಲ, ಎಲ್ಲ ಪಕ್ಷದ ಜನರ ಮನೋಭಾವನೆ ಇದೆ. ಇಂತಹ ವಿಚಾರದಲ್ಲಿ ತಾವು ಇಂತಹ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಬೇರೆ ಸಮಸ್ಯೆಗಳ ಬಗ್ಗೆ ಏನು ವಿಚಾರ ಮಾಡುತ್ತಿದ್ದೀರಿ, ಅದಕ್ಕೆ ಹೆಚ್ಚಿನ ರೀತಿಯಲ್ಲಿ Permanent Backward Class Commission ಮಾಡತಕ್ಕಂಥದ್ದು ಒಂದು, ಕೊಟ್ಟಂತಹ ದುಡ್ಡು ಏನಾಯಿತು?, ಅಧ್ಯಕ್ಷರೆ ಏಳು ಕೋಟಿ ರೂಪಾಯಿಗಳು ಬಿಡುಗಡೆ ಮಾಡಿದ್ದಾರೆ, 21 ಕೋಟಿ ರೂಪಾಯಿ ಇದಕ್ಕಾಗಿ ಮೀಸಲಾಗಿಟ್ಟಿದ್ದಾರೆ. ಇವತ್ತು ನಾವು ಏನು ಮಾಡಬೇಕಾಗಿದೆ, ಅದು ಅವರಿಗೆ establishment ಗೆ ಖರ್ಚಾಗುತ್ತಿದೆ. ಕೆಲಸ ಆಗುತ್ತಿಲ್ಲ. ಅದರ ಬಗ್ಗೆ ಕೂಡ ತಾವು ಗಮನ ಕೊಡಬೇಕು. ಈ ಸಂದರ್ಭದಲ್ಲಿ ತಾವು ಏನು resolution move ಮಾಡಿದ್ದೀರಿ, ನಾನು ಕೂಡ ಅದಕ್ಕೆ ಅನುಮೋದನೆ ಮಾಡುತ್ತಿದ್ದೇನೆ. ಚರ್ಚೆ ಆದ ನಂತರ adopt ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ, ಇವತ್ತು ಪ್ರಧಾನಮಂತ್ರಿಗಳು ಏನು initiative ತೆಗೆದುಕೊಂಡಿದ್ದಾರೆ, ಬಹಳಷ್ಟು ಮುಂದೆ ಹೋಗಿ ಕೂಡ ಮಾತನಾಡಿದ್ದಾರೆ. Social Justice ಗೆ ಅಡ್ಡ ಬರತಕ್ಕಂತಹ ಈ ಒಂದು ತೀರ್ಪುಗಳು ಏನಿವೆ, ಇದನ್ನು ಯಾವ ರೀತಿಯಿಂದ ಬಗೆಹರಿಸಬೇಕೆಂದು ಕೂಡ Prime Minister has taken lot of initiative. ಇಂತಹ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯು ಇವತ್ತಿನ ಈ ಒಂದು resolution ನಿಂದ ಸಹಾಯವಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಮುಖ್ಯ ಮಂತ್ರಿಗಳು 27% ಮೀಸಲಾತಿ ಏನು ಕೇಂದ್ರ ಸರ್ಕಾರದ IIM, IIT, ಮತ್ತು Medical ಇಂತಹ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರಲಿಕ್ಕೆ ಏನು ಪ್ರಯತ್ನ ನಡೆಯಿತು, ಅದರ ಬಗ್ಗೆ Supreme Court ಒಂದು ನಿರ್ಣಯ ಮಾಡಿ, Basic principle of Reservation ಬಗ್ಗೆ ಅವರು ವಿರೋಧ ಮಾಡಿಲ್ಲ. ಆದರೆ ಅವರು 1931ನೇ ಇಸವಿಯಲ್ಲಿ ಏನು sample survey ಆಯಿತು, ಆ ಆಧಾರದ ಮೇಲೆ ಕೊಡುವುದು ಸರಿ ಏನು ಎಂದು ಒಂದು ನಿರ್ಣಯಕ್ಕೆ ಒಂದು stay ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಇದಕ್ಕೆ ಬೆಂಬಲ ಕೊಡುತ್ತಾ, ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಸಹ ಈ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಟ್ಟು, ಒಂದೆರಡು

ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಕರ್ನಾಟಕ ಪರಿಶಿಷ್ಟ ಜಾತಿ ಜನಾಂಗ ಇರಬಹುದು, ಹಿಂದುಳಿದ ಜನಾಂಗ ಇರಬಹುದು, ಅಲ್ಪ ಸಂಖ್ಯಾತರು ಇರಬಹುದು, ಇವರಿಗೆ ಎಲ್ಲಾ ರೀತಿಯ ಉತ್ತೇಜನ ಮತ್ತು ಮೀಸಲಾತಿ ಕೊಡಲಿಕ್ಕೆ ಯಾವಾಗಲೂ ಅದು ಅನುಷ್ಠಾನದಲ್ಲಿದೆ. ಮೈಸೂರು ಮಹಾರಾಜರ ಕಾಲದಿಂದ ಇದು ನಡೆಯುತ್ತಾ ಬಂದಿದೆ. ಹಾಗಾಗಿ ಸಾಮಾಜಿಕ ನ್ಯಾಯ ಎಂದರೆ ಇದು ಕೇವಲ, ಶಾಸನ ಸಭೆಯಲ್ಲಿ ಕೊಡುವುದು ಅಲ್ಲ. ಸಾಮಾಜಿಕ ನ್ಯಾಯ ಕೋರ್ಟಿನಲ್ಲಿ depressed classes ಗೆ unprivileged classes ಗೆ ಸಿಗಬೇಕಾಗುತ್ತದೆ. ಹಾಗಾಗಿ ಈ ನಿರ್ಣಯವನ್ನು Supreme Court ಮಾಡಿದೆ. ಒಂದು ದೃಷ್ಟಿಯಿಂದ ಇದು ಒಂದು ಆಘಾತ. ಇದು ಒಂದು ಸೆಟ್ ಬ್ಯಾಕ್ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಇಂದಿರಾ ಸಹಾನಿ ಕೇಸ್‌ನಲ್ಲಿ Nine Judge Bench ಒಂದು ನಿರ್ಣಯ ಮಾಡಿ employment ದಲ್ಲಿ 27% reservation ಕೊಡಬೇಕೆಂದು ಒಂದು ನಿರ್ಣಯ ಮಾಡಿದ್ದಾರೆ. ಈಗ ಏನು ಎರಡು ದಿವಸಗಳ ಹಿಂದೆ ನಿರ್ಣಯವಾಯಿತು, ಅದು ಸರಿ ಏನು, ಅದರ ಬಗ್ಗೆ ಸಹ ಒಂದು ಚಿಂತನೆ ನಡೆಯಬೇಕಾಗಿದೆ. ನಮ್ಮ ಸಂವಿಧಾನದ ಪ್ರಕಾರ, ಹಿಂದುಳಿದ ಜನಾಂಗದವರಾಗಿರಬಹುದು, ಅಲ್ಪಸಂಖ್ಯಾತರಾಗಿರಬಹುದು, ಪರಿಶಿಷ್ಟ ಜಾತಿ ಜನಾಂಗದವರಿರಬಹುದು, depressed classes ಇರಬಹುದು, ನಾವು ಅವರಿಗೇನು ಅಧಿಕಾರ ಕೊಟ್ಟಿದ್ದೇವೆ, ಆ ಅಧಿಕಾರ ನ್ಯಾಯಬದ್ಧವಾಗಿ ಅವರಿಗೆ ಸಿಗಬೇಕಾಗಿದೆ. ಆ ದೃಷ್ಟಿಯಿಂದ ಇವತ್ತು ಈ ಸದನದಲ್ಲಿ ಏನು ನಿರ್ಣಯವನ್ನು ಮಂಡಿಸಿದ್ದಾರೆ, ಅದು ಒಂದು ಐತಿಹಾಸಿಕ. ಅದು ಯೋಗ್ಯವಾದ ನಿರ್ಣಯವೆಂದು ನಾನು ಭಾವಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, Kaka Kalelkar ಕಮೀಷನ್, 1953ನೇ ಇಸವಿಯಲ್ಲಿ ಆಯಿತು. ಅದರ ವರದಿ ಜಾರಿಯಲ್ಲಿ ಬಂದಿಲ್ಲ. ಅದರ ನಂತರ 24 ವರ್ಷಗಳ ನಂತರ ಮಂಡಲ್ ಕಮಿಷನ್ 1979ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಆ ಮಂಡಲ್ ಕಮಿಷನ್ 3,743 caste ಗಳು OBC ಎಂದು ಗುರುತಿಸಿದ್ದರು. ಮತ್ತು OBC population 52% ಎಂದು ಅವರು ಗುರುತಿಸಿದ್ದರು. ಕೇಂದ್ರ ಸರ್ಕಾರ ಈ ಕಮೀಷನ್ ವರದಿಯನ್ನು 13-8-1990 ನೇ ಇಸವಿಯಲ್ಲಿ ಜಾರಿಗೆ ಸಹ ಬಂದಿತು. ಅದರ ನಂತರ ಇಂದಿರಾ ಸಹಾನಿ ಕೇಸ್ ಬಂದಿತು. ಅದು ಛಾಲೆಂಜ್ ಆಯಿತು. ಮಂಡಲ್ ಕಮೀಷನ್ ವರದಿ ಏನು ಕೊಟ್ಟಿದ್ದಾರೆ, ಅದು ಸರಿ ಇದೆ. ಕೇಂದ್ರ ಸರ್ಕಾರ ಏನು ಜಾರಿಗೆ ತಂದಿತು, ಅದು ಸರಿ ಏನೋ ಎಂದು ನಿರ್ಣಯವಾದಾಗ,

ಆ ನಿರ್ಣಯ challenge ಆದಾಗ, ಇಂದಿರಾ ಸಹಾನಿ ಕೇಸ್‌ನಲ್ಲಿ Nine Judge Bench ನಡೆಯಿತು, ಏನು ಮಂಡಲ್ ಕಮೀಷನ್ ಮಾಡಿದ್ದಾರೆ. ಅದು ಸರಿ ಇದೆ. ಹಾಗಾಗಿ ಇವತ್ತಿನ ಪರಿಸ್ಥಿತಿಯಲ್ಲಿ ಏನು Supreme Court ನಿಂದ judgement ಬಂದಿದೆ, ನಿಜವಾಗಿಯೂ ಆಶ್ಚರ್ಯವಾಗುತ್ತದೆ. In principle ಅವರು reservation ವಿರುದ್ಧ ಹೇಳಿಲ್ಲ. ಹಾಗಾಗಿ ನಮಗೇನು ಕಾಣಿಸುತ್ತದೆ, ಕೇಂದ್ರ ಸರ್ಕಾರ ಈಗಾಗಲೇ, ಸಾಕಷ್ಟು ಕ್ರಮ ತೆಗೆದುಕೊಂಡಿದೆ. ಇದನ್ನು ನಾವು ಪತ್ರಿಕೆ ಮುಖಾಂತರ ಸಹಾ ನೋಡಿದ್ದೇವೆ. ಅವರಿಗೆ review ಗೆ ಹಾಕಲಿಕ್ಕೂ ಅವಕಾಶ ಇದೆ. ಅಥವಾ larger Bench ಗೆ ಹೋಗಲಿಕ್ಕೂ ಅವಕಾಶ ಇದೆ. ಅಥವಾ Constitutional amendment ಮಾಡಲಿಕ್ಕೂ ಅವಕಾಶವಿದೆ. ಹಾಗಾಗಿ ನಾವು ಕೇಂದ್ರ ಸರ್ಕಾರದ ಕೈಯನ್ನು ಬಲಪಡಿಸಬೇಕಾಗಿದೆ. ಪಕ್ಷಾತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳು ಇದಕ್ಕೆ ಬೆಂಬಲ ಕೊಡುತ್ತಿದ್ದಾರೆ. ಹಾಗಾಗಿ ಈ ನಿರ್ಣಯ ನಾವೇನು ಮಾಡಿದ್ದೇವೆ, ನಾನು ಈಗಾಗಲೇ ಹೇಳಿದ ಹಾಗೆ ಇದು ಒಂದು ಐತಿಹಾಸಿಕ ನಿರ್ಣಯ. ಸಂವಿಧಾನದಲ್ಲಿ ಅವರಿಗೆ 27% ಕೊಡಬೇಕು, 40% ಕೊಡಬೇಕು ಅಥವಾ 50% ಕೊಡಬಾರದು ಎಂದು ಎಲ್ಲಿಯೂ ಇಲ್ಲ. ಸಾಮಾಜಿಕ ನ್ಯಾಯ ಕೊಡುವಾಗ ಪ್ರತಿಯೊಂದು ಪರಿಸ್ಥಿತಿ ನೋಡಿ, ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ಹಿಂದುಳಿದ ಜನಾಂಗ ಇವತ್ತು ಬಡತನದಿಂದ ಇರಬಹುದು, ಮತ್ತು ಸರಿಯಾದ ಅವಕಾಶ ಇಲ್ಲದೇ ಶಿಕ್ಷಣ ವ್ಯವಸ್ಥೆಯಲ್ಲಿ ಏನು ರಿಸರ್ವೇಷನ್ ಕೊಟ್ಟಿದ್ದೇವೆ, ಇದು ಒಂದು land mark.

ಕೇಂದ್ರ ಸರ್ಕಾರ ಮೆರಿಟ್ಸ್ ಇರುವವರಿಗೆ ತೊಂದರೆಯಾಗಬಾರದೆಂದು ಹೇಳಿ ಇನ್‌ಫ್ರಾಸ್ಟ್ರಕ್ಚರ್, ಮೂಲಭೂತ ಸೌಕರ್ಯಗಳನ್ನು ಈ ಎಲ್ಲಾ Educational Institutions ಗಳಲ್ಲಿ ಭರಿಸುವುದಕ್ಕಾಗಿ 17 ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಮಂಜೂರು ಮಾಡಿದ್ದಾರೆ. ಅಷ್ಟೇ ಅಲ್ಲ, ಪ್ರೊಫೆಸರ್ಸ್ ಅಂದರೆ ಒಳ್ಳೆಯ ಫ್ಯಾಕಲ್ಟೀಸ್ ಸಿಗುವುದು ಬಹಳ ಕಷ್ಟವಿದೆ. ಹೀಗಾಗಿ retirement age limit ಹೆಚ್ಚು ಮಾಡಿದ್ದಾರೆ. ಇನ್‌ಟೇಕ್ ಹೆಚ್ಚು ಮಾಡಿದ್ದಾರೆ, ಮೆರಿಟ್ ಸ್ಟೂಡೆಂಟ್ಸ್‌ಗೆ ತೊಂದರೆಯಾಗಬಾರದೆಂದು. ಇಂಥ ಪರಿಸ್ಥಿತಿ ಇದ್ದು, ನನಗೆ ಕಾಣುತ್ತದೆ, ಇವತ್ತು ಕೇಂದ್ರ ಸರ್ಕಾರ ಏನು ನಿರ್ಣಯವನ್ನು ಮಾಡಿದೆ, ಅದಕ್ಕೆ ನಾವೆಲ್ಲರೂ ನಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಡಬೇಕಾಗಿದೆ. ಇವತ್ತು ನಮ್ಮ ಪ್ರಧಾನ ಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. Let us not

go into confrontation. ಜ್ಯುಡಿಶಿಯರಿಯಾಗಲಿ, ಎಕ್ಸಿಕ್ಯುಟಿವ್ ಆಗಲಿ ಅಥವಾ ಲೆಜಿಸ್ಲೇಚರ್ ಆಗಲಿ confrontation ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಪ್ರಜಾಪ್ರಭುತ್ವ ಬಲಪಡಿಸಬೇಕಾದರೆ ಎಲ್ಲರೂ complementary ಯಾಗಿ ಹೋಗಬೇಕಾಗುತ್ತದೆ. ಹೀಗಾಗಿ Prime Minister ರವರು don't cross the limit ಎಂದು ಹೇಳಿದ್ದಾರೆ. ಅದು ಈ ಸಂದರ್ಭದಲ್ಲಿ ಬಹಳ ಸೂಕ್ತವೆಂದು ನನಗೆ ಕಾಣಿಸುತ್ತದೆ. ಇನ್ನು ಇವತ್ತು ಈ fresh survey ಮಾಡಿ ಬರಬೇಕಾದರೆ ಸಾಕಷ್ಟು ಸಮಯವಾಗಬಹುದು. ಹೀಗಾಗಿ ನನಗೆ ಬಂದ ಮಾಹಿತಿ ಪ್ರಕಾರ ಈಗಾಗಲೇ scientifically ತಯಾರು ಮಾಡಿಸಿದ volumes of data ಇದೆ. ಇದರ ಬಗ್ಗೆ ಮಂಡಲ್ ಕಮೀಷನ್‌ನಲ್ಲಿಯೂ ಸಹ details ಇದೆ, ಮತ್ತು ಆ calculation ಬಗ್ಗೆ ಈ scientific analysis, backward class castes ಎಷ್ಟು ಇವೆ ಮತ್ತು population ಎಷ್ಟು ಇವೆ ಎನ್ನುವುದರ ಬಗ್ಗೆ ಸಾಕಷ್ಟು ಬೆಳಕನ್ನು ಪ್ರೊ.ಎಂ.ಎನ್. ಶ್ರೀನಿವಾಸ್‌ರವರು ಚೆಲ್ಲಿದ್ದಾರೆ. ಅದೇ ಪ್ರಕಾರ ಈ National Sample Survey Organization ಮತ್ತು National Family Health Survey and Mandal Commission ಸಹ ಇದರ ಬಗ್ಗೆ ಸಾಕಷ್ಟು scientifically survey ಮಾಡಿದ್ದಾರೆ. ಇದಲ್ಲದೇ ಸಾಕಷ್ಟು data volumes ಇಂಥವುಗಳು available ಇವೆ. ಆ volumes ಗಳನ್ನು ಇವತ್ತು ಸುಪ್ರೀಂಕೋರ್ಟ್ ಪರಿಗಣಿಸಿ ಇವೊತ್ತು O.B.C.ಗಳಿಗೆ 27% reservation ಅನ್ನು Higher Education ಗೆ ಏನು ಕೊಟ್ಟಿದೆ, ಅದಕ್ಕೆ ಮಾನ್ಯತೆ ಕೊಡಬೇಕಾಗುತ್ತದೆ. ಅದಕ್ಕಾಗಿ ನಾವೆಲ್ಲರೂ ಕೇಂದ್ರ ಸರ್ಕಾರದೊಡನೆ ಕೈಜೋಡಿಸುವುದಕ್ಕೆ ಎಲ್ಲಾ ರೀತಿಯ ಸಲಹೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯವನ್ನು ಮಂಡಿಸಿದ್ದಾರೆ, ಅದಕ್ಕೆ ಬೆಂಬಲವನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರ) :- ಮಾನ್ಯ ಅಧ್ಯಕ್ಷರೆ, ಸರ್ಕಾರ ತಂದಿರತಕ್ಕಂಥ ನಿರ್ಣಯ ಏನಿದೆ, ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಕೇಂದ್ರ ಸರ್ಕಾರ ಐ.ಐ.ಟಿ., ಐಐಎಂ, ಐ.ಐ.ಎಸ್.ಸಿ. ಮತ್ತು ಈ ರೀತಿಯ ಇನ್ನಿತರ Higher learning Institution ಗಳಲ್ಲಿ ಹಿಂದುಳಿದ ಜಾತಿಯ ಮಕ್ಕಳಿಗೂ ಕೂಡ ಮೀಸಲಾತಿಯನ್ನು ಅಲ್ಲಿಯೂ ಕೂಡ ಕಲ್ಪಿಸಬೇಕೆಂದು ಸಂವಿಧಾನ ತಿದ್ದುಪಡಿ ಮಾಡಿ ಅದಕ್ಕೆ ಬೇಕಾದಂಥ ಕಾನೂನನ್ನು ರಚನೆ ಮಾಡಿ ಈ ಅಕಾಡೆಮಿಕ್

ಇಯರ್‌ನಿಂದ ಅಂದರೆ 2007–2008 ರಿಂದಲೇ ಶೇಕಡ 27 ರಷ್ಟು ಮೀಸಲಾತಿಯನ್ನು ಹಿಂದುಳಿದ ಜಾತಿಯವರಿಗೆ ಈ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯುನ್ನು ಕಲ್ಪಿಸಬೇಕೆಂದು ತೀರ್ಮಾನ ಮಾಡಿ ಅದಕ್ಕೆ ಬೇಕಾದಂಥ ಎಲ್ಲ ಸಂವಿಧಾನಾತ್ಮಕವಾದ ಕ್ರಮಗಳನ್ನು ಕೇಂದ್ರ ಸರ್ಕಾರದ ಯು.ಪಿ.ಎ. ಸರ್ಕಾರ ತೆಗೆದುಕೊಂಡಿದೆ. ಇದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದಾರೆ. Central Educational Institutions (Reservation in Admissions) 2006 Act ಎಂದು ಮಾಡಿ ಅದರ ಕೆಳಗಡೆ ಅಡ್ಮಿಶನ್ಸ್‌ಗೆ ಅವಕಾಶ ಮಾಡಿಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ತಾತ್ಕಾಲಿಕ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್‌ನವರು ಕೊಟ್ಟಿದ್ಧಾರೆ. ಇದು ಹಿಂದುಳಿದ ಜಾತಿಯವರಿಗೆ ಏನು ಅಲ್ಲಿ ಅವಕಾಶವನ್ನು ಉನ್ನತ ಶಿಕ್ಷಣದ ಶಿಕ್ಷಣ ಸಂಸ್ಥೆಗಳಲ್ಲಿ ಕೊಡಬೇಕು ಎನ್ನತಕ್ಕಂಥ ರಾಜ್ಯಾಂಗದ ಉದ್ದೇಶವೇನಿದೆ, ಅದನ್ನು ಜಾರಿಗೆ ಕೊಡತಕ್ಕಂಥ ಪ್ರಯತ್ನವನ್ನು ಏನು ಕೇಂದ್ರ ಸರ್ಕಾರ ಸಂವಿಧಾನ ಬದ್ಧವಾಗಿ ಮಾಡಿದೆ. ಅದಕ್ಕೆ ಒಂದು ದೊಡ್ಡ ಹೊಡೆತವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ಅವಕಾಶದಿಂದ ವಂಚಿತದವರಿಗೆ ಮೀಸಲಾತಿಯನ್ನು ಕೊಡಬೇಕು. ಯಾರಿಗೆ ಇದುವರೆಗೆ ಅವಕಾಶಗಳು ಸಿಕ್ಕಿಲ್ಲ ಮತ್ತು ಅವಕಾಶದಿಂದ ವಂಚಿತರಾಗಿದ್ದಾರೆ... ಇದಕ್ಕೆ ಐತಿಹಾಸಿಕ ಕಾರಣಗಳಿವೆ, ಈಗ ಅದೆಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಐತಿಹಾಸಿಕ ಕಾರಣಗಳಿಂದ ಬಹಳಷ್ಟು ಜನ ಈ ಸಮಾಜದಲ್ಲಿ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು, ಬೇರೆ ಬೇರೆ ಸವಲತ್ತುಗಳಿಂದ ವಂಚಿತರಾಗಿದ್ದರು, ಶಿಕ್ಷಣ ಪಡೆಯತಕ್ಕಂಥ ಅವಕಾಶಗಳಿರಲಿಲ್ಲ. ಇವೆಲ್ಲಾ ಕಾರಣಗಳಿಂದ ಸಮಾಜದಲ್ಲಿ ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ಅಸಮಾನತೆ ನಿರ್ಮಾಣವಾಯಿತು. ಇದರ ಬಗ್ಗೆ ಕರ್ನಾಟಕದಲ್ಲಿ ಚರ್ಚೆ ಬಹಳ ವರ್ಷಗಳಿಂದ ನಡೆದಿದೆ. ಇವತ್ತೇನೂ ಅಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿಯೂ ಕೂಡ ಮಿಲ್ಲರ್ ಆಯೋಗ ರಚನೆ ಮಾಡಿ ಅದರ ಪ್ರಕಾರ ಬ್ರಾಹ್ಮಣರಿಗೆ ಮತ್ತು ಬ್ರಾಹ್ಮಣೇತರಿಗೆ ಮೀಸಲಾತಿಯನ್ನು ಕೊಡಬೇಕೆಂದು ಅವತ್ತೇ ಕರ್ನಾಟಕದಲ್ಲಿ ತೀರ್ಮಾನವಾಯಿತು. ಅಂದರೆ 1910–20ನೇ ಇಸವಿಯುಲ್ಲಿ ಅವತ್ತೇ ತೀರ್ಮಾನವಾಯಿತು. ಅಂದರೆ ಕರ್ನಾಟಕದಲ್ಲಿ ಮೀಸಲಾತಿ ಎನ್ನತಕ್ಕಂಥದ್ದು, ಈ ಮೀಸಲಾತಿಯನ್ನು ಅವಕಾಶದಿಂದ ವಂಚಿತರಾದವರಿಗೆ ಕೊಡಬೇಕೆಂಬುದಕ್ಕೆ ಸಂಬಂಧಪಟ್ಟಂತೆ ಕರ್ನಾಟಕದಲ್ಲಿ ದೊಡ್ಡ ಇತಿಹಾಸವೇ ಇದೆ. ಅದಾದ ಮೇಲೆ ಅನೇಕ ಆಯೋಗಗಳೂ ಬಂದಿವೆ. ನಾಗನಗೌಡರ ಆಯೋಗವಾಯಿತು, ಅದಾದ

ಮೇಲೆ ಹಾವ್‌ನೂರ್ ಆಯೋಗವಾಯಿತು, ವೆಂಕಟಸ್ವಾಮಿಯವರ ಆಯೋಗವಾಯಿತು, ಚಿನ್ನಪ್ಪರೆಡ್ಡಿಯವರ ಆಯೋಗವಾಯಿತು. ಹೀಗೆ ಅನೇಕ ಆಯೋಗಗಳು ಕರ್ನಾಟಕದಲ್ಲಿ ಆಗಿವೆ. ಈ ಆಯೋಗಗಳೆಲ್ಲಾ ವರದಿಗಳನ್ನು ಕೊಟ್ಟಿದ್ದಾರೆ. ಆ ವರದಿಗಳ ಮೇಲೆ ಸರ್ಕಾರ ಕ್ರಮಗಳನ್ನೂ ಕೂಡ ತೆಗೆದುಕೊಂಡಿವೆ. ಹೀಗಾಗಿ ಹಿಂದುಳಿದ ಜಾತಿಯವರಿಗೆ ಮೀಸಲಾತಿಯನ್ನು ಕೊಡಬೇಕು. ಹಿಂದುಳಿದ ಜಾತಿಯವರಿಗೆ ಮೀಸಲಾತಿಯನ್ನು ಕೊಡಬೇಕು ಎನ್ನತಕ್ಕಂಥದ್ದನ್ನು ರಾಜ್ಯಾಂಗದಲ್ಲಿಯೇ ನಾವು ಒಪ್ಪಿಕೊಂಡಿರತಕ್ಕಂಥ ವಿಚಾರ. ಡಾ|| ಅಂಬೇಡ್ಕರ್‌ರವರ ನೇತೃತ್ವದಲ್ಲಿ ರಾಜ್ಯಾಂಗ ಏನು ರಚನೆಯಾಯಿತೋ ಅದರಲ್ಲಿಯೇ ಬಹಳ ಸ್ಪಷ್ಟವಾಗಿ ಪ್ರಿಯಾಂಬಲ್‌ನಲ್ಲಿಯೇ ಹೇಳಿಬಿಟ್ಟಿದ್ದಾರೆ. Constitution ensures to all citizens of the country, justice, equality, liberty. ಇವುಗಳನ್ನು ಅಚೀವ್ ಮಾಡುವುದಕ್ಕೋಸ್ಕರವಾಗಿ, ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವುದಕ್ಕೋಸ್ಕರವಾಗಿ, ಇವತ್ತು ಯಾವ ಜನರು ಸಮಾಜದಲ್ಲಿ dis-advantageous section ನಲ್ಲಿ ಇದ್ದಾರೆ, ಆ section ಜನರಿಗೆ ಇವತ್ತು ಪ್ರಿಫರೆನ್‌ಶಿಯಲ್ ಟ್ರೀಟ್‌ಮೆಂಟ್‌ನ್ನು ಕೊಡಬೇಕು. Affirmative actions ಗಳ ಮೂಲಕ ನಾವು ಅವರಿಗೆ ಮೀಸಲಾತಿಯನ್ನು ಕೊಟ್ಟು ಅವರನ್ನೂ ಕೂಡ ಸಮಾಜದ ಮುಖ್ಯ ವಾಹಿನಿಗೆ ತರಬೇಕು. ಇಲ್ಲದಿದ್ದರೆ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ಇವರಗೆ ಸಾಮಾಜಿಕ ನ್ಯಾಯವನ್ನು ಕೊಡಬೇಕೆಂದು ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಬಹಳ ಸ್ಪಷ್ಟವಾಗಿ Constitution ನಲ್ಲಿ ಇದೆ. Article 16, Article 15, ಇವು ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತವೆ. Article 16 ನಲ್ಲಿ ಎಂಪ್ಲಾಯ್‌ಮೆಂಟ್‌ನಲ್ಲಿ ಇವರಿಗೆ ಮೀಸಲಾತಿಯನ್ನು ಕೊಡಬೇಕೆನ್ನುವ ಮಾತನ್ನು ಹೇಳಲಾಗಿದೆ. Article 15 ನಲ್ಲಿ ಶಿಕ್ಷಣದಲ್ಲಿ ಇವರಿಗೆ ಮೀಸಲಾತಿಯನ್ನು ಕೊಡಬೇಕೆನ್ನುವ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, 1950ನೆಯ ಇಸವಿ ಜನವರಿ 26ನೆಯ ತಾರೀಖು Constitution ಜಾರಿಗೆ ಬಂದಾಗ Article 15 clause 4 ಇರಲಿಲ್ಲ. ಮೊದಲನೆಯ ಬಾರಿ Constitution ತಂದಾಗ ಜಾರಿಗೆ ಬರಲಿಲ್ಲ. ಅದು ಚಂಪಕಂ ದೊರೈ ರಾಜ್ ಕೇಸ್‌ನಲ್ಲಿ ವಿರುದ್ಧ ಆದಾಗ, ಸಾಮಾಜಿಕ ನ್ಯಾಯಕ್ಕೆ ಹೊಡೆತ ಬಿದ್ದಾಗ, ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಅಡ್ಮಿಶನ್ ಕೊಡುವುದಕ್ಕೆ ಆಗುವುದಿಲ್ಲವೆಂದು ಚಂಪಕಂ ದೊರೈ ರಾಜ್ ಕೇಸ್‌ನಲ್ಲಿ ಹೇಳಿದಾಗ ಅದನ್ನು

ನಲ್ಲಿಫೈ ಮಾಡುವುದಕ್ಕೋಸ್ಕರವಾಗಿ ಅಂಬೇಡ್ಕರ್‌ರವರು ಬದುಕಿರುವಾಗಲೇ ಪಾರ್ಲಿಮೆಂಟ್‌ನಲ್ಲಿ Constitution ಗೆ 1951ನಲ್ಲಿ ಮೊದಲನೆಯ ತಿದ್ದುಪಡಿಯನ್ನು ತರುತ್ತಾರೆ. ಈ ರೀತಿ ತಿದ್ದುಪಡಿ ತೆಗೆದುಕೊಂಡು ಬಂದು ಚಂಪಕಂ ದೊರೈ ರಾಜ್ ಕೇಸ್‌ನಲ್ಲಿ ಏನು ಜಡ್ಜ್‌ಮೆಂಟ್ ಬಂದಿತ್ತು, ಆ ಜಡ್ಜ್‌ಮೆಂಟ್ ಹಿಂದುಳಿದ ವರ್ಗದವರಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಗೊತ್ತಾದಮೇಲೆ ಕೇಂದ್ರ ಸರ್ಕಾರದಲ್ಲಿ ಆಗ ಅಂಬೇಡ್ಕರ್‌ರವರು ಕಾನೂನು ಸಚಿವರಾಗಿದ್ದರು. ಆಗ ಅವರು ಮೊದಲನೆಯ ತಿದ್ದುಪಡಿಯನ್ನು Constitution ಗೆ ತೆಗೆದುಕೊಂಡು ಬರುತ್ತಾರೆ. 1951ರಲ್ಲಿ Constitution ಅದೇ ಮೊದಲನೆಯ ತಿದ್ದುಪಡಿ. 1951ರಲ್ಲಿ Article 15 clause 4 add ಆಗುತ್ತದೆ. For the first time in the country, clause 4 add ಆಗುತ್ತದೆ. ಅದರ ಪ್ರಕಾರ ಕೇಂದ್ರ ಸರ್ಕಾರ ನಡೆಸುತ್ತಿರತಕ್ಕಂಥ ಶಿಕ್ಷಣ ಸಂಸ್ಥೆಗಳಿರಬಹುದು, ರಾಜ್ಯ ಸರ್ಕಾರ ನಡೆಸುತ್ತಿರತಕ್ಕಂಥ ವಿದ್ಯಾ ಸಂಸ್ಥೆಗಳೇ ಇರಬಹುದು, ರಾಜ್ಯ ಸರ್ಕಾರದಿಂದ ಅನುದಾನದಿಂದ ನಡೆಸುತ್ತಿರತಕ್ಕಂಥ ವಿದ್ಯಾ ಸಂಸ್ಥೆಗಳಲ್ಲೇ ಇರಬಹುದು. ಇವುಗಳೆಲ್ಲದರಲ್ಲಿಯೂ ಕೂಡ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಡಬೇಕೆಂದು ಮೊದಲನೆಯ ತಿದ್ದುಪಡಿಯನ್ನು ಏನು ಸಂವಿಧಾನಕ್ಕೆ ತೆಗೆದುಕೊಂಡು ಬಂದರು. ಆಗ ಸಂವಿಧಾನದಲ್ಲಿ ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ.

(1–00 ಘಂಟೆ)

56 ವರ್ಷಗಳಾಯಿತು. ಈ 56 ವರ್ಷಗಳ ನಂತರ ಈ ವರ್ಷ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. 1956ನೇ ಇಸವಿಯಲ್ಲಿ ತಿದ್ದುಪಡಿಯಾದರೂ ಕೂಡ 2007–08ರವರೆಗೆ ಅವರಿಗೆ ಮೀಸಲಾತಿ ಕೊಡಬೇಕು ಎಂದು ತೀರ್ಮಾನವಾಗಲಿಲ್ಲ. ಇದು ಒಂದು ಭಾಗ. ಕೇಂದ್ರ ಸರ್ಕಾರದಲ್ಲಿ ಕೂಡ ಕೇಂದ್ರ ಸರ್ಕಾರ ಕೊಡತಕ್ಕಂಥ ಕೆಲಸಗಳಲ್ಲಿ, ನಡೆಯತಕ್ಕಂಥ reservation ಗಳಲ್ಲಿ ಮೀಸಲಾತಿ ಕೊಡಬೇಕು ಎನ್ನುವ ಬಗ್ಗೆ ಚರ್ಚೆಯಾಗಿ ಮೊದಲನೇ ತಿದ್ದುಪಡಿ Constitution ಗೆ ಆದಮೇಲೆ 1953ರಲ್ಲಿ ಕಾಕಾ ಕಾಲೇಲ್‌ಕರ್‌ರವರ ಆಯೋಗ ರಚನೆಯಾಯಿತು. ಕಾಕಾ ಕಾಲೇಲ್‌ಕರ್‌ರವರು 1955 ರಲ್ಲಿ ವರದಿಯನ್ನು ಕೊಡುತ್ತಾರೆ. ಆದರೆ ಹಿಂದುಳಿದ ಜಾತಿಗಳಿಗೆ ಶಿಕ್ಷಣದಲ್ಲಿ 70% ಕೊಡಬೇಕು ಎಂದು ಶಿಫಾರಸ್ಸನ್ನು ಮಾಡುತ್ತಾರೆ. ಆ ಶಿಫಾರಸ್ಸು ಜಾರಿಯಾಗಲಿಲ್ಲ. ಅದಕ್ಕೆ ನೆಪ ಏನು ನೀಡಿದರು ಎಂದರೆ ಕಾಕಾ ಕಾಲೇಲ್‌ಕರ್‌ರವರ ವರದಿ ಜಾತಿಯನ್ನೂ ಕೂಡ ಆಧಾರವಾಗಿ ಇಟ್ಟುಕೊಂಡು ಮೀಸಲಾತಿ ಪರಿಗಣಿಸಿ report ಅನ್ನು ತಯಾರು

ಮಾಡಿದ್ದಾರೆ. ಆದುದರಿಂದ ಜಾತಿ ಪರಿಗಣಿಸಬಾರದು ಎನ್ನುವಂತಹ ಒಂದೇ ಕಾರಣಕ್ಕಾಗಿ 1955ರಲ್ಲಿ ಕೊಟ್ಟಂತಹ ವರದಿಯನ್ನು ಅಂದಿನ ಕೇಂದ್ರ ಸರ್ಕಾರ ಅದನ್ನು ತಿರಸ್ಕಾರ ಮಾಡಿತು. ಅವತ್ತಿನಿಂದ 1977ರವರೆಗೆ ಅದರ ಬಗ್ಗೆ ಮೊದಲನೆ ತಿದ್ದುಪಡಿ ಏನಾಯಿತು ಅದರ ಬಗ್ಗೆ ಚರ್ಚೆಯಾಗಲಿಲ್ಲ, ಮೀಸಲಾತಿಯನ್ನು ಕೊಡಲಿಲ್ಲ. ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಹೇಳುತ್ತಾರೆ, 1977ರಲ್ಲಿ ಜನತಾ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ, every political party ಅವರ ಪ್ರಣಾಳಿಕೆಯಲ್ಲಿ, ಕಾಕಾ ಕಾಲೇಲ್‌ಕರ್ ವರದಿಯನ್ನು ನಾವು ಜಾರಿಗೆ ಕೊಡುತ್ತೇವೆ ಎಂದು ಹೇಳಿರುತ್ತಾರೆ. ಎಲ್ಲಾ political party ಯ manifesto ತೆಗೆದು ನೋಡಿದರೆ ನಾವು ಕಾಕಾ ಕಾಲೇಲ್‌ಕರ್ ವರದಿಯನ್ನು ನಾವು ಜಾರಿಗೆ ಕೊಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿರುತ್ತಾರೆ. ಆಗ ಜನತಾ ಪಾರ್ಟಿಯೊಳಗೆ ಬಿಜೆಪಿ ಪಾರ್ಟಿ ಕೂಡ ಇತ್ತು. ಅದನ್ನು ಎಲ್ಲಾ ಒಪ್ಪಿಕೊಂಡಿದ್ದಾರೆ. ಅದಾಯಿತು. ಆದರೆ 1977ರಲ್ಲಿ ಏನು ಚರ್ಚೆ ನಡೆಯಿತು, ಅದಕ್ಕೆ ನಾನು ಬರುತ್ತೇನೆ. ಅದಾದಮೇಲೆ ಜನತಾ ಸರ್ಕಾರ ಕೂಡ ಅದನ್ನು ಬೇರೆ ಬೇರೆ ಕಾರಣಗಳಿಂದಾಗಿ ಜಾರಿಗೆ ಕೊಡಲಿಲ್ಲ. ಕೊನೆಗೆ 1978–79ರಲ್ಲಿ ಕಾಕಾ ಕಾಲೇಲ್‌ಕರ್‌ರವರ ವರದಿ ಜಾರಿಗೆ ಕೊಡುವುದು ಬೇಡ, ಇನ್ನೊಂದು ಆಯೋಗ ರಚನೆ ಮಾಡೋಣವೆಂದು ಹೇಳಿ B.P ಮಂಡಲ್‌ರವರ ಅಧ್ಯಕ್ಷತೆಯಲ್ಲಿ ಇನ್ನೊಂದು ಆಯೋಗ ಕೇಂದ್ರ ಸರ್ಕಾರ ನೇಮಿಸಿ, ಅದರ ರಚನೆ ಆಗುತ್ತದೆ. ಇವರು 1980ರಲ್ಲಿ ವರದಿ ಕೊಡುತ್ತಾರೆ. 1980 ರಿಂದ 1990ರವರೆಗೆ ಅದರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆ ವರದಿ ಕೇಂದ್ರ ಸರ್ಕಾರದಲ್ಲಿ ಇತ್ತು. ಅದರ ಮೇಲೆ Parliament ನಲ್ಲಿ ಕೂಡ ಚರ್ಚೆಯಾಗಲಿಲ್ಲ. 1990ರಲ್ಲಿ ಇದನ್ನು ಜಾರಿಗೆ ಕೊಡಬೇಕು ಎಂದು ಮಾನ್ಯ ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಯವರಿದ್ದಾಗ ತೀರ್ಮಾನ ಮಾಡಿದರು. ಅದನ್ನು ಜಾರಿಗೆ ಕೊಡುತ್ತೇವೆಂದು ತೀರ್ಮಾನ ಮಾಡಿದಮೇಲೆ ಇಂದಿರಾ ಸಹಾನಿ Case ನಲ್ಲಿ ಮಂಡಲ್ ಕಮಿಷನ್ ವರದಿ ಬಗ್ಗೆ Supreme Court ನಲ್ಲಿ ಪ್ರಶ್ನೆ ಹಾಕುತ್ತಾರೆ. ಆ ಪ್ರಶ್ನೆ ಬಂದಾಗ 9 ಜನ Supreme Court ನ ಮಾನ್ಯ judge ಗಳು ಅವರ ಅಧ್ಯಕ್ಷತೆಯಲ್ಲಿ ಒಂದು ಪೀಠ ರಚನೆಯಾಯಿತು. ಅವರು ಎಲ್ಲಾ ಚರ್ಚೆ ಮಾಡುತ್ತಾರೆ. ಏಕೆಂದರೆ ಮಂಡಲ್ ಕಮಿಷನ್ ವರದಿಯಲ್ಲಿ 1931ರಲ್ಲಿ ಏನು ಜಾತಿವಾರು census ಅನ್ನು ಮಾಡಿ ಅದರ ಆಧಾರದ ಮೇಲೆ ಹಿಂದುಳಿದವರು ಭಾರತದಲ್ಲಿ ಶೇಕಡ 52% ಇದ್ದಾರೆಂದು ಅವರು ಗಣನೆಗೆ ತೆಗೆದುಕೊಂಡರು, ಅದರ ಆಧಾರದ

ಮೇಲೆ 27% ಮೀಸಲಾತಿ ಕೊಡಬೇಕು ಎಂದು ಶಿಫಾರಸ್ಸು ಮಾಡಿತ್ತು. ಏಕೆಂದರೆ ಅದಕ್ಕಿಂತ ಮುಂಚಿತವಾಗಿ Supreme Court ನವರು ಬಾಲಾಜಿ case ನಲ್ಲಿ ಎಲ್ಲೂ ಹೇಳಿಲ್ಲ, ಯಾವ Provision ಕೂಡ ಇಲ್ಲ. ನಾನು Constitution ಅನ್ನು ಓದಿರುವ ಮಟ್ಟಿಗೆ ಶೇಕಡ 50% ಮೀಸಲಾತಿ ಇಡಬೇಕು, ಅದಕ್ಕಿಂತ ಹೆಚ್ಚಾಗಬಾರದು ಎಂದು ಯಾವ provision ನಲ್ಲೂ ಕೂಡ ಇಲ್ಲ. ಹಾಗೆ Constitution ನಲ್ಲಿ creamy layer ಬಗ್ಗೆ ಕೂಡ ಹೇಳಿಲ್ಲ. Nowhere it is mentioned in the Constitution. Creamy layer ಅನ್ನು ತೆಗೆದು ಹಾಕಬೇಕು ಎನ್ನುವುದು Constitution ನಲ್ಲಿ ಯಾವ provision ಕೂಡ ಇಲ್ಲ. ಅದು Article 15 ಇರಬಹುದು, 16 ಇರಬಹುದು, 29 ಇರಬಹುದು, 340 ಇರಬಹುದು, ಯಾವುದೇ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತಹ provision ಗಳು ಇವೆಯಲ್ಲ, ಯಾವ provision ಗಳಲ್ಲಿ ಕೂಡ creamy layer ತೆಗೆಯಬೇಕು ಎಂದಿಲ್ಲ. ಜೊತೆಗೆ 50% ಮೀಸಲಾತಿ ಇರಬೇಕು ಎಂದೂ ಕೂಡ ಇಲ್ಲ. ಆದರೂ ಮಂಡಲ್ ಕಮಿಷನ್‌ರವರು ಬಾಲಾಜಿ case ನಲ್ಲಿ ಕೊಟ್ಟಿರುವಂತಹ Supreme Court judgement ಅನ್ನು ಗಮನದಲ್ಲಿ ಇಟ್ಟುಕೊಂಡೇ ಅವರು 50% ಗಿಂತ ಜಾಸ್ತಿ ಮೀಸಲಾತಿ ಹೋಗಬಾರದೆಂದು ಹೇಳಿದ್ದಾರೆ. 22.50% SC/ST ಗಳಿಗೆ ಎಂದರೆ 15% Schedule caste ಗೆ 7.50% Schedule Tribes ಗೆ ಮತ್ತು 27% other backward community ಗೆ ಎಲ್ಲಾ ಒಟ್ಟಿಗೆ ಅದು 49.5% ಮೀಸಲಾತಿ ಆಯಿತು. ಕೇಂದ್ರ ಸರ್ಕಾರದವರು ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಮಂಡಲ್ ಕಮಿಷನ್ ವರದಿಯ ಶಿಫಾರಸ್ಸಿನ ಮೇರೆಗೆ 49.5% ಎಂದರೆ 50% ಒಳಗಡೆ ಬರುತ್ತದೆ. ಇದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಿದೆ. 9 ಸದಸ್ಯರ ಸಂವಿಧಾನ ಪೀಠ ಎಲ್ಲಾ ಚರ್ಚೆ ಮಾಡಿದ್ದಾರೆ. ಏಕೆಂದರೆ ನಮ್ಮ ದೇಶದಲ್ಲಿ 1931 ಆದಮೇಲೆ ಜಾತಿವಾರು census ಅನ್ನು ಮಾಡಿಲ್ಲ. ಅದನ್ನು ಮಾಡಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಇವತ್ತಿಗೆ ಸ್ವಾತಂತ್ರ್ಯ ಬಂದು 60 ವರ್ಷಗಳು ಆಗುತ್ತಾ ಬಂತು. ಈ ದೇಶದಲ್ಲಿ ಎಲ್ಲರಿಗೂ ಕೂಡ adequate representation ಕೊಡುತ್ತೇವೆ, ಎಲ್ಲರಿಗೂ ಕೂಡ justice ಕೊಡುತ್ತೇವೆ, equality ಮಾಡುತ್ತೇವೆ, liberty ಕೊಡುತ್ತೇವೆ ಎಂದು constitution ನಲ್ಲಿ ಒಪ್ಪಿಕೊಂಡಿದ್ದೇವೆ. ಇದೆಲ್ಲಾ ಒಪ್ಪಿಕೊಂಡಿರುವುದರಿಂದ ಯಾರ್ಯಾರಿಗೆ ಎಷ್ಟು ಸ್ವಾತಂತ್ರ್ಯದ ಫಲ ಸಿಕ್ಕಿದೆ ಎನ್ನುವುದು ಕೂಡ ಗೊತ್ತಾಗಬೇಕು. ಇಲ್ಲದೇ ಹೋದರೆ 1931ರಲ್ಲಿ ಏನು ಅಂಕಿಅಂಶಗಳು ಇತ್ತು, ಅದೇ ಅಂಕಿಅಂಶಗಳನ್ನು

ಆಧಾರವಾಗಿ ಇಟ್ಟುಕೊಂಡು ಹಿಂದುಳಿದ ಜಾತಿಯವರು 52% ಇರಬಹುದು ಎಂದು ಮಂಡಲ್ ಕಮಿಷನ್ ವರದಿಯಲ್ಲಿ ಹೇಳಿದ್ದಾರೆ. ಅದನ್ನು ಇಂದಿರಾ ಸಹಾನಿ case ನಲ್ಲಿ 9 ಸದಸ್ಯರ ಪೀಠ ಒಪ್ಪಿಕೊಂಡಿದೆ. ಮೀಸಲಾತಿ ಕೊಡುವಾಗ ಜಾತಿಯನ್ನು ಕೂಡ ಗಣನೆಗೆ ತೆಗೆದುಕೊಂಡು ಮಾಡಬೇಕೆಂದು ಕೂಡ ಇದೆ. ಒಬ್ಬರು ತಮಿಳುನಾಡಿನ judge ಒಂದು independent separate judgement ಕೊಟ್ಟಿದ್ದಾರೆ. ಅವರು ಜಾತಿಯನ್ನು ಏಕೆ ಪರಿಗಣಿಸಬೇಕು ಎಂದು ಸ್ಪಷ್ಟವಾಗಿ ಅವರ judgement ಬರೆದಿದ್ದಾರೆ. ಆ judge ತಮಿಳುನಾಡಿನವರು. ತಮಿಳುನಾಡಿನಲ್ಲಿ ಒಂದು ದೋಬಿ ಜಾತಿಗೆ ಸೇರಿದಂತಹ ಉಪ ಜಾತಿ. ಮಡಿವಾಳ ಜನಾಂಗಕ್ಕೆ ಸೇರಿದಂಥವರು, ಇವತ್ತಿಗೂ ಕೂಡ ತಮಿಳುನಾಡಿನ ಒಂದು ಜಿಲ್ಲೆಯವರು. ಸುಪ್ರೀಂ ಕೋರ್ಟ್‌ನ ಮಾನ್ಯ ನ್ಯಾಯಾಧೀಶರಾದಂಥ ಪಾಂಡ್ಯನ್‌ರವರು 1992ರಲ್ಲಿ judgement ಬರೆಯುವಾಗ 9 ಜನ ಸದಸ್ಯರುಗಳಲ್ಲಿ ಇವರು ಕೂಡ ಒಬ್ಬ ಸದಸ್ಯರಾಗಿದ್ದರು. ಅವರು judgement ನಲ್ಲಿ ಹೇಳಿದ್ದಾರೆ. ಮಡಿವಾಳ ಜಾತಿಗೆ ಸೇರಿರುವಂಥ ಉಪಜಾತಿಯವರು, ಇದನ್ನು 1992ರಲ್ಲಿ judgement ಉಲ್ಲೇಖ ಮಾಡಿರುವಂಥಾದ್ದು, ಇದು ನಮ್ಮದಲ್ಲ. ಅವತ್ತು ಈ ಜನರು ಹಗಲು ಹೊತ್ತಿನಲ್ಲಿ ಎಲ್ಲೂ ತಿರುಗಾಡುವ ಹಾಗೆ ಇಲ್ಲ. ಇವರು ನಿಶಾಚಾರಿಗಳು, ಆದರೆ ಅವರು, ಶುಭ್ರ ಮಾಡಿ ಕೊಟ್ಟಂಥ ಬಟ್ಟೆ, ಒಗೆದು ಕೊಟ್ಟಂಥ ಬಟ್ಟೆ, ಇದನ್ನು ಅವರು ರಾತ್ರಿ ಹೊತ್ತಿನಲ್ಲೇ ಒಗೆಯಬೇಕಾಗಿತ್ತು. ಇವರು ಹಗಲು ಹೊತ್ತಿನಲ್ಲಿ ಯಾರಿಗೂ ಮುಖ ತೋರಿಸುವ ಹಾಗೆ ಇಲ್ಲ. ಇದು 1992ನಲ್ಲಿ ಅಂದರೆ, ಸ್ವಾತಂತ್ರ್ಯ ಬಂದು ಎಷ್ಟು ವರ್ಷದ ಮೇಲೆ, ಅಂದರೆ, ಅವತ್ತಿಗೆ ಸ್ವಾತಂತ್ರ್ಯ ಬಂದು 45 ವರ್ಷಗಳಾಗುತ್ತದೆ. ಈ 45 ವರ್ಷಗಳ ನಂತರವೂ ಕೂಡ ಆ ಜಾತಿಗೆ ಸೇರಿದವರು ಹಗಲು ಹೊತ್ತು ಮುಖವನ್ನು ತೋರಿಸುವ ಹಾಗೆ ಇಲ್ಲ, ಏಕೆಂದರೆ ಹಗಲು ಹೊತ್ತು ಮುಖವನ್ನು ತೋರಿಸಿಬಿಟ್ಟರೆ ಬೇರೆಯವರಿಗೆ ಮೈಲಿಗೆ ಆಗಿ ಬಿಡುತ್ತದೆ. ಅವರ ಮಕ್ಕಳು ಎಲ್ಲಿ ಓದುವುದು? ಅವರು ಹಗಲು ಹೊತ್ತಿನಲ್ಲಿ ಶಾಲೆಗೆ ಹೋಗಬೇಕಲ್ಲಾ, ಅವರಿಗೋಸ್ಕರ ರಾತ್ರಿ ಹೊತ್ತು ಶಾಲೆಗಳನ್ನು ನಡೆಸುತ್ತಾರಾ? ಅದನ್ನು ಉಲ್ಲೇಖ ಮಾಡಿದ್ದಾರೆ. ಎಷ್ಟು ಕ್ರೂರವಾಗಿ ವ್ಯವಸ್ಥೆ ಇದೆ. ನೂರ ವರ್ಷಗಳ ಹಿಂದೆ, ಇನ್ನೂರು ವರ್ಷಗಳ ಹಿಂದೆ, ಮುನ್ನೂರು ವರ್ಷಗಳ ಹಿಂದೆ, ಎಂಥಾ ಕ್ರೂರ ವ್ಯವಸ್ಥೆ ಇತ್ತೆಂಬುದನ್ನು ಹೇಳುವುದಕ್ಕೋಸ್ಕರವಾಗಿ ಅವರ judgement ಉಲ್ಲೇಖ ಮಾಡಿದ್ದಾರೆ. ಇದಕ್ಕೋಸ್ಕರ ಈ ವರ್ಗದ ಶೇ.52 ರಷ್ಟು ಇರುವಂತಹ ಜನರಿಗೆ ಶೇ.27ರಷ್ಟು ಮೀಸಲಾತಿಯನ್ನು

ಕೊಡಬೇಕೆನ್ನುವಂಥಾದ್ದು It is a well settled law by the Constitutional Bench. ಇದಕ್ಕಿಂತ ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿರುವಂಥ judgement, ಅವರೇ ಮಾಡಿರುವಂತಹ ಕಾನೂನು, ಈ ಕಾನೂನು ಇವತ್ತಿನವರೆಗೂ ಕೂಡ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ಶೇ.27 ಇದ್ದು, 1951ರಲ್ಲಿ ತಿದ್ದುಪಡಿಯಾಗಿದ್ದರೂ ಕೂಡ, ಮಂಡಲ್ ಕಮಿಷನ್ report upheld ಆಗಿ, ಅವೆಲ್ಲಾ ಸರಿಯಾಗಿ ಇದೆಯೆಂದು ಹೇಳಿದ್ದರೂ ಕೂಡ, UPA Government has taken all measures. ಏನು ಮಾಡಿದ್ದಾರೆಂದರೆ, ಇದನ್ನು ಇಷ್ಟಕ್ಕೆ ಬಿಡಲಿಲ್ಲ, Constitution ಗೆ 93ನೇ ತಿದ್ದುಪಡಿಯನ್ನು ಮಾಡಿದರು. 93rd amendment ಮಾಡಿ higher institution reservation ಕೊಡಬೇಕೆಂದು specific ಆಗಿ ಹೇಳಿದರು. Central Government ನಡೆಸುತ್ತಿರುವಂಥ higher learning institution ಗಳಲ್ಲಿ ಕೊಡಬೇಕೆಂದು ಹೇಳಿ, ಮತ್ತೆ 93ನೇ ತಿದ್ದುಪಡಿಯನ್ನು Constitution ತಂದರು. ಇದು ಆದಮೇಲೆ ಒಂದಷ್ಟು ಕಾನೂನನ್ನು ಕೂಡ ಮಾಡಿದರು. ಆ ಕಾನೂನು 'Central Educational Institutions' (Reservation in Admissions) Act, 2006 ಇದು ಮಾಡಿದರು, ಇಷ್ಟೆಲ್ಲಾ ಮಾಡಿ ಆದಮೇಲೆ ಮಾಜಿ ಮುಖ್ಯಮಂತ್ರಿಯಾಗಿದ್ದ ಮಾನ್ಯ ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಇವರು ಒಂದು report ಅನ್ನು ಕೊಟ್ಟರು, ಆ ವರದಿಯ ಆಧಾರದ ಮೇಲೆ ಶೇ.27 ಅನ್ನು ಕೂಡ 2006–07ರಲ್ಲೆ ಕೊಡಿಯೆಂದು ಅವರು ಮಾಡಲಿಲ್ಲ. It is phased out, ಅಂದರೆ ಮೂರು ವರ್ಷಗಳಲ್ಲಿ ಶೇ.9, ಶೇ.9, ಶೇ.9 ಗಳಂತೆ ಕೊಡಬೇಕೆಂದು ಮಾಡಿದರು. ಈ ವರ್ಷ ಶೇ.9, ಮುಂದಿನ ವರ್ಷ ಶೇ.9, ಅದಕ್ಕೂ ಮುಂದಿನ ವರ್ಷ ಶೇ.9 ರಂತೆ ಒಟ್ಟು ಶೇ.27ರಷ್ಟು ಮೂರು ವರ್ಷ ಕೊಡಬೇಕು. ಆಮೇಲೆ ಶೇ.27 club ಮಾಡಬೇಕೆಂದು ಒಂದು ಶಿಫಾರಸ್ಸು ಮಾಡಿದರು, ಎರಡನೆಯ ಶಿಫಾರಸ್ಸು ಏನೆಂದರೆ, ಯಾವಾಗ 93ರ amendment ಮಾಡಿದರು, ಕೇಂದ್ರದ UPA Government ನಾವು Higher Learning Institution ನಲ್ಲಿ other backward classes ಗೆ ಮೀಸಲಾತಿಯನ್ನು ಕೊಡುತ್ತೇವೆಂದ ಕೂಡಲೇ ದೊಡ್ಡ ಗಲಾಟೆ ಶುರುವಾಯಿತು. ಮಂಡಲ್ ಕಮಿಷನ್ ವರದಿ ಬಂದಾಗ ಯಾವ ರೀತಿಯಲ್ಲಿ ಗಲಾಟೆ ಆಯಿತು, ಅದೇ ರೀತಿಯಲ್ಲಿ ಮೆಡಿಕಲ್ ಕಾಲೇಜ್ ಸ್ಟೂಡೆಂಟ್ಸ್, ಬೇರೆ ಸ್ಟೂಡೆಂಟ್ಸ್, ಎಲ್ಲಾ ಸೇರಿ ಗಲಾಟೆ ಮಾಡಿದರು. ನಾವು ಒಂದು ವಿಚಾರವನ್ನು

ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿರುವಂಥದ್ದು ಯಾರಿಗೆ ಮೀಸಲಾತಿ ಬೇಕೋ, ಅವರು ಯಾವತ್ತು aggressive ಆಗಿ ಹೋರಾಟ ಮಾಡೇ ಇಲ್ಲ. ಸಂವಿಧಾನ ಬದ್ಧವಾಗಿ ಕೊಟ್ಟಿರುವಂಥ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ, ಸಂವಿಧಾನಕ್ಕೆ ವಿರುದ್ಧವಾಗಿರುವಂಥಾದ್ದಲ್ಲ. ನಮ್ಮ preamble ಗೆ ವಿರುದ್ಧವಾಗಿರುವಂಥಾದ್ದು ಅಲ್ಲ. Article 16(4), 15(4), ಇವೆರಡೂ ರೂಪದಲ್ಲಿ ಹೇಳಿರುವಂಥಾದ್ದನ್ನು ಪಡೆದುಕೊಳ್ಳುವುದಕ್ಕೆ, 1951ನೇ ಇಸವಿಯಿಂದ ಇವತ್ತಿನವರೆಗೆ aggressive ಆಗಿ ಹೋರಾಟವನ್ನು ಮಾಡೇ ಇಲ್ಲ. ಆದರೆ ಮೀಸಲಾತಿ ಈ ವರ್ಗದ ಜನರಿಗೆ ಕೊಡಬಾರದೆಂದು ಹೋದರೆ, ಯಾವುತ್ತು ಕೂಡ aggressive ಆಗಿ ಹೋರಾಟ ಮಾಡಿದಂಥವರಲ್ಲ. ಬೆಂಕಿ ಹಾಕಿಕೊಂಡಿರುವಂಥಾದ್ದು, ಸೀಮೆಎಣ್ಣೆ ಹಾಕಿಕೊಂಡಿರುವಂಥಾದ್ದು, ಅಲ್ಲಿ ಗಲಾಟೆ ಮಾಡುವಂಥಾದ್ದು, ಎಲ್ಲಾ ಮಾಡಿರುವುದು ಇದೇನೆ. ಒಂದು ಸಾರಿ 1951ನೇ ಇಸವಿಯಲ್ಲಿ ತಿದ್ದುಪಡಿ ಮಾಡಿ, 15(4) ಅನ್ನು ಸೇರಿಸಲಾಯಿತು. 93 amendment ಮಾಡಿ 15(5) ಅನ್ನು ಸೇರಿಸಲಾಯಿತು. ಒಂದರ ಮೇಲೆ ಒಂದು, ಮೀಸಲಾತಿಯನ್ನು ಕೊಡಬೇಕೆಂದು ಅನ್ನುವುಗಕ್ಕೆ, ಕೊಟ್ಟೆ ಕೊಡಬೇಕೆನ್ನುವುದಕ್ಕೆ ಇನ್ನೊಂದು amendment, ಇಲ್ಲ ತಪ್ಪದೇ ಕೊಡಬೇಕೆಂದು ಎನ್ನುವುದಕ್ಕೆ ಇನ್ನೊಂದು law. That is how it has gone on. If you look into the history, ಕಳೆದ 50 ವರ್ಷಗಳನ್ನು ನೋಡಿದಾಗ already 1951ನೇ ಇಸವಿಯಲ್ಲಿ ಕೊಟ್ಟಿದ್ದಾರೆ, 15(4) ಸೇರಿದೆ. ಕೇಂದ್ರ ಸರ್ಕಾರ ನಡೆಸುವಂಥ, ರಾಜ್ಯ ಸರ್ಕಾರ ನಡೆಸುವಂಥ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಕೊಡಬೇಕೆಂಬುದನ್ನು 1951ರಲ್ಲೇ ಮಾಡಿದ್ದಾರೆ. ಅದು ಆದಮೇಲೂ ಕೂಡ ಎಷ್ಟೋ ವರ್ಷಗಳು ಕೊಟ್ಟಿಲ್ಲ. ಮಂಡಲ್ ಕಮಿಷನ್ ವರದಿಯಲ್ಲೂ ಕೂಡ ಶಿಕ್ಷಣ ಕ್ಷೇತ್ರದಲ್ಲೂ ಕೂಡ ಕೊಡಬೇಕೆಂದು ಆಯಿತು. ಇಷ್ಟೆಲ್ಲಾ ವರದಿಯಲ್ಲೂ ಕೂಡ ಶಿಕ್ಷಣ ಕ್ಷೇತ್ರದಲ್ಲೂ ಕೂಡ ಕೊಡಬೇಕೆಂದು ಆಯಿತು. ಇಷ್ಟೆಲ್ಲಾ ಆದರೂ ಕೂಡ ಮಂಡಲ್ ಕಮಿಷನ್ ವರದಿಯಲ್ಲಿ, job ಗಳಲ್ಲಿ ಮೀಸಲಾತಿಯನ್ನು ಕೊಡಬೇಕೆಂದು ಆಯಿತೇ ಹೊರತು, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿಯನ್ನು ಕೊಡಬೇಕೆಂದು ಜಾರಿಯಾಗಲಿಲ್ಲ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಮಂಡಲ್ ಕಮಿಷನ್ ವರದಿಯಲ್ಲಿ reservation in promotion to Backward Communities, other backward communities ಎಂದು ಆಗಿದೆ. ಇನ್ನು ಅದನ್ನು ಜಾರಿಗೆ ಕೊಟ್ಟಿಲ್ಲ. Though it was upheld by the

Supreme Court by the 9 Judge Constitutional Bench ಅದು ಜಾರಿಯಾಗಲಿಲ್ಲ, ಏಕೆಂದರೆ ಇಲ್ಲ ಮೀಸಲಾತಿ ಬೇಡವೆನ್ನುವವರು aggressive ಆಗಿ ಇದ್ದರಲ್ಲಾ. ನಾವು ಯಾರು aggressive ಆಗಲೇ ಇಲ್ಲ. ಮೀಸಲಾತಿ ಬೇಕಾಗಿರುವವರು ಯಾರು aggressive ಆಗಲಿಲ್ಲ. ಅದಕ್ಕೆ ನಮಗೆ ಇಷ್ಟಿಷ್ಟೆ ಕೊಡುವುದು, ಕೊಡುವ ಕೈಯನ್ನು ಹಿಡಿದುಕೊಳ್ಳುವುದು, ಹೆದರಿಕೊಂಡು ಕೊಡುವುದು, ಈ ರೀತಿಯಾಗಿ ನಡೆದುಕೊಂಡು ಬಂದಿದೆ. This is the situation in the country. ಇಷ್ಟಿಷ್ಟೇ ಕೊಡುವುದು, ಹೆದರಿಕೊಂಡು ಕೊಡುವುದು. ನಾವು aggressive ಆಗಲಿಲ್ಲ. ಅವರು ಜಾಸ್ತಿ aggressive ಆದರು. ನೀವು ನೋಡಬೇಕು, ಇಲ್ಲೆಲ್ಲಾ ಗಲಾಟೆಗಳನ್ನು ನೋಡಬೇಕು, ಮತ್ತೆ ಏನು ಆಗಿಬಿಟ್ಟಿದೆಯೆಂದರೆ ನಮ್ಮ ವ್ಯವಸ್ಥೆಯೊಳಗೆ ಎಷ್ಟು ನೋವಾಗುತ್ತದೆಂದರೆ, ನಾವು ಒಂದು ವೇಳೆ ಮೀಸಲಾತಿ ಬೇಕೆನ್ನುವಂಥವರು ಚಳುವಳಿಯನ್ನು ಮಾಡಿದರೆ, ನಮ್ಮ photo ಗಳು ಪತ್ರಿಕೆಗಳಲ್ಲಿ ಬರುವುದಿಲ್ಲ. ನಾನು ಇಲ್ಲಿ ಇವರಿಗೆಲ್ಲ ಹೇಳುತ್ತಿರುವುದು, ಜನರಲ್ ಆಗಿ ಹೇಳುತ್ತಿದ್ದೇನೆ. ನಾನು particular ಆಗಿ ಯಾರಿಗೂ ಹೇಳುತ್ತಾ ಇಲ್ಲ. ನಾನು ಜನರಲ್ ಆಗಿ ಹೇಳುತ್ತಿದ್ದೇನೆ. ಯಾರೋ 50 ಮಕ್ಕಳು ಸೇರಿಕೊಂಡು ಗಲಾಟೆ ಮಾಡಿದರೆ, ದೊಡ್ಡದಾಗಿ ಇಡೀ ದೇಶದಲ್ಲಿ ಏನೋ ದೊಡ್ಡದಾಗಿ ಬೆಂಕಿ ಹತ್ತಿಕೊಂಡು ಬಿಟ್ಟಿದೆ, ಕೊಡಬಾರದು ಮೀಸಲಾತಿಯನ್ನು, This is what is going on, this is what happening. ಇದು ಪರಿಸ್ಥಿತಿ, ಜೊತೆಗೆ ಏನು ಆಗಿಬಿಟ್ಟಿದೆಯೆಂದರೆ, ಮೀಸಲಾತಿ ಮಂಡಲ್ ಕಮಿಷನ್ ವರದಿ ಪ್ರಕಾರ ಯಾರು ಹಿಂದುಳಿದ ಜಾತಿಯವರು ಎಂದರೆ ಕರ್ನಾಟಕದಲ್ಲಿ ಯಾರು ಬಹುಸಂಖ್ಯಾತರು ಇದ್ದಾರೆ, ಅವರಿಗೆ ಸಿಕ್ಕಿಲ್ಲವೆಂಬ ಭಾವನೆ ಕೂಡ ಇದೆ. It is not correct. ಮಂಡಲ್ ಕಮಿಷನ್ ವರದಿಯಲ್ಲಿ backward class list ಮಾಡಿದಾಗ, State list ಒಂದು ಇರುತ್ತದೆ, Central list ಒಂದು ಇರುತ್ತದೆ. ಆ ಎರಡು list ಗಳಲ್ಲಿ ಯಾವುದು common ಇರುತ್ತದೆ. ಅದು ರಾಜ್ಯಕ್ಕೂ ಅನ್ವಯವಾಗುತ್ತದೆ, ಕೇಂದ್ರಕ್ಕೂ ಅನ್ವಯವಾಗುತ್ತದೆ. The Vokkaligas living in rural areas all come under Backward Class except Vokkaligas living in the urban areas. ಅವರು ಶೇ.15 ಇದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ :- ಈ ಮಂಡಲ್ ವರದಿ ಬಂದ ಮೇಲೆ ಅದುವರೆಗೂ ಕೂಡ ಯಾವುದೇ ಒಕ್ಕಲಿ ನೇರವಾಗಿ IAS ಅನ್ನು ತೆಗೆದುಕೊಂಡಿಲ್ಲ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ತಮಗೂ ಅದರ ಮಾಹಿತಿ ಇರಬಹುದು ಎಂದು ನಾನು ಅಂದುಕೊಂಡಿದ್ದೇನೆ. ನಾನು ಇದನ್ನು ಮಾಹಿತಿಗೋಸ್ಕರ ಹೇಳುತ್ತಿದ್ದೇನೆ, ಯಾರೂ ತಪ್ಪು ತಿಳಿದುಕೊಳ್ಳಬಾರದು, ನೌಕರಿಗಳಲ್ಲಿ ಮೀಸಲಾತಿ ಕೊಡಬೇಕು ಎಂದು ಮಂಡಲ್ ಕಮಿಷನ್ ವರದಿ ಜಾರಿಗೆ ಕೊಟ್ಟಮೇಲೆಯೇ ಒಕ್ಕಲಿಗರು ನೇರವಾಗಿ I.A.S.ಆಗಿ ನೇಮಕವಾಗಿದ್ದು. ಅಲ್ಲಿಯವರೆಗೆ ಒಬ್ಬನೇ ಒಬ್ಬ ಒಕ್ಕಲಿಗ ಕೂಡ ನೇರವಾಗಿ I.A.S.ಆಗಿರಲಿಲ್ಲ. ಅಲ್ಲಿಯವರೆಗೆ ಎಲ್ಲರೂ conferred I.A.S.ನವರೇ ಇದ್ದದ್ದು. It is a fact. Fact ಅನ್ನು ಯಾರೂ dispute ಮಾಡುವುದಕ್ಕೆ ಆಗುವುದಿಲ್ಲವಲ್ಲ. ಪುಟ್ಟಸ್ವಾಮಿಗೌಡರೂ ಸಹ conferred I.A.S.ಹನುಮಾನ್ ಕಾಲದಿಂದಲೂ ಕೂಡ ಎಲ್ಲರೂ conferred I.A.S.ಇದ್ದವರು. ನೇರವಾಗಿ I.A.S recruit.ಆದವರೂ ಒಬ್ಬರು ಇರಲಿಲ್ಲ. ಲಿಂಗಾಯಿತ ವೀರಶೈವ ಜನಾಂಗದಲ್ಲೂ ಕೂಡ ಅನೇಕ sub caste ಗಳೂ ಕೂಡ ಮಂಡಲ್ ಕಮಿಷನ್ ವರದಿಯಲ್ಲಿ ಸೇರುತ್ತವೆ. ಹಾಗಾಗಿ ಈ ವರ್ಗದ ಜನರಿಗೆ 52% ಮೀಸಲಾತಿ ಕೊಡಬೇಕು ಎನ್ನತಕ್ಕಂಥಾದ್ದನ್ನು ಸುಪ್ರೀಂ ಕೋರ್ಟಿನವರು ಎತ್ತಿ ಹಿಡಿದಿದ್ದು, 3,700ಕ್ಕೂ ಹೆಚ್ಚು ಜಾತಿಗಳನ್ನು ಹಿಂದುಳಿದ ಜಾತಿಗಳು ಎಂದು ಮಂಡಲ್ ಕಮಷಿನ್ ವರದಿಯಲ್ಲಿ ಹೇಳಿದ್ದಾರೆ. ಇದಕ್ಕೆ ತಕರಾರು ಏಕೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರು ಕೊಟ್ಟಿರುವ ಶಿಫಾರಸ್ಸಿನ ಪ್ರಕಾರ ಅವರಿಗೆ ಐ.ಐ.ಎಂ., ಐ.ಐ.ಟಿ., ಐ.ಐ.ಸಿ., ಗಳಲ್ಲಿ infrastructure develop ಮಾಡಲು, ಬೇರೆ ಬೇರೆ education ಗಳನ್ನು ಮಾಡಲಿಕ್ಕೆ 17,600 ಕೋಟಿ ರೂಪಾಯಿಗಳ special grant ಅನ್ನು ಕೇಂದ್ರ ಸರ್ಕಾರದವರು allocate ಮಾಡಿದ್ದಾರೆ. ಇದು ಒಂದು ವಿಚಾರವಾದರೆ, ಇನ್ನೊಂದು ವಿಚಾರವೆಂದರೆ, 50%ಗೂ ಹೆಚ್ಚು ಅಂಕ ತೆಗೆದುಕೊಂಡು merit ಮೇಲೆ ಬರತಕ್ಕಂಥ studentsಗೆ, ಹಿಂದುಳಿದ ಜಾತಿಯವರಿಗೆ 27% ಮೀಸಲಾತಿ ಕೊಟ್ಟುಬಿಟ್ಟರೆ, ಅವರ ಸಂಖ್ಯೆ ಕಡಿಮೆಯಾಗಬಾರದು ಎಂದು intake ಹೆಚ್ಚು ಮಾಡಿ, backward class ನವರಿಗೆ ಕೊಡುವ 27% ಅನ್ನು ಸರಿದೂಗಿಸಲಿಕ್ಕೆ intake ಹೆಚ್ಚು ಮಾಡಿದ್ದಾರೆ. ಅಲ್ಲಿ ಇರತಕ್ಕಂಥ staff ಅಂದರೆ ಅಲ್ಲಿರತಕ್ಕಂಥ faculty ಗಳಲ್ಲಿರುವ Professors, Readers, Lecturers, ಬೇರೆ staff ಎಲ್ಲರಿಗೂ retirement age ಅನ್ನು ಎರಡು ವರ್ಷ ಹೆಚ್ಚು ಮಾಡಿದ್ದಾರೆ. Meritorious students ಗೆ ಇಷ್ಟೊಂದು protection ಕೊಟ್ಟು, ಅವರಿಗೆ ನ್ಯಾಯವೇ ಆಗಬಾರದು ಎನ್ನುವ

ರೀತಿಯಲ್ಲಿ protection ಕೊಟ್ಟು, ಮೀಸಲಾತಿಯನ್ನು ಯಾವ ಕಾಲದಲ್ಲಿ ಮಾಡಿದ್ದರು. ಇಷ್ಟೆಲ್ಲ ಆಗಿದ್ದರೂ ಕೂಡ, I don't know, why Supreme Court has not taken all these facts into consideration, cognizance of all these facts. Supreme Court ನವರು ಏಕೆ ಮಾಡದೇ ಹೋದರು ಎಂದು ನನಗೆ ಗೊತ್ತಾಗಲಿಲ್ಲ. ಅವರು ಇದೆಲ್ಲವನ್ನೂ ಕೂಡ ತೆಗೆದುಕೊಳ್ಳಬೇಕಾಗಿತ್ತು. Injustice ಅನ್ನು ಸರಿಪಡಿಸಲಿಕ್ಕೋಸ್ಕರವಾಗಿ, disparity ಯನ್ನು ಸರಿಪಡಿಸಲಿಕ್ಕೋಸ್ಕರವಾಗಿ, ಸೊಸೈಟಿಯಲ್ಲಿರುವ disadvantageous sections ನವರಿಗೆ ನ್ಯಾಯ ಕೊಡಲಿಕ್ಕೋಸ್ಕರವಾಗಿ ಇಷ್ಟು ವರ್ಷ Parliament, ಕೇಂದ್ರ ಸರ್ಕಾರ ಚರ್ಚೆ ಮಾಡಿ, ಕಾನೂನುಗಳನ್ನು ಮಾಡಿ ಅವರಿಗೆ ಮೀಸಲಾತಿ ಕೊಡಬೇಕು ಎಂದು ಹೇಳಿರುವಾಗ Suprement Court ನವರು ಅದನ್ನು stay ಮಾಡಿ, ಅವರಿಗೆ ಸಿಗಲಾರದ ರೀತಿ ಮಾಡಿರತಕ್ಕಂಥಾದ್ದು ಇದೆಯಲ್ಲ, ಇದು ಎಲ್ಲ ಹಿಂದುಳಿದ ಜಾತಿಯವರಿಗೆ ಆಗತಕ್ಕಂಥ ದೊಡ್ಡ ನೋವು ಎಂದು ಹೇಳಬೇಕಾಗುತ್ತದೆ. Supreme Court ಬಗ್ಗೆಯಾಗಲೀ ಅಥವಾ ,ಯಾವುದೇ judge ಬಗ್ಗೆಯಾಗಲೀ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. It is a set back to social justice. It is a set back. ಅತ್ಯಂತ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಾಮಾನ್ಯವಾಗಿ Supreme Court ನಲ್ಲಿ judicial discipline ಎಂದು ಇರುತ್ತದೆ. Recent Supreme Court decision ನಲ್ಲಿ ಕೂಡ ಇದನ್ನು ಹೇಳಿದ್ದಾರೆ. Sugaram V/s The State of Rajasthan, 2006 ನಲ್ಲಿ the recent Supreme Court decision ಏನೆಂದರೆ, reported in part-8, Supreme Court cases, page 641. It is laid down by the Supreme Court, that the judicial discipline demands that all binding precedents are followed. 9 ಜನ ಸದಸ್ಯರಿರತಕ್ಕಂಥ ಸಂವಿಧಾನದ ಪೀಠ ಕೊಟ್ಟಿರತಕ್ಕಂಥಾದ್ದು, it is a judicial discipline. It is a judicial precedent. It is binding on the other benches. ಅದಕ್ಕಿಂತ ಕಡಿಮೆ ಇರತಕ್ಕಂಥ bench ಗಳ ಮೇಲೆ ಅದು binding ಆಗುತ್ತದೆ ಎನ್ನುವುದು Supreme Court decision in Sugaram V/s The State of Rajasthan caseನಲ್ಲಿ. Recently it is reported. 2006ರಲ್ಲಿ ಆಗಿದೆ. ಇದು ಆಗಿ ಇನ್ನು ಒಂದು ವರ್ಷವೂ ಕೂಡ ಆಗಿಲ್ಲ. ಈ ರೀತಿಯದು ಇದ್ದರೂ ಕೂಡ,

ಸುಪ್ರೀಂ ಕೋರ್ಟಿನದೇ ಕಾನೂನು ಇದ್ದರೂ ಕೂಡ, principle ಅನ್ನು ಸುಪ್ರೀಂ ಕೋರ್ಟ್ laid down ಮಾಡಿದ್ದರೂ ಕೂಡ, ಸುಪ್ರೀಂ ಕೋರ್ಟ್ ಕಾನೂನನ್ನು ಮಾಡಿದ್ದರೂ ಕೂಡ, ತ್ರಿಸದಸ್ಯ ಪೀಠ stay ಮಾಡಿರುವುದು ನನ್ನ ಪ್ರಕಾರ it is not in accordance with the provisions of the Constitution or principles laid down by the Supreme Court. This is my submission. It is not in accordance with the provisions of the Constituion or according to the principles laid down by the Supreme Court. It is a Constitutional violation. ಎರಡು ಕಡೆ ಹೀಗೆ ಆಗಿಹೋಗಿಬಿಟ್ಟಿದೆ. ಒಂದು, ಇತ್ತೀಚೆಗೆ ಅಂದರೆ 2–3 ತಿಂಗಳ ಹಿಂದೆ, 9th Schedule ನಲ್ಲಿ ಕೇಂದ್ರ ಸರ್ಕಾರ ಕಾನೂನು ಮಾಡಿ ಅದನ್ನು protect ಮಾಡಲಿಕ್ಕೋಸ್ಕರವಾಗಿ, judicial review ನಿಂದ ಹೊರಗಡೆ ಇಡುವುದಕ್ಕೋಸ್ಕರವಾಗಿ 9th Schedule ಅನ್ನು ಮಾಡಿರುವುದು.9th Schedule ಅನ್ನು ಕೂಡ ನಾವು review ಮಾಡಬಹುದು ಎಂದು Supreme Court ನವರು ಇತ್ತೀಚೆಗೆ ಒಂದು ತೀರ್ಪು ಕೊಟ್ಟಿದ್ದಾರೆ. It also goes aginst the interests of the O.B.C.s and other underprivileged, suppressed and depressed classes of the society. ಇದಾದ ಮೇಲೆ ಈಗ ಬಂದಿರತಕ್ಕಂಥ Supreme Court stay order ಇನ್ನೊಂದು. Stay ಮಾಡಲಿಕ್ಕೆ there is no case at all. ಯಾವಾಗಲೂ stay ಕೊಡುವಾಗ ಮತ್ತು injunction ಕೊಡುವಾಗ ಏನು ಹೇಳುತ್ತೇವೆ ಎಂದರೆ there should be a prima-facie case in favour of the petitioner. Here, where is the prima-facie case in favour of the petitioner? The another principle is balance of convenience shall be in favour of Petitioner. Where is the balance of convinience in favour of the Petitioner? ಒಂದು ವೇಳೆ stay ಕೊಡದೇ ಹೋದರೆ ದೊಡ್ಡ injustice ಆಗುತ್ತದೆ ಎನ್ನತಕ್ಕಂಥಾದ್ದು ಎಲ್ಲಿದೆ? In all the precounts, ನಮಗೆ ನ್ಯಾಯ ನಮ್ಮ ಪರವಾಗಿಯೇ ಇದೆ. ನ್ಯಾಯವು ಮೀಸಲಾತಿ ಕೊಡುವುದರ ಪರವಾಗಿಯೇ ಇದೆ. ಇದು ಇವತ್ತು ಆಗಿರತಕ್ಕಂಥಾದ್ದು. Other O.B.C.s ಗೆ, ಹಿಂದುಳಿದ ಜಾತಿಗಳಿಗೆ ದೊಡ್ಡ ಅನ್ಯಾಯವಾಗುತ್ತದೆ. ಈ stay ಕೊಡಬೇಕಾದಂಥ

ಅಗತ್ಯವೂ ಇರಲಿಲ್ಲ. Stay ಕೊಡಲಿಕ್ಕೆ ಅವಶ್ಯಕವಾದಂಥ case ಕೂಡ ಅವರ ಪರವಾಗಿಲ್ಲ. O.B.C.s have not got very good case. They are backed by Constitution, Constitutional provisions and case law. ಎಲ್ಲವೂ ಕೂಡ ನಮ್ಮ ಪರವಾಗಿಯೇ ಇದೆ. ಇಷ್ಟೆಲ್ಲ ಇದ್ದರೂ ಕೂಡ ಸ್ವಾತಂತ್ರ್ಯ ಬಂದ 56–57–60 ವರ್ಷಗಳ ನಂತರ ತಡೆ ಮಾಡತಕ್ಕಂಥಾದ್ದು ಆಗಿದೆ. ಆಮೇಲೆ ಎಲ್ಲ case ಗಳಲ್ಲಿ ಏನು argument ಮಾಡುತ್ತಾರೆ ಎಂದರೆ, merit ಹೋಗಿಬಿಡುತ್ತದೆ, ಮೇಲ್ವರ್ಗದ ಜಾತಿಯವರಲ್ಲೂ ಕೂಡ ಬಡವರಿಲ್ಲವೇ ಎನ್ನುವಂಥ ಪದಗಳನ್ನು ಆಗಾಗ ಬಳಸುತ್ತಾರೆ. Constitution ನಲ್ಲಿ ಬಹಳ ಸ್ಪಷ್ಟವಾಗಿ "Socially, educationally backward" ಎಂದು ಹೇಳಿದ್ದಾರೆ. "Socially, educationally backward" ಎನ್ನತಕ್ಕಂಥ ಪದವನ್ನು ಉಪಯೋಗಿಸಿದ್ದಾರೆಯೇ ಹೊರತು, socially, educationally, economically backward ಎನ್ನತಕ್ಕಂಥ ಪದಗಳನ್ನು Article 15 ರಲ್ಲೂ ಉಪಯೋಗಿಸಿಲ್ಲ, Socially, educationally backward ಎನ್ನತಕ್ಕಂಥ ಪದವನ್ನು ಮಾತ್ರ ಉಪಯೋಗಿಸಿದ್ದಾರೆ.

(1–30)

ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರತಕ್ಕಂಥ ಜಾತಿಗಳು ಎಂದು ಹೇಳುತ್ತಾರೆಯೇ ಹೊರತು Constitution ಅನ್ನು draft ಮಾಡುವಾಗ ಬಹಳ ದೀರ್ಘವಾಗಿ ಚರ್ಚೆ ಮಾಡಿ ಆರ್ಥಿಕವಾಗಿ ಹಿಂದುಳಿದ ಜಾತಿಗಳೆನ್ನುವ ಪದವನ್ನು ಅಲ್ಲಿ ಸೇರಿಸಿಲ್ಲ. ಅದಾದರೂ ಕೂಡ Mandal Commission ವರದಿ ಜಾರಿಗೆ ಕೊಟ್ಟಾಗ Creamy layer ಒಪ್ಪಿಕೊಂಡಿದ್ದೇವೆಂದರೂ ಕೂಡ ಪುನಃ ಪದೇ ಪದೇ ಈ ತರಹ ಅಡ್ಡ ಬಂದಿರತಕ್ಕಂಥದ್ದಿದೆಯಲ್ಲ, ಇದು Constitution ಗೆ ವಿರುದ್ಧವಾಗಿದೆ. ಹಿಂದುಳಿದ ಜಾತಿಯವರಿಗೆ ದೊಡ್ಡ ಅನ್ಯಾಯ. ಅದಕ್ಕೋಸ್ಕರ UPA Government ಇಷ್ಟೆಲ್ಲ exercise ಮಾಡಿ ಹಿಂದುಳಿದ ಜಾತಿಯವರಿಗೆ IIM Institutions ನಲ್ಲಿ ಮೀಸಲಾತಿ ಕೊಡಬೇಕೆಂದು ಹೇಳಿರುವುದು ರಾಜ್ಯಾಂಗ ಬದ್ಧವಾಗಿದೆ, ನ್ಯಾಯ ಬದ್ಧವಾಗಿದೆ. ಹಿಂದುಳಿದ ಜಾತಿಯವರಿಗೆ ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯದಲ್ಲಿ ಇದೊಂದು ಪ್ರಮುಖವಾದಂಥ ಹೆಜ್ಜೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಈ ಹೆಜ್ಜೆಯನ್ನು ಹಿಂದಕ್ಕೆ ತಳ್ಳತಕ್ಕಂಥದ್ದಿದೆಯಲ್ಲ, ಇದನ್ನು ಮತ್ತೆ ತಿರಸ್ಕಾರ ಮಾಡತಕ್ಕಂಥದ್ದಿದೆಯಲ್ಲ, ಇದು ಸರಿಯಾದ ಕ್ರಮವಲ್ಲವೆಂದು ನಾನು ಬಹಳ

ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮೀಸಲಾತಿ ಕುರಿತಂತೆ ಕೇಂದ್ರ ಸರ್ಕಾರ ಏನು ಹೇಳಿದೆ, ಮತ್ತು ಇದಕ್ಕೆಲ್ಲ ಸ್ಪಷ್ಟವಾಗಿ ಅವರಿಗೆ ಬೆಂಬಲ ಕೊಡುವುದರ ಜೊತೆಗೆ stay vacate ಮಾಡಿಸಬೇಕೆಂದರೆ ಕೂಡಲೇ ಮಾಡಬೇಕು ಅಥವಾ ಹೆಚ್ಚು ಸದಸ್ಯರಿರುವ ಇನ್ನೊಂದು Constitution Bench ಅನ್ನು ಮಾಡಬೇಕೆಂದಿದ್ದರೆ ಮಾಡಬೇಕು ಅಥವಾ ಇದಕ್ಕೋಸ್ಕರವಾಗಿ Constitution ಗೆ amendment ಇನ್ನೇನಾದರೂ ಮಾಡಬೇಕೆಂದಿದ್ದರೆ ಮಾಡಬೇಕು. ಒಟ್ಟಾರೆ, ಹಿಂದುಳಿದ ಜಾತಿಯವರು ಅವರ interest ಇದೆಯಲ್ಲ, ಅದನ್ನು ರಕ್ಷಣೆ ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಇನ್ನೂ ಗಟ್ಟಿಯಾದ ನಿಲುವುಗಳನ್ನು ತೆಗೆದುಕೊಳ್ಳುವುದರ ಮೂಲಕ ಸಂವಿಧಾನಬದ್ಧವಾದ ಕ್ರಿಯೆಗಳನ್ನು ತೆಗೆದುಕೊಳ್ಳುವ ಮೂಲಕ ಮಾಡಬೇಕು. ನನ್ನ ಇನ್ನೊಂದು ವಾದವೇನೆಂದರೆ, ಅಲ್ಲಿಯವರೆಗೆ ಈ ವರ್ಷ ಬೇರೆಯವರಿಗೆ admissions ಆಗುವುದಕ್ಕೆ ಅವಕಾಶ ಕೊಡಬಹುದು. ಈ academic year ನಿಂದಲೇ ಅಂದರೆ 2007-08ರಲ್ಲೇ ಹಿಂದುಳಿದ ಜಾತಿಯವರಿಗೆ ಕೂಡ ಈ IIM, IIT ಗಳಲ್ಲಿ ಅಥವಾ ಬೇರೆ higher educational institutions ನಲ್ಲಿ ಮೀಸಲಾತಿ ಸಿಕ್ಕುವ ರೀತಿಯಲ್ಲಿ ವ್ಯವಸ್ಥೆ ಮಾಡಲೇಬೇಕು. ಅದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಈ resolution ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮತ್ತು ಮನವಿ ಏನೆಂದರೆ, ಕೂಡಲೇ ನೀವು ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೀರಿ, ಮತ್ತೆ ಇನ್ನೇನು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಅವರಿಗೆ ಈ ಮೀಸಲಾತಿ ಸಿಗಬೇಕಾದರೆ ಏನೇನು ಮಾಡಬೇಕೋ ಅದನ್ನೆಲ್ಲ ಮಾಡಬೇಕೆನ್ನುವ ಮಾತುಗಳನ್ನು ಹೇಳಿ, ಮತ್ತೊಮ್ಮೆ ರಾಜ್ಯ ಸರ್ಕಾರ ತಂದಿರುವ ನಿರ್ಣಯವೇನಿದೆ, ಅದನ್ನು ಮಾಡಬೇಕು. ಏಕೆಂದರೆ, ಈಗಾಗಲೇ ತಮಿಳುನಾಡಿನವರು ಮತ್ತು ಆಂಧ್ರದವರು ನಮಗಿಂತ ಮುಂಚಿತವಾಗಿ ಮಾಡಿಬಿಟ್ಟರು. ತಮಿಳುನಾಡು, ಆಂಧ್ರ ರಾಜ್ಯಗಳಲ್ಲಿ ಬಂದ್ ಕೂಡ ಆಚರಣೆ ಮಾಡಿಬಿಟ್ಟಿದ್ದಾರೆ. ಮೀಸಲಾತಿಗೆ ಮೊದಲಿನಿಂದಲೂ ದಕ್ಷಿಣ ಭಾರತ ಮುಂಚೂಣಿಯಲ್ಲಿದೆ. ಎಲ್ಲ ಕಾಲದಲ್ಲಿಯೂ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕರ್ನಾಟಕ ರಾಜ್ಯಗಳು ಮೀಸಲಾತಿ ಕೊಡುವುದರಲ್ಲಿ ರಾಜರ ಕಾಲದಿಂದಲೂ ಮುಂಚೂಣಿಯಲ್ಲಿವೆ. ಮಹಾರಾಷ್ಟ್ರದ ಸಾಹು ಮಹಾರಾಜ್‌ಕಾಲದಿಂದಲೂ ಮುಂಚೂಣಿಯಲ್ಲಿದೆ. ತಮಿಳುನಾಡಿನಲ್ಲಿ ಬಹಳ ವರ್ಷಗಳ ಹಿಂದೆಯೇ ಇತ್ತು. ಹಿಂದೆ princely states ಇದ್ದಾಗಲೇ, ಬ್ರಿಟಿಷರ ಕಾಲದಲ್ಲೇ ಇವೆಲ್ಲ ಆಗಿದೆ. ಈಗ ಪ್ರಜಾ ರಾಜ್ಯ ಬಂದಾಗ ನಾವು

ಸಮಾನತೆಯನ್ನು ಮಾಡಿಕೊಳ್ಳಬೇಕು, justice, equality, liberty ಕೊಡಬೇಕು, ಸಮಾನತೆ ಇರಬೇಕು, ಸಾಮಾಜಿಕ ನ್ಯಾಯ ಕೊಡಬೇಕೆಂದು ಸಂವಿಧಾನದಲ್ಲಿ ಹೇಳಿಕೊಂಡು ಅದನ್ನು ಜಾರಿ ಮಾಡತಕ್ಕಂಥ ಸಂದರ್ಭದಲ್ಲಿ ಈ ತರಹದ ಪರಿಸ್ಥಿತಿ ಬರುವುದು ಬಹಳ ದುರದೃಷ್ಟಕರ ಎನ್ನತಕ್ಕಂಥ ಮಾತನ್ನೂ ನಾನು ಹೇಳುತ್ತೇನೆ. ಸಾಧ್ಯವಾದರೆ, ಕರ್ನಾಟಕದಲ್ಲಿಯೂ ಕೂಡ ನಾವೆಲ್ಲ ರಾಜಕೀಯ ಪಕ್ಷಗಳವರೂ ಸಹ ಯೋಚನೆ ಮಾಡಿ, ಬಂದ್ ಆಚರಣೆ ಮಾಡುವುದಾದರೆ ಮಾಡತಕ್ಕಂಥದ್ದು ಅಗತ್ಯ ಬಿದ್ದರೆ ಅದರ ಬಗ್ಗೆ ವಿಚಾರ ಮಾಡುವ ಸೂಚನೆಯನ್ನು ಕೊಡುತ್ತೇನೆ. ಏಕೆಂದರೆ, ತಮಿಳುನಾಡಿನವರು, ಆಂಧ್ರದವರು ಬಂದ್ ಮಾಡಿದ್ದಾರೆ. ಹಾಗೆಯೇ, ಕರ್ನಾಟಕದ ಜನರ ಭಾವನೆಗಳೇನೆಂಬುದನ್ನು ಈ resolution ಮೂಲಕ ತಿಳಿಸುವುದಿದೆ. ಈ resolution ಮೂಲಕ ಈ ರಾಜ್ಯದ ಐದೂವರೆ ಕೋಟಿ ಜನರ ಭಾವನೆಗಳೇನು ಇದೆ, ಹಿಂದುಳಿದ ಜಾತಿಯವರಿಗೆ IIM, IIT Institutions ನಲ್ಲಿ ಮೀಸಲಾತಿ ಕೊಡುವಾಗ stay ಬಂದಿರುವಂಥದ್ದು, ಈ ಜನರ ಭಾವನೆಗಳೇನೆಂಬುದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೋಸ್ಕರವಾಗಿ ನಮ್ಮ ಬೆಂಬಲ ವ್ಯಕ್ತಪಡಿಸಲಿಕ್ಕೋಸ್ಕರವಾಗಿ, ಒತ್ತಾಯ ಮಾಡಲಿಕ್ಕೋಸ್ಕರವಾಗಿ ಈ ತರಹದ ನಿರ್ಣಯ ಅಗತ್ಯವಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯ ತಂದಿದ್ದರು. ಆದರೆ, ಸರ್ಕಾರದವರು "ನಿರ್ಣಯವನ್ನು ನಾವೇ ಮಂಡಿಸುತ್ತೇವೆಂದು" ಮಂಡಿಸಿದ್ದಾರೆ. ಬಹಳ ಸಂತೋಷ. ನಾನು ಈ ನಿರ್ಣಯವನ್ನು ಬೆಂಬಲಿಸಿ, ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಈ ನಿರ್ಣಯದಲ್ಲಿ ಎರಡು ಪ್ರಮುಖವಾದ ಅಂಶಗಳನ್ನು ಗಮನಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಮೊದಲನೆಯದಾಗಿ, "ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು.." ಇಡೀ ಸದನ ಸ್ವಾಭಾವಿಕವಾಗಿ ನಾವು ಇದನ್ನು ಬೆಂಬಲಿಸಿಯೇ ಬೆಂಬಲಿಸುತ್ತೇವೆ. ಎರಡನೆಯದು, "ಹಿಂದುಳಿದ ವರ್ಗಗಳಿಗೆ ಶೇಕಡಾ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವುದು". ಏಕೆಂದರೆ, ಈ ಎರಡೂ ಅಂಶಗಳೂ ಬಹಳ ಪ್ರಮುಖವಾಗಿದ್ದು, ಮಾನ್ಯ ಸಿದ್ಧರಾಮಯ್ಯನವರು ತುಂಬಾ ಸ್ಪಷ್ಟವಾಗಿ ಎಲ್ಲ ಅಂಶಗಳನ್ನೂ ಕೂಡ ಬೆಳಕಿಗೆ ತಂದಿದ್ದಾರೆ. Court ಯಾವ ಯಾವ ರೀತಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡುತ್ತಿದೆ, ಹಿಂದೆ

ಅನೇಕ ವರದಿಗಳು ಬಂದಿದ್ದರೂ ಕೂಡ, ಹಿಂದಿನಿಂದಲೂ ಕೂಡ ಎಲ್ಲ ಸರ್ಕಾರಗಳು ಯಾವ ರೀತಿ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿರುವುದನ್ನು, ತುಂಬಾ ಸ್ಪಷ್ಟವಾಗಿ ಅವರ ಮನಸ್ಸಿನ ಭಾವನೆಯನ್ನು ಇಡೀ ಸದನದ ಮುಂದಿಟ್ಟಿದ್ದಾರೆ. ಹೀಗಾಗಿ, ಇವತ್ತು ನಾವು ಗಮನಿಸಬೇಕಾದದ್ದು ಏನೆಂದರೆ, Supreme Court "1931ನೇ census ಪ್ರಕಾರ ಮಾಡಿದ್ದು ತಪ್ಪು. ಈಗಿನ census, ಅಂಕಿಅಂಶಗಳ ಪ್ರಕಾರ ತೆಗೆದುಕೊಳ್ಳಿ" ಎಂದು ಒಂದು ತೀರ್ಪು ಕೊಟ್ಟಿದೆ. ಆದರೆ, ಈ stay ಕೊಡಬಾರದಿತ್ತು. 1931ರ census ಸರಿಯಿಲ್ಲ, ಈಗಿನ ಪ್ರಕಾರ ಮಾಡಿ ಎಂದು ಹೇಳುವುದಾಗಿದ್ದರೆ, ಕೇಂದ್ರ ಸರ್ಕಾರಕ್ಕೊಂದು time bound ಕೊಟ್ಟು, ತಕ್ಷಣ census ಮಾಡಲು ನೀವು ಆರು ತಿಂಗಳು ಅಥವಾ ಒಂದು ವರ್ಷ ಸಮಯ ತೆಗೆದುಕೊಳ್ಳಿ, ಅಲ್ಲಿಯತನಕ 1931ರ ಮೀಸಲಾತಿ ಅಂಕಿ ಅಂಶವೇನಿದೆ, ಅದರ ಪ್ರಕಾರ ನೀವು ಜಾರಿಗೆ ತನ್ನಿ ಎಂದು ಕೇಂದ್ರ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ, ಹಿಂದುಳಿದವರಿಗೆ ಅನ್ಯಾಯವಾಗುತ್ತಿಲ್ಲ. ಇವತ್ತೇನಾಗಿದೆ ಎಂದರೆ, 1931ರ census ನ ನೆಪವೊಡ್ಡಿ, Supreme Court ನಿಂದ ಹಿಂದುಳಿದ ವರ್ಗದವರಿಗೆ ದ್ರೋಹ ಮಾಡುವಂಥ ಪ್ರಯತ್ನ ನಡೆಯುತ್ತಿದೆಯಲ್ಲ, ಇದು ಬಹಳ ಅನ್ಯಾಯ. ಹೀಗಾಗಿ, ಈ ದಿಕ್ಕಿನಲ್ಲಿ Supreme Court ಅದನ್ನು ಪರಿಗಣನೆ ಮಾಡುವ ಸಂದರ್ಭದಲ್ಲಿ ಗಮನಿಸಬೇಕೆಂದು ನಾನು ಭಾವಿಸುತ್ತೇನೆ. ಕೇಂದ್ರ ಸರ್ಕಾರದ ಗಮನಕ್ಕೆ ಇನ್ನೊಂದು ಅಂಶ ಸಹ ಬರಬಹುದು. ಅದೇನೆಂದರೆ, Supreme Court ದಲಿತರ backlog ಹುದ್ದೆಗಳಿಗೂ ಕೂಡ ಇದೇ ರೀತಿ ಅನ್ಯಾಯ ಮಾಡಿತ್ತು. ಆಗ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎಲ್ಲ ಪಕ್ಷಗಳ ಒಪ್ಪಿಗೆ ತೆಗೆದುಕೊಂಡು ಸಂವಿಧಾನಕ್ಕೆ ತಿದ್ದುಪಡಿ ತಂದು backlog ಹುದ್ದೆಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಲಾಯಿತು. ಹೀಗಾಗಿ, ಕೇಂದ್ರ ಸರ್ಕಾರವೂ ಕೂಡ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬಹುದೆಂದು ನಾನಂದುಕೊಂಡಿದ್ದೇನೆ. ಕೇಂದ್ರ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಏಕೆಂದರೆ, ಹಿಂದಿನ ಅನೇಕ ವರ್ಷಗಳಿಂದ, ಅನೇಕ ವರದಿಗಳು ಬಂದಿದ್ದರೂ ಕೂಡ, ಹಿಂದುಳಿದವರಿಗೆ ಶೇಕಡಾ 27ರಷ್ಟು ಮೀಸಲಾತಿ ಕೊಟ್ಟಿರುವ ಈ ಸಂದರ್ಭದಲ್ಲಿ, ಇದಕ್ಕೆ stay ಬಂದಿರುವ ಸಂದರ್ಭದಲ್ಲಿ Supreme Court stay ಕೊಟ್ಟಿತು ಎಂದು ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ಸುಮ್ಮನೆ ಕುಳಿತುಕೊಳ್ಳಬಾರದು. ಯಾವ ರೀತಿ ವಾಜಪೇಯಿಯವರ ಸರ್ಕಾರವಿದ್ದಾಗ

amendment ತರಲಾಯಿತೋ, ಆ ರೀತಿ amendment ತಂದು ಮಾಡಬೇಕು. ಈಗ ಎಲ್ಲ ಪಕ್ಷಗಳ ಜೊತೆಗೆ ಪ್ರಧಾನ ಮಂತ್ರಿಗಳು ಮಾತನಾಡುತ್ತಿದ್ದಾರೆ. ತುಂಬಾ ಸಂತೋಷ. Amendment ತಂದು ಈಗ Bill ಏನು pass ಮಾಡಿದ್ದಾರೆ, ಅದನ್ನು ಕೂಡ ಜಾರಿಗೆ ತರಬೇಕೆನ್ನುವ ಒತ್ತಾಯವನ್ನು ಕೂಡ ನಾನು ಈ ಸಂದರ್ಭದಲ್ಲಿ ಮಾಡಲಿಕ್ಕಿಷ್ಟಪಡುತ್ತೇನೆ. ಎಲ್ಲ ಅಂಶಗಳ ಬಗ್ಗೆಯೂ ಕೂಡ ಮಾನ್ಯ ಸಿದ್ಧರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ತಮಿಳುನಾಡು, ಆಂಧ್ರ ರಾಜ್ಯಗಳವರು ಯಾವ ರೀತಿಯಾಗಿ ನಿರ್ಣಯ ಮಾಡಿದ್ದಾರೆಯೋ, ಅದೇ ರೀತಿ ರಾಜ್ಯ ಸರ್ಕಾರ, ನಾವು ಕೂಡ, ಒಟ್ಟಿಗೆ ನಿರ್ಣಯ ಮಾಡುತ್ತಿದ್ದೇವೆ. ಇದು ನಿಜಕ್ಕೂ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ವರ್ಗಗಳು ಅವರ ಜೊತೆಗೆ ನಾವಿದ್ದೇವೆ ಎನ್ನುವ ಭಾವನೆ ಹಿಂದುಳಿದ ವರ್ಗದವರಿಗೆ ಬರುತ್ತದೆ. ಹಾಗಾಗಿ, ಇವತ್ತಿನ ಈ ಸದನದ ತೀರ್ಮಾನ ಕೇವಲ ಯಾರೋ ಹಿಂದುಳಿದ ವರ್ಗದವರು ಮಾತ್ರ ಮಾಡುತ್ತಿರುವುದಲ್ಲ, ಇಡೀ ಸದನ, ಇಡೀ ಕರ್ನಾಟಕ ರಾಜ್ಯದ ಎಲ್ಲ ವರ್ಗದ ಜನರೂ ಕೂಡ ಹಿಂದುಳಿದ ವರ್ಗದವರ ಜೊತೆ ನಾವಿದ್ದೇವೆ, ಅನೇಕ ವರ್ಷಗಳಿಂದ ಆಗಿರುವಂಥ ಸಾಮಾಜಿಕ ನ್ಯಾಯದ ಕೊರತೆ ಮೂಲಕ ಅವರಿಗೇನು ಅನ್ಯಾಯವಾಗಿದೆ, ಅದಕ್ಕೆ ಇಡೀ ಸದನ ನಾವು ಒಂದಾಗಿದ್ದೇವೆನ್ನುವಂಥ ತೀರ್ಮಾನವನ್ನು ಇಂದು ಮಾಡುತ್ತಿರುವಂಥ ಸಂದರ್ಭದಲ್ಲಿ ಹಿಂದುಳಿದ ವರ್ಗದ ಜನರೂ ಸಹ ಯೋಚನೆ ಮಾಡುತ್ತಾರೆ. "ಹೌದು, ನಾವು ಮಾತ್ರ ಇದರ ಬಗ್ಗೆ ಹೋರಾಟ ಮಾಡುತ್ತಿರುವುದಲ್ಲ, ಇಡೀ ಕರ್ನಾಟಕ ರಾಜ್ಯದ ಎಲ್ಲ ಜನ ನಮ್ಮ ಜೊತೆಗಿದ್ದಾರೆನ್ನುವ ಭಾವನೆ" ಬರುವಂಥ ಈ ಸಂದರ್ಭ, ನಿಜಕ್ಕೂ ಕೂಡ ಕರ್ನಾಟಕ ರಾಜ್ಯದವರೆಲ್ಲರೂ ಮಾದರಿಯ ಹೆಜ್ಜೆಯನ್ನು ಇಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಕರ್ನಾಟಕ ಬಂದ್ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ :- It is only a suggestion.

ಶ್ರೀ ಕೆ.ಎಸ್. ಈಶ್ವರಪ್ಪ :- Yes, you are right. ಅದಕ್ಕೆ ನಾನು ಮೆಚ್ಚುತ್ತಿದ್ದೇನೆ. ಅದಕ್ಕೆ ನಾನು ಸಹ ಬೆಂಬಲವನ್ನು ಕೊಡುತ್ತಿದ್ದೇನೆ. ಈ ಬಂದ್ ಅನ್ನು ಕೂಡ ಯಾವುದೋ ಒಂದು ಜಾತಿ ಅಥವಾ ಯಾವುದೋ ಒಂದು ಪಕ್ಷ ಮಾಡುವಂಥ ಕೆಲಸ ಅಲ್ಲ. ಏಕೆಂದರೆ, ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಿದೆ ಎಂದು ಅನೇಕ ವರ್ಷಗಳಿಂದ ಕೇವಲ ಕೂಗು ಇದೆ. ಆ ಕೂಗು ಕೇವಲ ಕೂಗು ಆಗಬಾರದು. ಹಿಂದುಳಿದ

ವರ್ಗದ ವ್ಯಕ್ತಿಗಳಿಗೆ ಧ್ವನಿಯಾಗಿ ಇಡೀ ಕರ್ನಾಟಕ ರಾಜ್ಯದ ಜನ ನಾವಿದ್ದೇವೆ ಎನ್ನುವ ಮಾತು ಕರ್ನಾಟಕ ಬಂದ್ ಮುಖಾಂತರ ಅದರ ಒಂದು message Supreme Court ಗೂ ಹೋಗುತ್ತದೆ, ಕೇಂದ್ರ ಸರ್ಕಾರಕ್ಕೆ ಕೂಡ ಬೆಂಬಲ ಕೊಡಬೇಕಾಗುತ್ತದೆ. Amendment ತರುವುದಕ್ಕೆ ತಕ್ಷಣ ಗಮನ ಕೊಡಬೇಕಾಗುತ್ತದೆ. ಹೀಗಾಗಿ, ಇವತ್ತೇನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, ಇದಕ್ಕೆ ಇಡೀ ಸದನ ಖಂಡಿತ ಬೆಂಬಲವನ್ನು ಕೊಡುತ್ತದೆ ಎಂದು ಹೇಳುತ್ತಾ, ವೈಯಕ್ತಿಕವಾಗಿ ನನ್ನ ಬೆಂಬಲವನ್ನು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :- ಆಗಲೇ ಒಂದು ವಿಷಯ ಹೇಳುವುದು ಮರೆತಿದ್ದೆ. Mandal Commission ವರದಿಯಲ್ಲಿ, 1992ರಲ್ಲಿ 9 ಸದಸ್ಯರ ಮಾನ್ಯ ನ್ಯಾಯಾಧೀಶರುಗಳು ಏನು judgement ಕೊಟ್ಟಿದ್ದಾರೆ, ಆಗ ಮಾಡುವಾಗ ಕೇಂದ್ರ ಸರ್ಕಾರದಲ್ಲಿ ಒಂದು permanent Backward Class Commission ಇರಬೇಕೆಂದು ಸಲಹೆ, direction ಕೊಟ್ಟಿದ್ದಾರೆ. ಹಾಗೆಯೇ, ಪ್ರತಿ ರಾಜ್ಯಗಳಲ್ಲಿ ಒಂದೊಂದು permanent Backward Class Commission ಇರಬೇಕು. ಅದನ್ನು ಅವತ್ತು Supreme Court ಮಾಡಿದ್ದ ಉದ್ದೇಶವೇನೆಂದರೆ, ಯಾರು Backward Class ನ list ನಲ್ಲಿರಬೇಕು, ಯಾರನ್ನು ತೆಗೆದು ಹಾಕಬೇಕು ಅನ್ನತಕ್ಕಂಥದ್ದನ್ನು ಆಗಿಂದಾಗ್ಗೆ permanent Backward Class Commission reivew ಮಾಡಿ, ಯಾರು ಅರ್ಹರು, ಯಾರು ಅನರ್ಹರು, ಯಾರು ಅರ್ಹರಲ್ಲ ಅಥವಾ ಯಾರು ಮೀಸಲಾತಿಗೆ ಒಳಪಡುವುದಿಲ್ಲ ಅಥವಾ ಒಳಪಡಬೇಕಾದವರು ಹೊರಗಡೆ ಇದ್ದರೆ, ಅವರನ್ನು ಸೇರಿಸಬೇಕು. ಅವರನ್ನು ತೆಗೆದು ಹಾಕಿದ್ದಾರೆನ್ನುವ ಕಾರಣಕ್ಕಾಗಿಯೇ ಕರ್ನಾಟಕದಲ್ಲಿಯೂ ಕೂಡ ಮೊದಲನೇ permanent Backward Class Commission ರಚನೆಯಾಯಿತು. ಅದು ರಚನೆಯಾಗಿ, ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಧ್ಯಕ್ಷರನ್ನು ತೆಗೆದುಬಿಟ್ಟರು, ಸದಸ್ಯರನ್ನೂ ತೆಗೆದುಬಿಟ್ಟಿದ್ದಾರೆ. ಇವತ್ತಿನವರೆಗೆ ಅದನ್ನು reconstitute ಮಾಡಿಲ್ಲ. ಅಧ್ಯಕ್ಷರನ್ನೂ ನೇಮಕ ಮಾಡಿಲ್ಲ, ಸದಸ್ಯರನ್ನೂ ನೇಮಕ ಮಾಡಿಲ್ಲ. ನಾನು 2004-05ನೇ ಸಾಲಿನಲ್ಲಿ ಬಜೆಟ್ ಮಂಡಿಸುವಾಗ ಜಾತಿವಾರು Socio-economic survey ಮಾಡಬೇಕೆಂದು ನಾನು ಒಂದು ಕೋಟಿ ರೂಪಾಯಿಗಳನ್ನಿಟ್ಟಿದ್ದೆ. ಕೇಂದ್ರ ಸರ್ಕಾರದವರಿಗೆ ಪತ್ರ ಬರೆದು ನೀವು ಸ್ವಲ್ಪ ಸಹಾಯ ಮಾಡಿ ಎಂದು ಕೇಳಿದಾಗ ಅವರು 21 ಕೋಟಿ ರೂಪಾಯಿಗಳನ್ನು

ಕೊಟ್ಟರು. ಒಟ್ಟು 22, 23 ಕೋಟಿ ರೂಪಾಯಿಗಳನ್ನು permanent Backward Class Commission ಗೆ ಕೊಟ್ಟು survey ಮಾಡಿ ಎಂದು ಹೇಳಿದ್ದೆವು. ಅದಾದ ಮೇಲೆ, ಕಳೆದ ಒಂದು ವರ್ಷಕ್ಕಿಂತ ಹೆಚ್ಚಾಗಿ Backward Class Commission is not functioning, 22 crore rupees is lying with the Backward Commission. ಆದುದರಿಂದ, ಕೂಡಲೇ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, permanent Backward Class Commission ಅನ್ನು ಕೂಡಲೇ ರಚನೆ ಮಾಡಬೇಕು. ಆ ಹಣವನ್ನೇನು ಇಟ್ಟಿದ್ದೀರಿ, ಅದನ್ನು ಉಪಯೋಗಿಸಿಕೊಂಡು ಕರ್ನಾಟಕದಲ್ಲಿ Socio-economic survey ಮಾಡಬೇಕು. ಕೇಂದ್ರ ಸರ್ಕಾರದವರೂ ಮಾಡಲಿ. ನಾನು ಒತ್ತಾಯ ಮಾಡುತ್ತೇನೆ. Socio-economic survey on the basis of the caste ಮಾಡಲಿ. ಕರ್ನಾಟಕದಲ್ಲಿಯೂ ಕೂಡ ಈಗಾಗಲೇ ಮಾಡಲಿಕ್ಕೆ ನಾವು ಬಜೆಟ್‌ನಲ್ಲಿ ತೀರ್ಮಾನ ಮಾಡಿ, ಸದನದಲ್ಲಿ ಒಪ್ಪಿಗೆ ಕೂಡ ಆಗಿದೆ. ಅದನ್ನು ಕೂಡ ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. Supreme Court ಈ ಕಾರಣಕ್ಕೋಸ್ಕರವಾಗಿಯೇ ಇಂಥವೆಲ್ಲ ಬರುತ್ತವೆನ್ನುವ ಕಾರಣಕ್ಕಾಗಿಯೇ OBC ಯ ಎಷ್ಟು ಜನರಿದ್ದಾರೆ, ಅವರ್ಯಾರು ಅನ್ನುವುದನ್ನೆಲ್ಲ ಚರ್ಚೆ ಮಾಡಿ report ಕೊಡುವುದಕ್ಕೋಸ್ಕರವಾಗಿಯೇ permanent Backward Class Commission ರಚನೆ ಮಾಡಿದ್ದು. ಇದನ್ನೂ ಕೂಡ Supreme Court ನ ದ್ವಿ ಸದಸ್ಯ ಪೀಠ ಪರಿಗಣಿಸಬೇಕಾಗಿತ್ತು. ಏಕೋ ಪರಿಗಣಿಸಲಿಲ್ಲ. ಪರಿಗಣಿಸಬೇಕಾಗಿತ್ತು ಎಂಬುದು ನನ್ನ ಭಾವನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಅಧ್ಯಕ್ಷರೆ, ಸರ್ಕಾರವೇನು ನಿರ್ಣಯ ತಂದಿದೆ, ನಾನೂ ಕೂಡ ಅದನ್ನು ಅನುಮೋದಿಸುತ್ತೇನೆ. ನನ್ನ ಪಕ್ಷ ಕೂಡ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕೊಡಬೇಕೆಂದು ಹೇಳಿ ತಾತ್ವಿಕವಾದ ಸಿದ್ಧಾಂತಗಳನ್ನು ಒಪ್ಪಿಕೊಂಡಿರುವ ಪಕ್ಷ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. Socialism ಅಂದರೆ providing equal opportunity to all. ಎಲ್ಲರಿಗೂ ಸಮನಾದ ಅವಕಾಶಗಳನ್ನು ದೊರಕಿಸಬೇಕು. ಎಲ್ಲಿಯವರೆಗೆ ಸಮನಾದ ಅವಕಾಶಗಳು ಬರುವುದಿಲ್ಲ, ಅವರಾಗಿಯೇ ತೆಗೆದುಕೊಳ್ಳಲಾಗುವುದಿಲ್ಲ, ಅಲ್ಲಿಯವರೆಗೆ ಸರ್ಕಾರ ಕೂಡ ಅವಕಾಶವನ್ನು ದೊರಕಿಸಲಿಕ್ಕೆ ಮುಂದಾಗಬೇಕು. ಇಲ್ಲಿ ಬಹಳ ಚರ್ಚೆ ಮಾಡುವಂಥ ವಿಷಯ ಈ ಸಭೆಗಿದೆ

ಎಂದು ಹೇಳಿ ನಾನು ಭಾವಿಸುವುದಿಲ್ಲ. ಇದು ಈ ಸಭೆಯ perview ನಲ್ಲಿ ಕೂಡು ಬರುವುದಿಲ್ಲ. Backward Class ಎಂದರೇನು? ಇದರಲ್ಲಿ ಯಾರು ಬರುತ್ತಾರೆ? ಎಂದು ಸಿದ್ಧರಾಮಯ್ಯನವರು ಹೇಳಿದ್ದಾರೆ. ಆದರೆ, ನನ್ನ ದೃಷ್ಟಿಯಲ್ಲಿ ಚರ್ಚೆಯಾಗಬೇಕಾಗಿಲ್ಲವೆಂದು ಹೇಳಿ ಒಂದು ಮಾತನ್ನು ಹೇಳುತ್ತೇನೆ. When Constitution provides, ಏನಾದರೊಂದು law ಮಾಡಲಿಕ್ಕೆ ಸಂವಿಧಾನದಲ್ಲಿ ಅವಕಾಶವಿದ್ದಾಗ ಆ provision ಕೆಳಗಡೆ law ಮಾಡಿದಾಗ court ಗಳು ಹೀಗೇಕೆ ಅರ್ಥೈಸುತ್ತವೆಂದು ನನಗರ್ಥವಾಗಿಲ್ಲ. This is the wisdom of that House. It is empowered to make laws. ಹಾಗಾದರೆ, ಇಡೀ parliament ಗೆ ಮಿದುಳು ಇರಲಿಲ್ಲವೇ ಎಂದು ಕೇಳಬೇಕಾಗುತ್ತದೆ. ಇಡೀ parliament ಮಾಡುವ ತೀರ್ಮಾನ ಈ ರಾಷ್ಟ್ರಕ್ಕೆ ಶಾಸನವಾಗುತ್ತದೆಯೇ ಇಲ್ಲವೇ ಬೇರೆ ಕಡೆ ವ್ಯಾಖ್ಯಾನ ಮಾಡಿದಾಗ ಶಾಸನವಾಗುತ್ತದೆಯೇ ಎಂಬ ಪ್ರಶ್ನೆ ಬರುತ್ತದೆ. Contradictions ಏನೂ ಇಲ್ಲವೇ ಇಲ್ಲ. ಸಂವಿಧಾನಕ್ಕೆ ವಿರೋಧವಾದ ಯಾವುದೇ ಶಾಸನ ಈ ಪ್ರಕರಣದಲ್ಲಿ Parliament ನಲ್ಲಿ pass ಆಗಲಿಲ್ಲ. Within the provision, ಏನು ಅವಕಾಶವನ್ನು ಸಂವಿಧಾನ ಮಾಡಿದೆ ಎಂದು Constitutional right ಎಂದು ನಾನು ಮಾತನಾಡುವುದಿಲ್ಲ. It is not a fundamental right. Parliament ಅಥವಾ ರಾಜ್ಯ ವಿಧಾನಸಭೆಗಳು ಅಂದುಕೊಂಡರೆ, ಅಗತ್ಯವೆಂದು ಅನಿಸಿದರೆ ಈ ರೀತಿ ನಾವು reservations ಅನ್ನು ಹಿಂದುಳಿದ ವರ್ಗದವರಿಗೆ OBC ಯವರಿಗೆ ಕೊಡಬಹುದೆಂದು ಏನು ಅವಕಾಶವಿದೆ, ಆ ಅವಕಾಶದ ಕೆಳಗೆ ಮಾಡಿರುವುದು ಸಮಯೋಚಿತವಾಗಿದೆ. ಇದು ಎಲ್ಲ ಕಾಲಕ್ಕೂ ಅವಕಾಶಗಳನ್ನು ಉಪಯೋಗ ಮಾಡಿಕೊಂಡು ಎಲ್ಲೆಲ್ಲಿ ದುರ್ಬಲರಿದ್ದಾರೆ, ಎಲ್ಲೆಲ್ಲೆ ಸಮಾಜದಿಂದ ಹೊರಗಡೆ ನಿಂತಿರುವ ಜನರನ್ನು ಒಳಗಡೆ ತೆಗೆದುಕೊಳ್ಳಲಿಕ್ಕೆ ಅವಕಾಶ ಕೊಡಬೇಕಾಗಿದೆ, ಅದನ್ನು ಕೊಟ್ಟುಕೊಂಡು ಬಂದಿರುವುದು ಸ್ವಾಗತಾರ್ಹ. Backward Classes ಅನ್ನು ಬೇರೆ ಎಲ್ಲ ಕಡೆ consider ಮಾಡಿ educational institutions ನಲ್ಲಿ ನಾವು ಮಾಡುವುದಿಲ್ಲ, ಅದಕ್ಕೇನೋ ಮಾತು ಕೊಡುತ್ತೇವೆ, ಏನೋ ಅರ್ಥೈಸುವುದು ಕೂಡ logical ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಹಾಗಾದರೆ, ಈ state ನಲ್ಲಿ ಓದುವುದು logical ಆದರೆ Indian Institute of Science ನಲ್ಲಿ, Indian Institute of Management ನಲ್ಲಿ, IIT ನಲ್ಲಿ ಓದುವುದು logical ಅಲ್ಲ ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ. Environment and

heredity ಎರಡೂ important. ಒಬ್ಬ ಮನುಷ್ಯ ಮೇಲೆ ಬರಲು environment ಅನ್ನು ನಾವು ಸೃಷ್ಟಿ ಮಾಡಿಕೊಡಬೇಕಲ್ಲವೆ? ಅದನ್ನು ಕೊಡದೇ, ಅವಕಾಶವನ್ನೇ ಕೊಡದೇ ಇಲ್ಲ, ನೀವು talented ಅಲ್ಲ, ನೀವು ಆ ಭಾಗದಲ್ಲಿ ಬರುವುದಿಲ್ಲವೆಂದು ವ್ಯಾಖ್ಯಾನ ಮಾಡುವುದು ಅಷ್ಟೊಂದು ಸಮಯೋಚಿತವಾದ ತೀರ್ಮಾನವೆಂದು ಅನಿಸುವುದಿಲ್ಲ. With all that ನಾವಿಲ್ಲಿ Supreme Court ತೀರ್ಮಾನವನ್ನು ವಿಮರ್ಶೆ ಮಾಡಲಿಕ್ಕೆ ನಿಂತಿಲ್ಲ. I do not understand. ಏಕೆ ಈ ರೀತಿಯಾದ ತೀರ್ಪು ಬಂತೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಈ ಸಭೆಯ ಮೂಲಕ ಕೇಂದ್ರ ಸರ್ಕಾರವನ್ನು ನಡೆಸುವವರಿಗೆ ಮನವಿ ಮಾಡುವುದೇನೆಂದರೆ, ಇದನ್ನು ಮತ್ತೊಂದು ಸಲ ಪರಿಶೀಲನೆ ಮಾಡಲು ಅರ್ಜಿ ಹಾಕಬೇಕಾಗಿದೆ. ಪೂರಕವಾದ ಎಲ್ಲ ಮಾಹಿತಿಯನ್ನು court ಮುಂದೆ ಕೊಟ್ಟು ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಹಿಂದುಳಿದ ವರ್ಗದವರಿಗೆ ಸಿಗಬೇಕಾದ ನ್ಯಾಯವೇನಿದೆ, ಅದನ್ನು ದೊರಕಿಸಿಕೊಡಲಿಕ್ಕೆ ಅವರು ಹೋರಾಟ ಮಾಡಬೇಕು. ಆ ಹೋರಾಟದಲ್ಲಿ ಕರ್ನಾಟಕ ರಾಜ್ಯದ ಜನತೆ ಕೂಡ ನಿಮ್ಮ ಜೊತೆಗಿದ್ದಾರೆಂದು ಹೇಳಿ ನಾವು ಅವರಿಗೆ ಈ ಮೂಲಕ ಮನವರಿಕೆ ಮಾಡಿಕೊಡಲಿಕ್ಕೆ ನಾವೂ ಕೂಡ ಇದರಲ್ಲಿ ಭಾಗಿಗಳು. ಇದು ನ್ಯಾಯಬದ್ಧವಾಗಿರುವಂಥ ತೀರ್ಪಲ್ಲ. ನ್ಯಾಯಬದ್ಧವಾದ ತೀರ್ಪಿಗೆ ಇನ್ನೊಂದು ಮನವಿಯನ್ನು ಕೇಂದ್ರ ಸರ್ಕಾರ ಸಲ್ಲಿಸಬೇಕೆಂದು ಕೇಳುತ್ತಾ ಮತ್ತೊಮ್ಮೆ ಸನ್ಮಾನ್ಯ ಮುಖ್ಯಮಂತ್ರಿಗಳು ಅಥವಾ ಸರ್ಕಾರ ತಂದಿರುವ ನಿರ್ಣಯವೇನಿದೆ, ಅದನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೆ, ಇದೊಂದು ಐತಿಹಾಸಿಕವಾದ ನಿರ್ಣಯಕ್ಕೆ ನಮ್ಮ ಸದನ ಬೆಂಬಲ ಕೊಡುತ್ತದೆ. ಬಹಳ ಪ್ರಾಮುಖ್ಯವಾದ ಉನ್ನತ ಶಿಕ್ಷಣದಲ್ಲಿ ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರ ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಬೇಕೆಂಬ ನಿರ್ಣಯದ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಹೆಚ್ಚು ಕಡಿಮೆ ನಾವೆಲ್ಲ ಸಂಪೂರ್ಣವಾಗಿ, ಇಡೀ ಸದನ ಒಕ್ಕೊರಲಿನಿಂದ ಒಪ್ಪಿಕೊಳ್ಳುತ್ತೇವೆ. ಇದಕ್ಕೆ ಕಾರಣ ಸಹ ಇದೆ. ಶತಮಾನಗಳ ಕಾಲ ನಮ್ಮ ರಾಜ್ಯ ಹಿಂದುಳಿದ ವರ್ಗಗಳ ಸಾಮಾಜಿಕ ನ್ಯಾಯಕ್ಕಾಗಿ ತೀವ್ರವಾದಂಥ ಬೆಂಬಲವನ್ನು ಕೊಟ್ಟಿದೆ. ಹೋರಾಟವನ್ನು ಮಾಡಿದ್ದಾರೆ. ಈ ಪ್ರಜಾಪ್ರಭುತ್ವ

ವ್ಯವಸ್ಥೆ ಬಂದ ನಂತರ ಶ್ರೀಮಾನ್ ಸಿದ್ಧರಾಮಯ್ಯನವರು ಹೇಳಿದ ಹಾಗೆ ಆರ್.ನಾಗಣ್ಣಗೌಡರ ಸಮಿತಿ ಆ ಕಾಲದಲ್ಲಿ ಅದು ನಿಜಕ್ಕೂ ಒಳ್ಳೆಯ ಸಮಿತಿ. ಬಳ್ಳಾರಿ ಬಂದು ನಮ್ಮ ಕರ್ನಾಟಕಕ್ಕೆ ಸೇರಿತು. ಆಗ ನಮ್ಮಲ್ಲಿ ನಾಗಣ್ಣಗೌಡರು ಮಂತ್ರಿಯಾಗಿದ್ದರು. ಅದಾದನಂತರ ದೇವರಾಜು ಅರಸುರವರ ಕಾಲದಲ್ಲಂತೂ ಹೊಸ ಯುಗವೇ ಆರಂಭವಾಯಿತು. ಅದರಲ್ಲೇನು ಬೇರೆ ಮಾತಿಲ್ಲ. ಎಷ್ಟೋ ಜನ ಶಾಸಕಾಂಗದೊಳಗೆ ಬರದೇ ಇದ್ದಂಥವರು, ಈ ಜನ್ಮದಲ್ಲಿ ಮಂತ್ರಿಯಾಗುವುದಕ್ಕೆ ಸಾಧ್ಯವೇ ಇಲ್ಲವೆಂದುಕೊಂಡಿದ್ದವರೆಲ್ಲ ಮಂತ್ರಿಗಳಾದರು, ಶಾಸಕರಾದರು. ನಿಜಕ್ಕೂ ಅದು ಆದರ್ಶ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ, ಇವತ್ತು ಕೇಂದ್ರ ಸರ್ಕಾರ ತಂದಿರುವ ನಿರ್ಣಯ ನಿಜಕ್ಕೂ ಆದರ್ಶವಾದಂಥ ನಿರ್ಣಯ. ಒಂದು ನಿರ್ಣಯ, ಮತ್ತೊಂದು ಕಡೆ ನಾವೆಲ್ಲರೂ ಚಿಂತನೆ ಮಾಡಬೇಕಾದದ್ದೇನೆಂದರೆ, ಹಿಂದೆ ನ್ಯಾಯಾಂಗದ ವಿರುದ್ಧವೇ ಕೃಷ್ಣ ಮೆನನ್‌ರವರು, ನಂಬೂದರಿ ಪಾಡ್‌ರವರು ಹೋರಾಟ ಮಾಡಿದ್ದರು. ನ್ಯಾಯಾಂಗದ ವಿಚಾರಗಳ ಬಗ್ಗೆ ಇತ್ತೀಚಿನ ದಿನಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿ ಆವತ್ತು ಬಂದ ರೀತಿಯಲ್ಲಿ ಇದೂ ಬಂದಿದೆ ಎಂದು ಹೋರಾಟ ನಡೆದಿತ್ತು. ಹಿಂದೆ ಮಾನ್ಯ ರಮೇಶ್‌ಕುಮಾರ್‌ರವರು ಇಲ್ಲಿ ಅಧ್ಯಕ್ಷರಾಗಿದ್ದಾಗಲೂ ಸಮಗ್ರವಾದ ಚರ್ಚೆ ನಡೆಯಿತು. ನಮ್ಮ ಶಾಸಕಾಂಗ ಇದನ್ನು ಒತ್ತುವರಿ ಮಾಡಿದಾಗ, ಪ್ರೆಸ್ ಕ್ಲಬ್ ಅನ್ನು ಒತ್ತುವರಿ ಮಾಡಿದಾಗ, ಅವರಿಗೆ ಏನು ಅಧಿಕಾರ ಇದೆಯೆಂದು ಇಲ್ಲಿ ಸಮಗ್ರವಾಗಿ ಚರ್ಚೆ ನಡೆಯಿತು. ಅಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗ ಈ ಪ್ರಶ್ನೆ ಸ್ವಲ್ಪ ಬಹಳ ತೀವ್ರವಾಗಿ ನಡೆಯುತ್ತಿದೆ. ಮಾನ್ಯ ಸೋಮನಾಥ ಚಟರ್ಜಿಯವರು ನಿಜಕ್ಕೂ ಅವರು ಅನೇಕ ವಿಚಾರಗಳ ಬಗ್ಗೆ ನಾನು ಅವರನ್ನು ಮೆಚ್ಚುತ್ತೇನೆ. ಅವರು ಅಧ್ಯಕ್ಷರಾದ ಮೇಲೆ ಈ ವಿಚಾರದಲ್ಲಿ ನ್ಯಾಯಾಂಗದ ಬಗ್ಗೆ ಅನೇಕ ಸಾರಿ ಮಾತನಾಡಿದ್ದಾರೆ. ಮೊನ್ನೆ ನಮ್ಮ ಪ್ರಧಾನಿಯವರು ಎಂದೂ ಈ ರೀತಿ ಮಾತನಾಡಿದವರಲ್ಲ. ಅವರನ್ನು ನೋಡಿದಾಗ ಆ ಒಂದು ನ್ಯಾಯಾಧೀಶರುಗಳ ಮುಂದೆಯೇ ತಮ್ಮ ಇತಿಮಿತಿ ಬಿಟ್ಟು ಹೋಗಬಾರದೆಂದು ಹೇಳಿದ್ದಾರೆ. ಅದು ಬಿಟ್ಟು ಹೋಗಬಾರದೆನ್ನುವ ಎಚ್ಚರಿಕೆ ಕೊಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ ತೀವ್ರವಾಗಿ ಮುಂದೆ ಹೋಗತಕ್ಕಂಥದ್ದು, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಈ ದೇಶದಲ್ಲಿ ನಡೆಯಬೇಕಾಗುತ್ತದೆ. ನಾವು ನ್ಯಾಯಾಂಗ ಮತ್ತು ಶಾಸಕಾಂಗ ಇದರ ಬಗ್ಗೆ ಸಮಗ್ರವಾದ ಚರ್ಚೆ ನಡೆಯಬೇಕಾಗಿದೆ. ಇಂಥ ಸಂದರ್ಭದಲ್ಲಿ ನಾವು ಉಪಯೋಗಿಸಿಕೊಂಡು ಸಾರ್ವಭೌಮತ್ವವಿರತಕ್ಕಂಥ ಲೋಕಸಭೆ

ಇದನ್ನು ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ಹಿಂದೆ ಬೀಳಬಾರದು. ಇದಕ್ಕೆ ಇಡೀ ದೇಶದ ನಮ್ಮ ರಾಜ್ಯವೊಂದೇ ಅಲ್ಲ, ದಕ್ಷಿಣ ಇಂಡಿಯಾ ಒಂದೇ ಅಲ್ಲ. ಇಡೀ ದೇಶದ ಸಂಪೂರ್ಣ ಜನತೆ ಲೋಕಸಭೆಗೆ ಬೆಂಬಲ ಕೊಡುತ್ತೇವೆ ಮತ್ತು ಕೇಂದ್ರ ಸರ್ಕಾರಕ್ಕೆ ಈ ನಿರ್ಣಯಕ್ಕೆ ನಾವು ಸಂಪೂರ್ಣವಾದ ಬೆಂಬಲ ಕೊಡುತ್ತೇವೆ. ಮಾನ್ಯ ಸಿದ್ಧರಾಮಯ್ಯನವರು ಹೇಳಿದ ಹಾಗೆ, ತಮಿಳುನಾಡಿನಲ್ಲಿ ಬಂದ್ ಮಾಡಿದ್ದಾರೆ, ಆಂಧ್ರದಲ್ಲಿ ಬಂದ್ ಮಾಡಿದ್ದಾರೆ, ನಾವು ಬಂದ್ ಮಾಡೋಣ. ಸರ್ಕಾರವೇ ಬಂದ್‌ಗೆ ನಾಯಕತ್ವ ವಹಿಸಿದರೆ ಆ ಬಗ್ಗೆ ಈ ನಿರ್ಣಯಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ನಾವು ಕೊಡುತ್ತೇವೆ, ಜೊತೆಗೆ ಸರ್ಕಾರ ಬಂದ್‌ಗೂ ಕರೆ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಮ್ಮ ಮೂಲಕ್ಕೆ ಹೇಳುತ್ತೇನೆ.

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಏನು ನಿರ್ಣಯ ತಂದಿದೆ, ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ, ಆದರೆ ಬಂದ್‌ಗೆ ನನ್ನ ಬೆಂಬಲವಿಲ್ಲ. ನಾನು ಯಾವ ಪಕ್ಷದಲ್ಲಿ ಇಲ್ಲ, ಆದರೆ ಯಾವ ಪಕ್ಷಗಳು ಸೇರಿಕೊಂಡು ಬಂದ್‌ಗೆ ಕರೆಕೊಟ್ಟರೂ ನಾನು ಅದಕ್ಕೆ ಬೆಂಬಲವನ್ನು ಕೊಡುವುದಿಲ್ಲ. ಅವರು ಸೂಚನೆಯನ್ನು ಮಾತ್ರ ಕೊಟ್ಟಿರುವಂಥದ್ದು. ಇದು ಕೇವಲ ತಡೆಯಾಜ್ಞೆ, ಇನ್ನು ಅಂತಿಮ ಆದೇಶವಾಗಿಲ್ಲ. ಕೇಂದ್ರ ಸರ್ಕಾರಕ್ಕೆ ನಾವು ಬೆಂಬಲವನ್ನು ವ್ಯಕ್ತಿಪಡಿಸುವಂಥದ್ದು ಅದನ್ನು vacate ಮಾಡಿಸಿ ಎಂದು ಮಾಡುತ್ತಿದ್ದೇವೆ. ಫೈನಲ್ ಆರ್ಡರ್ ಆಗಿ ನಂತರದ ಬೆಳವಣಿಗೆಗಳನ್ನು ಆ ನಂತರ ನೋಡೋಣ. ಇವತ್ತು ಕೇವಲ ತಡೆಯಾಜ್ಞೆಯಿದ್ದದ್ದನ್ನು ತೆರವುಗೊಳಿಸಲಿಕ್ಕೆ ಮಾತ್ರ ನಾವು ಕೇಂದ್ರ ಸರ್ಕಾರಕ್ಕೆ ಬೆಂಬಲವನ್ನು ವ್ಯಕ್ತಪಡಿಸುವಂಥದ್ದು. ಆಮೇಲೆ ನ್ಯಾಯಲಯದಲ್ಲಿ ಏನಾಗುತ್ತದೆ ಎಂದು ನೋಡೋಣ. ಹಿಂದೆ ಮಂಡಲ್ ಕಮಿಶನ್ ವರದಿ ಜಾರಿಗೆ ತಂದಾಗ ಯಾರ್‍ಯಾರು ವಿರೋಧವನ್ನು ಮಾಡಿದರು ನಂತರದ ದಿನಗಳಲ್ಲಿ ಅವರೇ ಬದಲಾವಣೆಯಾಗಿ ಪರವಾಗಿ ಬಂದಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಈಶ್ವರಪ್ಪನವರು ಮಾತನಾಡಿದರು. ಆಮೇಲೆ ಕಳೆದ ಬಾರಿ ಸುಪ್ರೀಂಕೋರ್ಟಿನಲ್ಲಿ ಮಂಡಲ್ ಕಮಿಶನ್ ಇದರಲ್ಲಿ ಕ್ರೀಮಿ ಲೇಯರ್ ಅನ್ನು ತಂದರು. ಕ್ರೀಮಿ ಲೇಯರ್, ಹಿಂದೊಮ್ಮೆ ವಿ.ಪಿ. ಸಿಂಗ್ ರವರು ಪ್ರಧಾನಿಯಾಗಿದ್ದಾಗ ದೇಶದ ಎಲ್ಲಾ ಯುವ ನಾಯಕರ ಸಭೆಯನ್ನು ಕರೆದಿದ್ದರು, ನಾನು ಹೋಗಿದ್ದೆ, ನಾನು ಅಂದೇ ಹೇಳಿದ್ದೆ. ಅದನ್ನು ಕೆಟಗರೈಸ್ ಮಾಡಿ ಎಂದು ಹೇಳಿದ್ದೆ. ಯಾವ ಕುಟುಂಬಕ್ಕೆ ಮೀಸಲಾತಿಯ ಸೌಲಭ್ಯ ಸಿಕ್ಕಿಲ್ಲ ಅವರಿಗೆ ಪ್ರಥಮ ಆದ್ಯತೆ ಕೊಡಿ.

ನಂತರ ಯಾವ ಕುಟುಂಬಕ್ಕೆ ಕ್ಲಾಸ್ ಫೋರ್, ಕ್ಲಾಸ್ ತ್ರೀ ಕೆಲಸ ಸಿಕ್ಕಿದೆ ಅವರಿಗೆ ಕೊಡಿ. ನಂತರ ಯಾವ ಕುಟುಂಬಕ್ಕೆ ಐಎಎಸ್ ಅಥವಾ ಕ್ಲಾಸ್ – 1 ಆಫೀಸರ್ ಆಗಿದ್ದಾರೋ ಅವರನ್ನು ಕನ್‌ಸೀಡರ್ ಮಾಡಿ ಎಂದು ಹೇಳಿದ್ದೆ. ಆದರೆ ಇನ್ನೊಂದು ಆಲೋಚನೆಯನ್ನು ಮಾಡಬೇಕು. ಯಾವ ಹಂತದಲ್ಲಿ ಅವರನ್ನು ಹೊರಗಿಡಬೇಕು ಎನ್ನುವ ಬಗ್ಗೆ ಚರ್ಚೆ ಪ್ರಾರಂಭಿಸಬೇಕಾಗಿದೆ. ಇವತ್ತು ಅದರ ಬಗ್ಗೆ ಚರ್ಚೆಯ ಅವಶ್ಯಕತೆಯಿಲ್ಲವೆಂದು ಹೇಳುತ್ತಾ, ಇದರ ಬಗ್ಗೆ ಅಂತಿಮ ತೀರ್ಮಾನವಾಗುವವರೆಗೆ ಇದರ ಬಗ್ಗೆ ನ್ಯಾಯಾಲಯ ಮತ್ತು ಬೇರೆಯದರ ಬಗ್ಗೆ ಚರ್ಚೆ ಮಾಡುವುದು ಬೇಡ. ಮಾನ್ಯ ಸಿದ್ಧರಾಮಯ್ಯನವರು prima-facie ತಡೆಯಾಜ್ಞೆ ಕೊಡಲಿಕ್ಕೆ ಕೇಸ್ ಇಲ್ಲವೆಂದರು. ಈಗ ಪ್ರಧಾನ ಮಂತ್ರಿಯವರು ನೇರವಾಗಿ ಹೇಳಿಕೆ ಕೊಟ್ಟಾಗಿದೆ. ನ್ಯಾಯಾಧೀಶರ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನಮ್ಮ ನ್ಯಾಯವಾದಿಗಳು ಸುಪ್ರೀಂಕೋರ್ಟಿನ ಮುಂದೆ ವಾದವನ್ನು ಮಾಡುತ್ತಾರೆ, ಅಲ್ಲಿ ಇದನ್ನು ತೆರವುಗೊಳಿಸಿದರೆ ಈ ಸಮಸ್ಯೆ ಬಗೆಹರಿಯಿತು. ಇದು ಆಗದೇ ಇದ್ದಾಗ ಮುಂದೆ ಇದರ ಬಗ್ಗೆ ಚರ್ಚೆಯನ್ನು ಮಾಡೋಣವೆಂದು ಹೇಳುತ್ತಾ, ಪುನಃ ಈ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಈ ಒಂದು ನಿರ್ಣಯವನ್ನು ಐಎಎಂ ಮತ್ತು ಐಐಟಿಯಲ್ಲಿ ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಎನ್ನುವ ಏನು ನಿರ್ಣಯವನ್ನು ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರ ಸ್ವಾಮಿಯವರು ಏನು ತಂದಿದ್ದಾರೆ ಅದನ್ನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ ಮತ್ತು ಬೆಂಬಲವನ್ನು ಕೂಡ ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಈ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳು ಕಳೆದಿವೆ. ನಾವೀಗ ಅರವತ್ತನೇ ವರ್ಷದಲ್ಲಿ ಇದ್ದೇವೆ. ಆದರೂ ನಾವು ಇಂಥ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ಈ ಸಮಾಜ ಈ ರಾಷ್ಟ್ರದಲ್ಲಿ ಚಿಂತನೆ ನಡೆಯುತ್ತಿದೆಂದರೆ, ಒಂದು ದುರ್ದೈವದ ಸಂಗತಿ. ಯಾರು ರಾಷ್ಟ್ರವನ್ನು ಕಟ್ಟುತ್ತಾರೊ, ಯಾವ ಜನಾಂಗದವರು ಹಿಂದುಳಿದವರು ರಾಷ್ಟ್ರ ನಿರ್ಮಾಣದಲ್ಲಿ ಹೆಚ್ಚಿನ ಪಾಲು ಭಾಗವಹಿಸುತ್ತಾರೋ ಅಂಥ ಒಂದು ಜನಗಳಿಗೆ ನ್ಯಾಯವನ್ನು ಕೊಡಬೇಕು, ಸಾಮಾಜಿಕ ನ್ಯಾಯವನ್ನು ಕೊಡಬೇಕೆನ್ನುವ ವಿಚಾರದಲ್ಲಿ ಹಿಂದೆ–ಮುಂದೆ ನೋಡತಕ್ಕಂಥದ್ದು ಕೂಡ, ಅದು ನ್ಯಾಯಾಂಗ ಇರಬಹುದು, ಶಾಸಕಾಂಗ ಇರಬಹುದು, ಕಾರ್ಯಾಂಗ ಇರಬಹುದು, ಪತ್ರಿಕಾ ರಂಗ ಇರಬಹುದು. ಎಲ್ಲವೂ

ಕೂಡ ಇವತ್ತು ಬೆಂಬಲಿಸಬೇಕಾದ ವಿಚಾರ. ಆದರೆ ಕರ್ನಾಟಕ ಮಾತ್ರ ಮಹಾರಾಜರ ಕಾಲದಿಂದಲೂ ಕೂಡ ನಂತರ ದೇವರಾಜು ಅರಸುರವರು, ಮಾನ್ಯ ಹೆಚ್.ಡಿ.ದೇವೇಗೌಡರು, ಎಲ್ಲರೂ ಕೂಡ ಕರ್ನಾಟಕದಲ್ಲಿ ಬಹಳ ಸೌಹಾರ್ದದಿಂದ, ಏನು ಮೇಲ್ವರ್ಗದ ಸಮುದಾಯ ಇದೆ, ಆ ಸಮುದಾಯದ ಎಲ್ಲರೂ ಕೂಡ ಕೆಳವರ್ಗದಂಥ ಹಿಂದುಳಿದ ವರ್ಗದವರಿಗೆ ಬೆಂಬಲ ಕೊಡುವುದರ ಜೊತೆಗೆ ಅವರಿಗೆ ನ್ಯಾಯವನ್ನು ಕೊಡುವುದರಲ್ಲಿ ಮೊದಲನೇ ಸ್ಥಾನದಲ್ಲಿ ಇಡೀ ರಾಷ್ಟ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಇಂಥ ಸಂದರ್ಭದಲ್ಲಿ ರಾಷ್ಟ್ರದಲ್ಲಿ ಯಾವತ್ತು 1955ನೇ ಇಸವಿಯ ಹಿಂದೆ ಇಂಥ ಮೀಸಲಾತಿಯ ಅವಶ್ಯಕತೆ ಇದ್ದರೂ ಕೂಡ ಇಷ್ಟು ನಿಧಾನವಾಗಿ ಪಡೆಯುವಂಥ ಈ ಸಂದರ್ಭದಲ್ಲಿ ಯಾರೋ ನ್ಯಾಯಾಲಯಕ್ಕೆ ಹೋಗಿ ಕೇಂದ್ರ ಸರ್ಕಾರ ತಂದಂಥ ಒಂದು ಬಿಲ್ ಅನ್ನು ಅನುಮೋದಿಸುವುದು ಬಿಟ್ಟು ಅದನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡಿರುವುದು ಹಿಂದುಳಿದ ವರ್ಗದವರಿಗೆ ಅನ್ಯಾಯವನ್ನು ಮಾಡಿದ ರೀತಿಯಾಗುತ್ತದೆ, ಮತ್ತು ಹಿಂದುಳಿದ ವರ್ಗದವರಿಗೆ ದ್ರೋಹವನ್ನು ಬಗೆದ ಹಾಗೆ ಆಗುತ್ತದೆಂದು ನಾವು ಕೂಡ ಭಾವಿಸಿಕೊಂಡಿದ್ದೇನೆ. ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ನ್ಯಾಯಾಂಗಕ್ಕೆ ಮಾತ್ರವಲ್ಲ, ಎಲ್ಲರಿಗೂ ಇದೆ. ನಾನು ಇವತ್ತು ನ್ಯಾಯಾಂಗವನ್ನು ದೂಷಣೆ ಮಾಡುತ್ತಿಲ್ಲ. ಆದರೆ ಅಲ್ಲಿ ಮಾಹಿತಿಗಳನ್ನು ಸರಿಯಾಗಿ ಕೊಡದಿದ್ದರೆ, ಸರಿಯಾಗಿ ಪ್ಲೀಡ್ ಮಾಡದ ರೀತಿಯಲ್ಲಿ, ಇಂಥ ಸಂದರ್ಭದಲ್ಲಿ ನಾನು ಕೆಲವು ಅಡ್ವೋಕೇಟ್‌ಗಳನ್ನು ಕೇಳಿದಂಥ ಸಂದರ್ಭದಲ್ಲಿ ಅವರು ಹೇಳಿದರು. ಇಲ್ಲ ನ್ಯಾಯಾಧೀಶರಿಗೆ, ಸರಿಯಾಗಿ ಮಾಹಿತಿಯನ್ನು ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆನ್ನುವ ಮಾತುಗಳನ್ನು ಕೂಡ ಹೇಳಿದರು. ಆದರೆ ನಾನೂ ಕೂಡ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ದೋಷವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು, ಇದನ್ನು ಬೆಂಬಲಿಸತಕ್ಕಂಥದ್ದು ಕೈಬಲಪಡಿಸತಕ್ಕಂಥದ್ದು, ಕೇಂದ್ರ ಸರ್ಕಾರವನ್ನು ಕೂಡ ಕೈ ಬಲ ಪಡಿಸಿ, ಸಾಮಾಜಿಕ ನ್ಯಾಯವನ್ನು ಕೊಡುವುದರ ಮೂಲಕ ಮೀಸಲಾತಿಯನ್ನು ತರುವುದರ ಮೂಲಕ ರಾಷ್ಟ್ರವನ್ನು ಕೊಟ್ಟತಕ್ಕಂಥ ನಿರ್ಮಾಣದಲ್ಲಿ ಮತ್ತು ಸಮಾಜವನ್ನು ಕಟ್ಟುವ ನಿರ್ಮಾಣದಲ್ಲಿ, ಎಲ್ಲರೂ ಕೂಡ ಭಾಗಿಯಾಗಬೇಕು, ಅದರಲ್ಲೂ ಕೂಡ ಕರ್ನಾಟಕ ಬಹಳ ಮುಂಚೂಣಿಯಲ್ಲಿದೆ ಎನ್ನುವ ಮಾತನ್ನು ಹೇಳಿ, ಈಗೇನು ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆ, ಇದನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತಿಸಿ ಇದಕ್ಕೆ ಬೆಂಬಲವನ್ನು ನೀಡಿ ಇದನ್ನು ಕೂಡಲೇ ಮಾನ್ಯ ಸಿದ್ಧರಾಮಯ್ಯನವರು ಹೇಳಿದ

ಹಾಗೆ, ಮತ್ತು ಇನ್ನಿತರ ನಾಯಕರು ಹೇಳಿದ ಹಾಗೆ, ಅವಶ್ಯಕತೆ ಇದ್ದರೆ ಬಂದ್‌ನ್ನು ಕೂಡ ಮಾಡಿ. ಏಕೆಂದರೆ, ಕೇಂದ್ರ ಸರ್ಕಾರಕ್ಕೆ ಈಗಾಗಲೇ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳೆರಡು ಈಗಾಗಲೇ ಬಂದ್‌ನ್ನು ಆಚರಿಸುವುದರ ಮೂಲಕ ತಮ್ಮ ಬೆಂಬಲವನ್ನು ಇತರೆ ಎಲ್ಲಾ ವರ್ಗದವರೂ ಕೂಡ ತೋರಿಸಿರುವಂಥ ಈ ಸಂದರ್ಭದಲ್ಲಿ, ಕರ್ನಾಟಕವೂ ಕೂಡ ಬರೀ ಇಂಥ ಒಂದು ನಿರ್ಣಯ ಒಂದರಿಂದ ತೃಪ್ತಿಗೊಳ್ಳಬಾರದು. ಆದರೆ, ಇನ್ನು ಮುಂದೆ ಒಂದು ಬಂದ್ ಅನ್ನು ಮಾಡುವ ಮುಖಾಂತರ, ನಾನು ಸರ್ಕಾರದ ವತಿಯಿಂದ ಹೇಳದೇ ಇದ್ದರೂ ಕೂಡ ಎಲ್ಲಾ ಪಕ್ಷಗಳು ಪಕ್ಷಾತೀತವಾಗಿ ಈ ನಿರ್ಣಯವನ್ನು ಬೆಂಬಲಿಸುವುದರ ಮೂಲಕ ಎಲ್ಲರೂ ಕೂಡ ಈ ಹಿಂದುಳಿದ ವರ್ಗದವರ ರಕ್ಷಣೆಗೆ ಮತ್ತು ಅವರ ಕಲ್ಯಾಣಕ್ಕೆ ಬರಬೇಕೆಂದು ಹೇಳಿ ಈ ನಿರ್ಣಯವನ್ನು ಅತ್ಯಂತ ಸಂತೋಷದಿಂದ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ|| ಹೆಚ್.ಸಿ. ಮಹಾದೇವಪ್ಪ (ಟಿ. ನರಸಿಪುರ) :- ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತರಲು ಉದ್ದೇಶಿಸಿದಂಥ ಈ ನಿರ್ಣಯವನ್ನು ಚರ್ಚೆಯ ನಂತರ ಸರ್ಕಾರವೇ ನಿರ್ಣಯವನ್ನು ಮಂಡಿಸಿ ಇಡೀ ಸದನ ಮತ್ತು ರಾಜ್ಯ ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ, ಮೀಸಲಾತಿಯ ಪರವಾಗಿ ನಾವು ಇದ್ದೇವೆಂದು ಒಗ್ಗಟ್ಟನ್ನು ಪ್ರದರ್ಶನ ಮಾಡಿ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಿರ್ಣಯವನ್ನು ಮಂಡಿಸಿ ಉನ್ನತ ಶಿಕ್ಷಣಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು 27% ಕೊಡಬೇಕೆಂದು ಹೇಳಿ ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಬೆಂಬಲವನ್ನು ವ್ಯಕ್ತ ಮಾಡಿರತಕ್ಕಂಥದ್ದನ್ನು ಬೆಂಬಲಿಸಲಿಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ಸುಮಾರು 57 ವರ್ಷಗಳಿಂದ ನಿರುಪ್ತವಾಗಿದ್ದಂಥ ಸಂವಿಧಾನದ 15 ನೇ ಕಲಂ ಗೆ ಜೀವ ಕೊಟ್ಟು 57 ವರ್ಷಗಳ ನಂತರ ಕೇಂದ್ರದ ಯುಪಿಎ ಸರ್ಕಾರ ಇಂಥ ಒಂದು ಕಾಯಿದೆಯನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದಕ್ಕೆ ಸಂಸತ್ತಿನ ಎರಡು ಸದನಗಳನ್ನು ಮತ್ತು ಯುಪಿಎ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ.

(2 : 00 ಘಂಟೆ)

ಭಾರತ ದೇಶದಲ್ಲಿ ಸುಮಾರು 4,963 ಜಾತಿಗಳನ್ನು ಗುರುತಿಸಿದ್ದಾರೆ. ಗುರುತಿಸಲಾಗದೇ ಇರತಕ್ಕಂಥ ಜಾತಿಗಳು ಇನ್ನೂ ಬೇಕಾದಷ್ಟು ಇರಬಹುದು. ನಮ್ಮ ದೇಶ ಜಾತ್ಯಾತೀತ

ದೇಶವೆಂದು ನಾವೆಲ್ಲರೂ ಹೇಳಿ, ಜಾತ್ಯಾತೀತದ ಬಗ್ಗೆ ಪ್ರಬಲವಾದಂಥ ಹೋರಾಟಗಳನ್ನು, ರಾಜಕೀಯ ನಿಲುವುಗಳನ್ನು ಪ್ರದರ್ಶನ ಮಾಡಿಕೊಂಡು ಬಂದಿದ್ದರೂ ಸಹ ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಅಸಮಾನತೆಯ ಸಮಾಜವನ್ನು ನಾವು ನೋಡುತ್ತಿದ್ದೇವೆ. ಈ ಅಸಮಾನತೆಯ ಸಮಾಜದಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಮಹಿಳೆಯರು ಮತ್ತು ಕೆಲವು ಪಟ್ಟಣ, ಹಳ್ಳಿಗಳಲ್ಲೆಲ್ಲಾ ಅಸಮಾನತೆಯ ಗೊಂದಲಗಳಿಂದ ಕೂಡಿವೆ. ಜಾತ್ಯಾತೀತ ರಾಷ್ಟ್ರದಲ್ಲಿ ಇಂಥ ಒಂದು ಬದುಕನ್ನು ನಮ್ಮ ಸ್ವಾತಂತ್ರ್ಯದ ಉದ್ದೇಶ ಮತ್ತು ನಮ್ಮ ಸಂವಿಧಾನ ಬಯಸಿರಲಿಲ್ಲ. ಭಾರತ ದೇಶದಲ್ಲಿ ಆಡಳಿತ ಮಾಡತಕ್ಕಂಥ ಜನರಿಗೆ ಸಮಾಜವನ್ನು ಯಾವ ರೀತಿಯಾಗಿ ಕಟ್ಟಬೇಕೆಂದು ಹೇಳಿ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತದ ಉದ್ದಗಲಕ್ಕೂ ಸಾರಿ ಹೇಳಿದ್ದಾರೆ. ಎಲ್ಲಾ ವರ್ಗದ ಜನರುಗಳಿಗೆ ಮೀಸಲಾತಿ ಕೊಡತಕ್ಕಂಥ ಪ್ರಶ್ನೆ ಬಂದಾಗ ದಿವಾನರಾಗಿದ್ಧಂಥ ವಿಶ್ವೇಶ್ವರಯ್ಯನವರು ಮೀಸಲಾತಿಯನ್ನು ಕೊಟ್ಟರೆ efficiency ಹಾಳಾಗುತ್ತದೆ, ನಾನು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ, ಇದು ನಿಮ್ಮ ಅಭಿಪ್ರಾಯ. ಆದರೆ ಜನಪ್ರತಿನಿಧಿಗಳನ್ನು ಕೇಳಿದಾಗ ಎಲ್ಲಾ ಸಮಾಜಕ್ಕೂ ಸಮನಾದ ಅವಕಾಶವನ್ನು ಕೊಡಬೇಕೆಂದು ಮತ್ತೆ ಮೀಸಲಾತಿಗೆ ವಿರುದ್ಧವಾದಂಥ ಅಭಿಪ್ರಾಯವನ್ನು ಹೇಳಿ ನಾನು ರಾಜೀನಾಮೆ ಕೊಡುತ್ತೇನೆಂದು ವಿಶ್ವೇಶ್ವರಯ್ಯನವರು ಹೇಳಿದರೂ ಕೂಡ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಮೀಸಲಾತಿಯನ್ನು ಮಿಲ್ಲರ್ ಕಮಿಷನ್ ಮುಖಾಂತರ ಕೊಟ್ಟು, ಅವರು ರಾಜೀನಾಮೆ ಕೊಟ್ಟ ನಂತರ ಸನ್ಮಾನ್ಯ ಮಿರ್ಜಾ ಇಸ್ಮಾಯಿಲ್‌ರವರನ್ನು ದಿವಾನರಾಗಿ ನೇಮಕ ಮಾಡಿಕೊಂಡು ಆಡಳಿತ ನಡೆಸಿ ಇಡೀ ಭಾರತ ದೇಶದಲ್ಲಿಯೇ ಅವರು ಉತ್ತಮವಾದಂಥ ಆಡಳಿತವನ್ನು ಕೊಟ್ಟರು ಎನ್ನತಕ್ಕಂಥದ್ದು ನಮ್ಮ ಮುಂದೆ ಇದೆ. ಇವತ್ತಿನ ದಿವಸ ಭಾರತ ದೇಶದಲ್ಲಿ ವಿವಿಧ ಧರ್ಮಗಳು ಮತ್ತು ವಿವಿಧ ಜಾತಿಗಳಿದ್ದರೂ ಸಹ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುತ್ತೇವೆಂದು ಹೇಳಿಕೊಳ್ಳುತ್ತಿದ್ದೇವೆ. ಈ ದೇಶದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಎರಡು ಪ್ರಮುಖವಾದಂಥ ಚಳುವಳಿಯನ್ನು ಮಾಡಿದರು. ಮೊದಲನೆಯದು ಏನೆಂದರೆ, ಕೆರೆಯ ನೀರನ್ನು ಮುಟ್ಟುವುದು ಮತ್ತೊಂದು ದೇವಸ್ಥಾನಕ್ಕೆ ಪ್ರವೇಶ ಮಾಡುವುದು. ಇದರ ಉದ್ದೇಶ ಏನೆಂದರೆ, ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಸೈಮನ್ ಕಮಿಷನ್ ಬರುತ್ತಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು

ಚಳುವಳಿ ಮುಖಾಂತರ ಕೆರೆಯ ನೀರನ್ನು ಮುಟ್ಟಿದಾಗ ಅಲ್ಲಿನ ಮೇಲ್ವರ್ಗದ ಜನರು ಸನಾತನವಾದಿಗಳು ಕೆರೆಯ ನೀರನ್ನು ಮುಟ್ಟುವುದಕ್ಕೆ ಬಿಡಲಿಲ್ಲ. ಗಲಾಟೆ ಮಾಡಿ ಹೊಡೆದರು, ಆಗ ರಕ್ತಸ್ರಾವವಾಯಿತು ಮತ್ತೆ ದೇವಸ್ಥಾನಕ್ಕೆ ಪ್ರವೇಶ ಮಾಡುವುದಕ್ಕೆ ಹೋದಾಗಲೂ ಸಹ ಅದನ್ನೇ ಮಾಡಿದರು. ಭಾರತ ದೇಶದಲ್ಲಿ ಯಾವ ರೀತಿಯ ಬದುಕು ಇದೆ ಎನ್ನತಕ್ಕಂಥದ್ದನ್ನು ಸೈಮನ್ ಕಮಿಷನ್‌ಗೆ ಹೇಳಬೇಕಾಗಿತ್ತು. ಇದರ ಮುಖಾಂತರ ಬ್ರಿಟಿಷರ್ಸ್‌ಗೆ ಮನವರಿಕೆ ಮಾಡಿಕೊಟ್ಟರು. ಮೀಸಲಾತಿ ಕೊಡುವುದಕ್ಕೆ ಪೂನಾ ಒಡಂಬಡಿಕೆಗೆ ಇದೊಂದು ವೇದಿಕೆ ಆಯಿತು. ನಮ್ಮ ಸಂವಿಧಾನದ ಮೊದಲನೇ ಪುಟದಲ್ಲಿ ಮೊದಲ ವಾಕ್ಯ ಸಾಮಾಜಿಕ ನ್ಯಾಯದ ಬಗ್ಗೆ ಬರೆಯಲಾಗಿದೆ. ಅನಂತರ ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವದ ಬಗ್ಗೆ ಬರೆಯಲಾಗಿದೆ. ಸಾಮಾಜಿಕ ನ್ಯಾಯದ ಬಗ್ಗೆ ಮೊದಲನೇ ಪುಟದಲ್ಲಿ ನಿವೇದನೆ ಮಾಡಲಾಗಿದೆ. ಬ್ರಿಟಿಷರ ಆಡಳಿತದ ಕಾಲದಲ್ಲಿ ಎಲ್ಲಾ ವರ್ಗದ ಜನತೆಗೆ ಸಮನಾದ ಅವಕಾಶವನ್ನು ಕೊಟ್ಟಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರು ಮಿಲ್ಲರ್ಸ್ ಕಮಿಷನ್ ಮುಖಾಂತರ ಸಂವಿಧಾನ ಬರುವುದಕ್ಕಿಂತ ಮುಂಚೆಯೇ ಮೀಸಲಾತಿಯನ್ನು ಒದಗಿಸಿಕೊಟ್ಟರು. ಆಡಳಿತದಲ್ಲಿ ಸಮಾನತೆಯನ್ನು ಕಾಪಾಡುವುದಕ್ಕೆ ಇವೆಲ್ಲವುಗಳ ಅನಿವಾರ್ಯತೆ ಮತ್ತು ಅವಕಾಶ ಕೂಡ ಇತ್ತು. ಸಮ ಬಾಳು – ಸಮ ಪಾಲಿನ ಅರ್ಥ ಬರಬೇಕಾದರೆ.....

ಉಪಾಧ್ಯಕ್ಷರು :– ಮಾನ್ಯ ಮಹದೇವಪ್ಪನವರೆ, ತಾವು ದಯವಿಟ್ಟು ಒಬಿಸಿ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಹೆಚ್.ಸಿ. ಮಹದೇವಪ್ಪ :– ಇವತ್ತು ಎಲ್ಲಾ ವರ್ಗಗಳ ಜನರಿಗೆ ಮೀಸಲಾತಿಯ ಅವಶ್ಯಕತೆ ಇದೆ. ಇದರ ಬಗ್ಗೆ ಪ್ರಪಂಚದ ಹೊರಗಡೆ ವಾಸ ಮಾಡುತ್ತಿರುವ ಎನ್.ಆರ್.ಐ.ರರು ಸರ್ವೆ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಭಾರತ ದೇಶ ಅಭಿವೃದ್ಧಿ ಆಗದೇ ಇರುವುದಕ್ಕೆ ಅಲ್ಲಿರತಕ್ಕಂಥ ಜಾತೀಯತೆಯೇ ಕಾರಣವೆಂದು ಹೇಳಿದ್ದಾರೆ. ವಿಶ್ವ ಸಂಸ್ಥೆ ಅಸ್ಪೃಶ್ಯತೆ ಬಗ್ಗೆ ವ್ಯಾಖ್ಯಾನ ಮಾಡಿ ಭಾರತ ದೇಶಕ್ಕೆ ಛೀಮಾರಿ ಹಾಕಿದೆ. ಭಾರತದ ಪ್ರತಿನಿಧಿಗಳು ಸಹ ಹೇಳಿದ್ದಾರೆ. ಬಿಜಾಪುರ ಜಿಲ್ಲೆಯ ಕಡಕೊಳ್ ಗ್ರಾಮದ ಕೆರೆಯ ನೀರು ಮುಟ್ಟುವುದಕ್ಕೆ ಹೋದಂಥತವರಿಗೆ ಏನಾಯಿತು? ಇವತ್ತು ಅಸಮಾನತೆ, ಅಸ್ಪೃಶ್ಯತೆ, ಜಾತೀಯತೆ ತುಂಬು ತುಳುಕುತ್ತಿದೆ. ಮಂಡಲ್ ಕಮಿಷನ್ ವರದಿ ಜಾರಿಗೆ ಬಂದಾಗ ಖುಷ್ವಂತ್

ಸಿಂಗ್‌ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರದಲ್ಲಿ IAS ಅಧಿಕಾರಿಗಳು ಎಷ್ಟು ಜನರಿದ್ದಾರೆಂದು ವರದಿಯಲ್ಲಿ ತಿಳಿಸಿದ್ದಾರೆ. 3500ಕ್ಕಿಂಥ ಹೆಚ್ಚು IAS ಅಧಿಕಾರಿಗಳಲ್ಲಿ 2,600 ಕ್ಕಿಂತ ಹೆಚ್ಚು IAS ಅಧಿಕಾರಿಗಳು ಬ್ರಾಹ್ಮಣರಿದ್ದಾರೆಂದು ಹೇಳಿದ್ದಾರೆ. ಆದರೆ, ಜನಸಂಖ್ಯೆ ಎಷ್ಟಿದೆ? ಅಧಿಕಾರದ ನಿರ್ಣಾಯಕ ಸ್ಥಳಗಳಲ್ಲಿ ಸಮಾಜದ ಎಲ್ಲಾ ವರ್ಗದ ಜನರನ್ನು ಸೇರಿಸದಿದ್ದರೆ, ಸಮಾನತೆಯ ಸಮಾಜವನ್ನು ಕಟ್ಟುವುದಾದರೂ ಹೇಗೆ? ಜಾತ್ಯಾತೀತೆಯನ್ನು ತೊಡೆದಾಕುವುದಾದರೂ ಹೇಗೆ? ಜಾತ್ಯಾತೀತ ರಾಷ್ಟ್ರಗಳ ಪ್ರತಿನಿಧಿಯಾಗಿ ಬದುಕುವುದು ಹೇಗೆ? ಈ ದೇಶದಲ್ಲಿ 18 ರಿಂದ 35 ವರ್ಷದ ವಯೋಮಾನದ ಯುವಕರು 42% ನಷ್ಟು ಇದ್ದಾರೆ. 42% ಇರತಕ್ಕಂಥ ಈ ಯುವಕರ ಭವಿಷ್ಯವನ್ನು ಸಮಾನತೆ ಮತ್ತು ಸಮಪಾಲು ಎಂಬ ಆಧಾರದ ಮೇಲೆ ನೀವು ಕಟ್ಟದಿದ್ದರೆ ಭಾರತ ದೇಶ ಬಲಿಷ್ಠವಾಗಿ ಹೊರ ಹೊಮ್ಮುವುದಾದರೂ ಹೇಗೆ? ಆದ್ದರಿಂದ, ಇದರಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಡಬೇಕೆಂದು ಇವತ್ತಿನ ದಿವಸ ಕೇಂದ್ರ ಸರ್ಕಾರ ಇದನ್ನು ಮಾಡಿದೆ. ಚಂಪಕಂ ದೊರೈರಾಜ್‌ರವರು ಮೆಡಿಕಲ್ ಕಾಲೇಜುಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಡಬೇಕೆಂದು 1951ರಲ್ಲಿ ಹೇಳಿದಾಗ ಮದ್ರಾಸಿನ ಕೋರ್ಟ್ ಮೆಡಿಕಲ್ ಕಾಲೇಜಿನ ಪ್ರವೇಶದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕೊಡುವ ವಿಚಾರದಲ್ಲಿ ನಿರಾಕರಣೆ ಮಾಡಿರತಕ್ಕಂಥ ವಿಷಯವನ್ನು ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಉಲ್ಲೇಖ ಮಾಡಿದ್ದಾರೆ. ಕಾಕ ಕಾಲೇಲ್ಕರ್ ಹಿಂದುಳಿದ ವರ್ಗಗಳ ಮೊದಲನೇ ಆಯೋಗ ಮತ್ತೆ ನಂತರದ ಮಂಡಲ್ ಕಮಿಷನ್, ಇವೆಲ್ಲವೂ ಕೂಡ ಹಾಗೆಯೇ ಉಳಿದುಕೊಂಡಿವೆ. ಉದ್ಯೋಗದಲ್ಲಿ ಸಿಗುವುದಾದರೂ ಹೇಗೆ? 1,700 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಸರ್ಕಾರ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮತ್ತು ಅನುದಾನ ಪಡೆದಂಥ ಶಿಕ್ಷಣ ಸಂಸ್ಥೆಗಳಿಗೆ ನೀಡುತ್ತಿದೆ. ಯಾವುದೇ ಶಿಕ್ಷಣ ಸಂಸ್ಥೆಗಳಿಗೆ ಕೊಡದೇ ಇರತಕ್ಕಂಥ ಪುರಸ್ಕಾರವನ್ನು ಇವತ್ತಿನ ದಿವಸ ಕೇಂದ್ರ ಸರ್ಕಾರ ಈ ಸಂಸ್ಥೆಗಳಿಗೆ ಕೊಟ್ಟಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಇದರ ಬಗ್ಗೆ ಹೇಳಿ ಸೀಟ್‌ಗಳ ಸಂಖ್ಯೆಯನ್ನು ಸಹ ಹೆಚ್ಚು ಮಾಡಿದ್ದಾರೆ. ಯಾವ್ಯಾವ ಮೇಲ್ವರ್ಗದ ಜನರಿಗೆ ಸೀಟ್ ಸಿಗುತ್ತಿದ್ದಾಗ, ಅದರಲ್ಲಿ ಒಂದೂ ಸೀಟ್ ಕಡಿಮೆಯಾಗದ ರೀತಿಯಲ್ಲಿ ಸೀಟ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಿದ್ದಾರೆ. ಆದ್ದರಿಂದ, ನ್ಯಾಯಾಲಯ ಏತಕ್ಕಾಗಿ ತಡೆ ಕೊಟ್ಟಿತು? ಇವತ್ತಿನ ದಿವಸ ನಾವು ಹೇಳುವುದೇನೆಂದರೆ, ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತೆ

ನ್ಯಾಯಾಲಯದ ತೀರ್ಮಾನಗಳು ಸ್ವಾತಂತ್ರ್ಯ ಬಂದ ಮೇಲೆ ಏನಾಗಿದೆ ಎಂಬುದನ್ನೆಲ್ಲಾ ಬಹಿರಂಗ ಚರ್ಚೆಗೆ ಒಳಪಡಿಸಬೇಕಾಗುತ್ತದೆ. ನ್ಯಾಯಾಂಗವನ್ನು ಸಾಮಾಜಿಕರಣಗೊಳಿಸಬೇಕು. ಖುಷ್ವಂತ್ ಸಿಂಗ್‌ರವರು ಏನು ಹೇಳಿದ್ದಾರೆಂದರೆ, ಈ ಒಂದು ನ್ಯಾಯದಿಂದ ಯಾರ್‍ಯಾರು ಎಲ್ಲೆಲ್ಲಿ ಎಷ್ಟೆಷ್ಟು ಜನರಿದ್ದಾರೆಂದು, ಅಂದರೆ, ಗೌರ್ನರ್ಸ್ ಎಷ್ಟು ಜನರಿದ್ದಾರೆಂದು ಮತ್ತು ಮುಖ್ಯ ಮಂತ್ರಿಗಳು ಎಷ್ಟು ಜನರಾದರು, ಮತ್ತೆ IAS and IPS ಎಷ್ಟು ಜನರಿದ್ದಾರೆಂದು ಹೇಳಿದ್ದಾರೆ. ಒಕ್ಕಲಿಗ ಸಮಾಜದಲ್ಲಿ ನೇರವಾಗಿ ಒಬ್ಬ IAS ಇಲ್ಲದೇ ಇರುವಾಗ ನಮ್ಮ ಗತಿ ಏನೆಂಬುದು ಹೇಳಿ? ಮುಸಲ್ಮಾನರು ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಏನು ಮಾಡಬೇಕು? ಸರ್ವರಿಗೂ ಸಮಪಾಲು-ಸಮಬಾಳೆಂದು ಮತ್ತೆ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕಾಗಿದೆ. ಬಸವಣ್ಣನವರು ಜಾತ್ಯಾತೀತದ ಬಗ್ಗೆ ಹೋರಾಟ ಮಾಡಿ ಇತಿಹಾಸವನ್ನು ನಿರ್ಮಾಣ ಮಾಡಲಿಲ್ಲವೇ? ನಾವು ಇದನ್ನು ಬದಿಗೊತ್ತಬೇಕು. ಇವತ್ತಿನ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇದು ಮೊದಲ ಬಾರಿಗೆ ಬರುತ್ತಿದೆ. 57 ವರ್ಷದ ಬಳಿಕ ಸಂವಿಧಾನದ 15 (4) ಕಲಂಗೆ ಇವತ್ತಿನ ದಿವಸ ಜೀವ ತುಂಬುತ್ತಿದ್ದಾರೆ. ಇದಕ್ಕೆ ಈ ವಿಧಾನಸಭೆ ಸರ್ವಾನುಮತದ ಅಂಗೀಕರಾರದ ಮುಖಾಂತರ ಸರ್ಕಾರದ ಮೇಲೆ ಒತ್ತಡ ತಂದು, ಇವತ್ತು ಯುಪಿಎ ಸರ್ಕಾರ ಇದನ್ನು ತಂದಿದೆ. ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾಗಿರುವ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಮತ್ತು ಪತ್ರಿಕಾರಂಗಗಳು ಸಮಪಾಲು-ಸಮಬಾಳು ತತ್ವವನ್ನು ಅನುಸರಿಸಿ ಜಾತ್ಯಾತೀತ ರಾಷ್ಟ್ರದ ನಿರ್ಮಾಣವಾಗಬೇಕಾದರೆ, ಈ ದೇಶದ ಜನರಿಗೆ ಸಂಪತ್ತು, ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಅಧಿಕಾರವನ್ನು ಎಲ್ಲರಿಗೂ ಕೊಡುವುದಕ್ಕೆ ಯಾವತ್ತು ಸಾಧ್ಯವಾಗುತ್ತದೋ ಅವತ್ತು ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರ ಹೊಮ್ಮುವುದಕ್ಕೆ ಸಾಧ್ಯವಿದೆ. ನಾವೆಲ್ಲರೂ ಭಾರತೀಯರು, ಭಾರತದಲ್ಲಿ ವಾಸ ಮಾಡತಕ್ಕಂಥ ಮುಸಲ್ಮಾನರು ಭಾರತೀಯರು, ಇಲ್ಲಿ ವಾಸ ಮಾಡತಕ್ಕಂಥ ಎಲ್ಲಾ ಜನರೂ ಸಹ ಭಾರತೀಯರು. ಈ ಎಲ್ಲಾ ಜನರಿಗೂ ರಾಜ್ಯಾಂಗ ಬಯಸಿದಂಥ ಸಮಾನತೆ ಮತ್ತು ಸಮಾನ ಅವಕಾಶವನ್ನು ಒದಗಿಸಿಕೊಡುವುದಕ್ಕೆ ಇವತ್ತು ನಾವು ಬದ್ಧರಾಗಿದ್ದೇವೆ. ನಾವು ಕೇಳತಕ್ಕಂಥ ಎಸ್‌ಸಿ:ಎಸ್‌ಟಿ ಜನರಿಗೆ ಪ್ರಮೋಷನ್‌ನಲ್ಲಿ ಮೀಸಲಾತಿ ಕೊಡಿ ಎಂದರೆ, ಕ್ರೀಮಿಲೇಯರ್ ಬಗ್ಗೆ ಹೇಳುತ್ತಾರೆ. ಆದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಹಿಂದುಳಿದ ವರ್ಗದವರಿಗೆ ಮಂಡಲ್ ಕಮಿಷನ್ ಪ್ರಕಾರ ಮೀಸಲಾತಿ ಕೊಡಿ ಎಂದರೆ, ಷೆಡ್ಯುಲ್ಡ್ ಕಾಸ್ಟ್ ಕ್ರೀಮಿಲೇಯರ್ ಕೊಡುವುದಿಲ್ಲವೆಂದು ಹೇಳಿದ್ದಾರೆ.

It has no relevance. ಈ ರೀತಿಯಾದ ತೀರ್ಮಾನಗಳು ಸಾಮಾಜಿಕ ನ್ಯಾಯದ ಮೇಲೆ ಎಳೆಯತಕ್ಕಂಥ ಒಂದು ದೊಡ್ಡ ಬರೆ, ದೊಡ್ಡ ಗಾಯ. ಆದ್ದರಿಂದ ಇದಕ್ಕೆ ಅವಕಾಶವನ್ನು ಕೊಡಬೇಡಿ. ಇವತ್ತಿನ ದಿವಸ ಸಂಸತ್ತು ಸಾರ್ವಭೌಮತ್ವವನ್ನು ಹೊಂದಿದೆ. ಈ ದೇಶದ ಎಲ್ಲಾ ಜನರಿಗೂ ಸಾಮಾಜಿಕ ನ್ಯಾಯದಲ್ಲಿ ಸಮಾನತೆಯನ್ನು ಕೊಡತಕ್ಕಂಥ ಕಾರ್ಯದಲ್ಲಿ, ತನ್ನ ಜವಾಬ್ದಾರಿ ಏನೆಂಬುದನ್ನು ಸಂಸತ್ತು ಮಾಡಿದೆ. ಈ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಸರ್ಕಾರ ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಕೊಟ್ಟು ಸಮಬಾಳು-ಸಮಪಾಲು ತತ್ವವನ್ನು ಅನುಸರಿಸಿದೆ. ಭಾರತದಲ್ಲಿ ಜಾತೀಯತೆ ಬಲಿಷ್ಠವಾದ ಭಾರತ ಬೆಳೆಯುವುದರಲ್ಲಿ ಅಡ್ಡಿಯಾಗಿದೆ ಎಂದು ಎನ್.ಆರ್.ಐ.ನವರು ಮತ್ತೆ ಬಹುತೇಕ ಜನರು ಅಭಿಪ್ರಾಯವನ್ನು ಹೇಳಿದ್ದಾರೆ. ಏಕೆಂದರೆ, ಸಂಪತ್ತು, ಆಸ್ತಿ, ಉದ್ಯೋಗ, ಶಿಕ್ಷಣ ಕೆಲವರ ಕೈಯಲ್ಲಿ ಉಳಿದು ಹೋಗಿದೆ. ಇದರ ವಿತರಣೆಯಾಗುವುದಕ್ಕಾಗಿ ನಾವು ಶಾಸನ ಸಭೆಯಲ್ಲಿ ಮತ್ತು ಸಂಸತ್‌ನಲ್ಲಿ ನಿರ್ಣಯದ ಮೂಲಕ ಕಠಿಣವಾದಂಥ ಕಾನೂನಿನ ಜಾರಿಯ ಮುಖಾಂತರ ಸಂವಿಧಾನದ ಆಶಯಗಳನ್ನು ಒದಗಿಸುವ ಮುಖಾಂತರ ಒಂದು ಬಲಿಷ್ಠವಾದಂಥ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಲಿಕ್ಕೆ ನಾವೆಲ್ಲರೂ ಕೂಡ ಕಂಕಣಬದ್ಧರಾಗಿರಬೇಕು. ಈ ಒಂದು ನಿಟ್ಟಿನಲ್ಲಿ ಇವತ್ತಿನ ದಿವಸ ಸರ್ಕಾರ ತಂದಿರತಕ್ಕಂಥ ಈ ನಿರ್ಣಯವನ್ನು ಬೆಂಬಲಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು :- ಊಟವಾದ ಮೇಲೆ ಮಾನ್ಯ ಖರ್ಗೆಯವರು ಮಾತನಾಡಬೇಕು, ಜೊತೆಗೆ ಸರ್ಕಾರದಿಂದ ಉತ್ತರ ಬರಬೇಕು, ಅದಕ್ಕೆ ಅಂಗೀಕಾರ ಮಾಡಬೇಕಾಗಿದೆ, ಅದರ ಜೊತೆಗೆ ಬಿಲ್‌ಗಳನ್ನು ತೆಗೆದುಕೊಳ್ಳಬೇಕೆಂದು ಆಗಿರುತ್ತದೆ. ಆದ್ದರಿಂದ ಈಗ ಸದನವನ್ನು 3.15ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2 ಗಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಿತು)

(3–30 ಗಂಟೆ)

[ಸಭೆಯು ಭೋಜನೋತ್ತರ 3 ಗಂಟೆ 44 ನಿಮಿಷಕ್ಕೆ ಆರಂಭಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು]

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್) :- ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಂದೆ ಮೀಸಲಾತಿ ಕುರಿತು ಒಂದು ನಿರ್ಣಯ ಮಂಡಿಸಿದ್ದಾರೆ. ಅದಕ್ಕೆ ಇಡೀ ಸದನ ಇವತ್ತು ಬೆಂಬಲಿಸುತ್ತಿದೆ. ನಾನೂ ನನ್ನ ಪಕ್ಷದ ವತಿಯಿಂದ ನನ್ನ ಶಾಸಕರ ವತಿಯಿಂದ ಸಂಪೂರ್ಣ ಬೆಂಬಲ ಅದಕ್ಕೆ ಸೂಚಿಸುತ್ತಿದ್ದೇನೆ. ಈ ಪ್ರಸ್ತಾವವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದೆ ಸದನದಲ್ಲಿ ಮಂಡಿಸಿದ್ದರು. ಆಗ ಸರ್ಕಾರದ ವತಿಯಿಂದ ಒಂದು ಹೇಳಿಕೆ ಬಂತು, ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳೇ ಈ ಪ್ರಸ್ತಾವ ಮಂಡಿಸುತ್ತೇವೆ ಅಂತ ಹೇಳಿದ ಮೇಲೆ ವಿರೋಧ ಪಕ್ಷದ ನಾಯಕರು ತಮ್ಮ ಪ್ರಸ್ತಾವವನ್ನು ಹಿಂದಕ್ಕೆ ಪಡೆದರು. ಇವತ್ತು ತಂದಿರುವ ಪ್ರಸ್ತಾವವು ಕೇಂದ್ರ ಸರ್ಕಾರಕ್ಕೆ ಬೆಂಬಲ ಕೊಡುವುದು ಮತ್ತು ಮೀಸಲಾತಿ ಜಾರಿಗೆ ತರುವುದರಲ್ಲಿ ಏನಾದರೂ ಅನಗತ್ಯವಾಗಿ ವಿಳಂಬವಾದರೆ ಅಥವಾ ತೊಂದರೆಯಾದರೆ ಅಗತ್ಯಕ್ರಮಗಳನ್ನು ಜರುಗಿಸಬೇಕು ಎಂದು ನಾವೆಲ್ಲರೂ ಒತ್ತಾಯ ಮಾಡಬೇಕು ಎಂದು ಇವತ್ತು ಈ ನಿರ್ಣಯ ತರಲಾಗಿದೆ. ಸಹಜವಾಗಿ ಪ್ರಚಾರವಂತೂ ಎಲ್ಲ ಕಡೆ ನಡೀತಿದೆ. ಅದರಲ್ಲೂ ಇತ್ತೀಚಿನ educated youths ಏನಿದ್ದಾರೆ, ಈ reservation ಕುರಿತು ಮಾತನಾಡುವಾಘ ಸ್ವಲ್ಪ ಹಗುರವಾಗಿ ಮಾತನಾಡುತ್ತಾರೆ. ಅದಕ್ಕೆ ಕಾರಣ ಯಾವ ವರ್ಗದಿಂದ ಅವರು ಬಂದಿರುತ್ತಾರೋ ಆ ವರ್ಗದವರಿಗೆ ಬಹುಶಃ OBC ವರ್ಗದವರ ಜನರ ನೋವು ಕಷ್ಟ ಗೊತ್ತಾಗೋಲ್ಲ. ಸಹಜವಾಗಿ ವಿದ್ಯಾರ್ಥಿಗಳಾದ ನಾವೆಲ್ಲ ಒಂದೇ, ಅವರಿಗೆ ಯಾಕೆ ಮೀಸಲಾತಿ ಕೊಡಬೇಕು, ನಮಗೆ ಯಾಕೆ ಇಲ್ಲ? ಅಂದರೆ ಅವರಿಗೆ ಈ social background ಸಾಮಾಜಿಕ ನ್ಯಾಯ, ಸಮಾಜದೊಳಗಿನ ವ್ಯತ್ಯಾಸಗಳು, ಹಾಗೂ ಈ ದೇಶದಲ್ಲಿ ಜಾತಿ ಆಧಾರದ ಮೇಲೆ ಧರ್ಮ ಇದೆ. ಎಲ್ಲರೂ ಅವರವರ ಜಾತಿ ಹೇಳುತ್ತಾರೆಯೇ ಹೊರತು ಅವರ ಧರ್ಮ ಯಾವುದು ಅಂತ ಬೇಗ ಹೇಳುವುದಿಲ್ಲ. ಇವತ್ತು ಮುಖ್ಯಮಂತ್ರಿಗಳಿಂದ ಹಿಡಿದು ನಮ್ಮೆಲ್ಲರವರೆಗೆ, ನೀನ್ಯಾರು ನಾನು ಒಕ್ಕಲಿಗ, ನೀನ್ಯಾರು – ನಾನು ಲಿಂಗಾಯುತ, ನೀನ್ಯಾರು – ನಾನು ಬ್ರಾಹ್ಮಣ, ನೀನ್ಯಾರು – ನಾನು scheduled caste ಹೀಗೆ. ಅಂದರೆ ಈ ದೇಶದಲ್ಲಿ ಜಾತಿ ಪ್ರಾಮುಖ್ಯತೆ ಪಡೆದಿದೆಯೇ ಹೊರತು ಧರ್ಮವಲ್ಲ. ಈ ಧರ್ಮದೊಳಗೆ ಜಾತಿ ಮೊದಲ್ಗೊಂಡು ಎಲ್ಲ ಇದೆ, ಆರ್ಥಿಕ ಬಲ ತೆಗೆದುಕೊಳ್ಳಿ, ಶೈಕ್ಷಣಿಕ ಸಮಾನತೆ ತೆಗೆದುಕೊಳ್ಳಿ, ಇನ್ನು ನಾವೆಲ್ಲರೂ ಮಾತನಾಡುವ ಸಾಮಾಜಿಕ ಸಮಾನತೆಯನ್ನು ಗಣನೆಗೆ ತೆಗೆದುಕೊಂಡರೆ

ಒಂದು ಕಡೆ ಈ ಆರ್ಥಿಕ ಸಮಾನತೆ ಇದ್ದರೂ ಕೂಡ ನಿಮಗೆ ಸಾಮಾಜಿಕ ಸಮಾನತೆ ಇಲ್ಲದ ಕಾರಣ ಅನೇಕ ದೃಷ್ಟಿಯಿಂದ ನೀವು ವಂಚಿತರಾಗುತ್ತೀರಿ. ಎಲ್ಲಕ್ಕಿಂತಲೂ ಸಾಮಾಜಿಕ ಸಮಾನತೆ ಬಹಳ ಮುಖ್ಯ. ಆ ಸಮಾನತೆ ಇದ್ದಿದ್ದರೆ ನನ್ನ ಪ್ರಕಾರ reservation ಅವಶ್ಯಕತೇನೂ ಇರಲಿಲ್ಲ. ಆಗ ಕೇವಲ ವರ್ಗ ಸಂಘರ್ಷ ಇರುತ್ತಿತ್ತು. ಆದರೆ ಈಗ ಆ ಪ್ರಶ್ನೇನೆ ಇಲ್ಲ, OBC ಯೊಳಗಡೆ ಒಬ್ಬ ಶ್ರೀಮಂತನಿರಬಹುದು, ಆದರೆ ಅವನಿಗೆ ಸಾಮಾಜಿಕ ಸಮಾನತೆಯಿಲ್ಲದ ಕಾರಣ ಶಿಕ್ಷಣದಿಂದ ಅವನು ವಂಚಿತನಾಗಿದ್ದಾನೆ. ಇದಕ್ಕೆಲ್ಲ ಸಾವಿರಾರು ವರ್ಷಗಳ ಇತಿಹಾಸವಿದೆ, ಈಗೇನೋ ಸ್ವಾತಂತ್ರ್ಯಾನಂತರ ಸಂವಿಧಾನ ಅನುಷ್ಠಾನಕ್ಕೆ ಬಂದ ಮೇಲೆ ಅದರಲ್ಲೂ ಕಡ್ಡಾಯ ಶಿಕ್ಷಣ ನೀತಿ ಆದ ಮೇಲೆ directive principles ನಲ್ಲಿ ಇವೆಲ್ಲ ಇವೆಯೆಂದು ತಿಳಿದುಕೊಂಡು ಸ್ವಲ್ಪಮಟ್ಟಿಗೆ primary education ನಲ್ಲಿ ಲಿಟರೆಸಿ ಪ್ರಮಾಣ ಜಾಸ್ತಿಯಾಗಿದೆ. ಇಲ್ಲದಿದ್ದರೆ ಇದೂ ಅಲ್ಲ. ಅಂದರೆ higher education ನಲ್ಲಂತೂ ಪ್ರಶ್ನೆಯೇ ಇಲ್ಲ. Primary education ನಲ್ಲಿ ಮಾತ್ರ ಇವತ್ತು ಹೆಚ್ಚು ಕಡಿಮೆ 60–65% literacy ಇದೆ. ಇಡೀ ರಾಜ್ಯದಲ್ಲೇ 60–65% literacy ಇದ್ದಾಗ ಮತ್ತು ಹತ್ತಾರು ವರ್ಷಗಳಿಂದ ಈ ವಿದ್ಯೆಯಿಂದ ವಂಚಿತರಾದಾಗ ಹೇಗೆ ಇವರು higher education ಗೆ ಹೋಗುವುದಕ್ಕೆ ಸಾಧ್ಯ? ಅದಕ್ಕಾಗಿ reservation ಅನ್ನು ತಂದಿದ್ದು. ಆ reservation ತಂದ ತಕ್ಷಣವೇ ಎಲ್ಲರೂ ಅದರಲ್ಲಿ efficiency ಹೊರಟು ಹೋಗುತ್ತದೆ, ಮತ್ತೊಂದು ಹೊರಟು ಹೋಗುತ್ತದೆ ಎಂದು ಹೇಳುತ್ತಾರೆ. ಮೆರಿಟ್ ಹೌದು, ಯಾವಾಗ? ಸಮಾನ ಅವಕಾಶವಿದ್ದಾಗ. ಎಲ್ಲರೂ ಕೂಡ ನಿಮಗೆ ಯಾವುದೇ background ಇಲ್ಲದೇ ಎಲ್ಲ ಮಕ್ಕಳನ್ನು ಬಿಟ್ಟರೆ ಆಗ ಯಾರು ಎಷ್ಟರಮಟ್ಟಿಗೆ ಬುದ್ಧಿವಂತರು ಎಂದು ಗೊತ್ತಾಗುತ್ತದೆ. ಆದರೆ ಒಬ್ಬರಿಗೆ ಸಾವಿರಾರು ವರ್ಷದ background ಇದೆ, ಇನ್ನೊಬ್ಬರಿಗೆ ನೂರಾರು ವರ್ಷದ background, ಇನ್ನೊಬ್ಬರಿಗೆ 5–10 ವರ್ಷದ background ಇದ್ದಾಗ ನೀವು ಅವರ ಜೊತೆಯಲ್ಲಿ compete ಮಾಡು ಎಂದರೆ ಹೇಗೆ ಸಾಧ್ಯವಾಗುತ್ತದೆ? ಅದಕ್ಕೆ ಕೇಂದ್ರ ಸರ್ಕಾರದವರು ಇವತ್ತು 25% OBC ಗೆ higher education ನಲ್ಲಿ ಅದು Indian Institute of Technology ಇರಬಹುದು, Indian Institute of Management ಇರಬಹುದು, ಅಂಥ ಕಡೆ ಇವತ್ತು reservation ಅನ್ನು ಕೊಟ್ಟಿದ್ದಾರೆ. ಕೊಟ್ಟ ತಕ್ಷಣವೇ ಅದಕ್ಕೆ stay order ಬರುತ್ತದೆ. Article 15(4) & 16(4) ರಲ್ಲಿ Socially,

educationally, backward ಇದ್ದವರಿಗೆ ಕೊಡಬೇಕೆಂದು ಇದೆ. ಜಾತಿ ಆಧಾರದ ಮೇಲೆ ಏಕೆ ಕೊಡುತ್ತೀರಿ ಎಂದು ಹೇಳಿ ಬಹಳಷ್ಟು ಜನರ ವಾದ. ಹೌದು. ನೀವು ಜಾತಿಯನ್ನು ತೆಗೆದುಹಾಕಿಬಿಡಿ. ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ನೀವು ಜಾತಿ ಆಧಾರದ ಮೇಲೆ ಹೇಗೆ ಇದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಕೆಲವು ಜನರಿಗೆ ನೋವಾಗಬಹುದು. ಒಬ್ಬರ ತಲೆಮೇಲೆ ಒಬ್ಬರು ಕುಳಿತಿದ್ದಾರೆ. ಅತ್ಯಂತ ಕೆಳಗಡೆ ಇರತಕ್ಕದ್ದು ಪರಿಶಿಷ್ಟ ಜಾತಿ. ಅವನ ಮೇಲೆ ಒಂದು ಜಾತಿ. ಅವನ ತಲೆಯ ಮೇಲೆ ಇನ್ನೊಂದು ಜಾತಿ. ಎಲ್ಲರಿಗಿಂತ ಮೇಲೆ ಇನ್ನೊಂದು ಜಾತಿ. ಅಂದಾಗ ಈ gradation system ಇದ್ದಾಗ, ಈ ladder system ಇದ್ದಾಗ ಇಂಥ ಕಡೆ ನೀವು ಸಮಾನತೆಯನ್ನು education ನಲ್ಲಿ expect ಮಾಡುತ್ತೀರಾ? ಅದಕ್ಕಾಗಿ education ನಲ್ಲೂ ಕೂಡ ಸಮಾನತೆ ಇದೆ ಎಂದು ಹೇಳಿ ಇವತ್ತಿನ ದಿವಸ reservation ಅನ್ನು introduce ಮಾಡಿದ್ದಾರೆ. ಅದನ್ನು introduce ಮಾಡಿದರೂ ಕೂಡ ಏನು ಇವತ್ತಿನ ದಿವಸ minimum qualification ಬೇಕು, ಅಥವಾ minimum qualification for any professional colleges ಗೆ ಬೇಕು, ಆ minimum qualification, ಆ minimum marks ಇಡುತ್ತಾರೆಯೇ ಹೊರತಾಗಿ ಮುಂದುವರಿದ ಜಾತಿಯವರಿಗೆ 70%, ಹಿಂದುಳಿದ ಜಾತಿಯವರಿದ್ದಾರೆ ಎಂದು ಹೇಳಿ 35–40% ಕೊಡುವುದಿಲ್ಲ, ಇಂಥ Professional colleges ನಲ್ಲಿ ಕೂಡ ಇದ್ದಾರೆ, ಸ್ವಲ್ಪ ಮಟ್ಟಿಗೆ ಹತ್ತಿರದಲ್ಲಿರುವ merit ಅನ್ನು ಇಟ್ಟಿದ್ದಾರೆಯೇ ಹೊರತಾಗಿ ಯಾರೂ ಕೂಡ ಅತ್ಯಂತ ಕಡಿಮೆ marks ಕೆಳ ಮಟ್ಟದಲ್ಲಿರುವ ವಿದ್ಯಾರ್ಥಿಗಳಿಗೆ ತೆಗೆದುಕೊಳ್ಳುವುದು ಇಲ್ಲ. ಆದು ಎಲ್ಲ ಕಡೆಯೂ ಅಷ್ಟೆ. ನೀವು MBBS ನಲ್ಲಿ ತೆಗೆದುಕೊಳ್ಳಿ, Engineering ನಲ್ಲಿ ತೆಗೆದುಕೊಳ್ಳಿ, ಅಥವಾ higher education ತೆಗೆದುಕೊಳ್ಳಿ. ಆದರೆ ಇದು ಏಕೆ stay ಬಂತೋ ನನಗೂ ಕೂಡ ಅರ್ಥವಾಗಲಿಲ್ಲ. ಆ stay ಬಂದ ಕಾರಣ ಏನಾಯಿತು, ಎಲ್ಲ ಕಡೆ ಬೇರೆ ವಿದ್ಯಾರ್ಥಿಗಳು ಮುಂದುವರಿದ ವಿದ್ಯಾರ್ಥಿಗಳು ಇವತ್ತು ಬೆಂಕಿಯನ್ನು ಹಚ್ಚುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ವೆಂಕಟಸ್ವಾಮಿ ರಿಪೋರ್ಟ್ ಪ್ರಕಾರ ಈ ರಾಜ್ಯದಲ್ಲಿ 71% ಜನ ಹಿಂದುಳಿದವರಿದ್ದಾರೆ. ಅದು door to door ಸರ್ವೆ ಮಾಡಿದ್ದು. Door to door survey ಯನ್ನು ಮಾಡಿ 71.23% ಏನೋ ಇರಬೇಕು. 71% ಹೆಚ್ಚುಕಡಿಮೆ backward class ನಲ್ಲಿ ಜನ ಇದ್ದಾರೆ. ಅಂದರೆ 71% ಗೆ ನೀವು ಕೊಡುತ್ತಿರುವುದು 27%. ಅಷ್ಟಾದರೂ

ಕೂಡ ಇದನ್ನು ಕೊಡಬಾರದು ಎನ್ನತಕ್ಕದ್ದು. ಹಾಗಾದರೆ ಈಗ ನಾವು ಇಲ್ಲಿಯವರೆಗೂ reservation ಇಲ್ಲ. ಎಲ್ಲಿ ಅದು Indian Institute of Science, Indian Institute of Management ಇರಬಹುದು, ಮತ್ತೆ ಒಂದು survey ಯನ್ನು ಮಾಡಿದ್ದಾರೆ, ಮುಂದೆ ಓದಿ ಹೇಳುತ್ತೇನೆ. Chinese professors ಒಂದು ಸರ್ವೆಯನ್ನು ಮಾಡಿದ್ಧಾರೆ. At Pong Universtiy, Shanghai they have spent two years collecting and analyzing the output of 2000 universities worldwide. ಇಡೀ ಜಗತ್ತಿನಲ್ಲಿ ಸಾವಿರ ಯೂನಿವರ್ಸಿಟಿಗಳ ಬಗ್ಗೆ analyse ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. They have published their results by ranking 500 universities. ಆ ಎರಡು ಸಾವಿರದಲ್ಲಿ 500 ಯೂನಿವರ್ಸಿಟಿಗೆ according to merit ಅದಕ್ಕೆ ranking ಕೊಟ್ಟುಕೊಂಡು ಹೋಗಿದ್ದಾರೆ. ಅದರಲ್ಲಿ only three Universities/Institutions from India figure the top 500. Indian Institute of Science ranks 260 and IIT Kharagpur, and Delhi at 419. ಉಳಿದೆಲ್ಲ Institutions ಏಕೆ ಬರಲಿಲ್ಲ? ಅಹಮದಾಬಾದ್ ಇದೆ; ಬೇರೆ ಕಡೆ ಇದೆ, ಬೆಂಗಳೂರು ಇದೆ, ಅಂದರೆ ಇಲ್ಲಿಯಂತೂ ಯಾರೂ backward classes ಯಾರೂ ಹೋಗಿಲ್ಲ. ಹೋಗಿಲ್ಲವೆಂದರೆ ಈ 500 ರಲ್ಲಿ ನಮ್ಮಲ್ಲಿರುವ ಎಲ್ಲ Universities ಗಳು ಬರಬೇಕಾಗಿತ್ತಲ್ಲ, ಎಲ್ಲ ಬುದ್ಧಿವಂತರ ಮಕ್ಕಳೇ ಹೋಗಿದ್ದು. ಅಥವಾ ಎಲ್ಲ ಬುದ್ಧಿವಂತರು ಇದ್ದವರೇ ಹೋಗಿದ್ದರು. ಏಕೆ ಹೋಗಲಿಲ್ಲ? ಏಕೆ ಬರಲಿಲ್ಲ ಈ rank? ಅಂದರೆ ನಮ್ಮಲ್ಲಿ ಅಂಥ infrastructure ಇಲ್ಲ, ಆ ರೀತಿಯಾಗಿ ಕಲಿಸತಕ್ಕ ಇನ್ನು ಲೆಕ್ಚರರ್ಸ್, ಪ್ರೊಫೆಸರ್ಸ್, ಆ ರೀತಿಯಾಗಿ ನಮ್ಮಲ್ಲಿ trained ಕೂಡ ಇಲ್ಲ. ಅದೂ ಅರ್ಥವಾಗುತ್ತದೆ. ಅದಕ್ಕೆ ನೀವು ಬೇರೆಯವರಿಗೆ ಹೋಲಿಸಿದಾಗ ಅಥವಾ ಎಷ್ಟೇ Public Undertaking ಅನ್ನು ತೆಗೆದುಕೊಳ್ಳಿ, ಎಲ್ಲಿ reservations ಇಲ್ಲ, ಅಲ್ಲೆಲ್ಲಾ ಲಾಸ್‌ನಲ್ಲಿವೆ, ಅಲ್ಲೇನು ಕೆಲವು ಕಡೆ reservations ಇದೆ, ಇಲ್ಲದೇ ಇರತಕ್ಕ Public Undertaking ನಲ್ಲು ಕೂಡ ಇವತ್ತು ಎಲ್ಲ ಲಾಸ್‌ನಲ್ಲಿದೆ. ಅದರರ್ಥ efficiency ಅವರ ಹತ್ತಿರ ಇಲ್ಲ ಎಂದು ಹೇಳೋಣವೇ? ಮೆರಿಟ್ ಮೇಲೆ ತೆಗೆದುಕೊಂಡವರ ಹತ್ತಿರ. ಹೀಗೆ ನಾವು ಅನಲೈಜ್ ಮಾಡಿದರೆ ultimateluy ನಾವು ಎಲ್ಲಿಗೆ ಹೋಗುತ್ತಿದ್ದೇವೆಂದರೆ ಯಾರಿಗೂ opportunity ಕೊಡಬಾರದು, deny ಮಾಡಬೇಕೆನ್ನುವ

ಮನೋಭಾವನೆಯಿಂದ ನಾವು ಹೋಗುತ್ತಿರುವ ಕಾರಣ ಇವತ್ತು ರಾಷ್ಟ್ರದಲ್ಲಿ talent ಬೆಳೆಯುವುದಕ್ಕೆ ಅವಕಾಶವಾಗುತ್ತಿಲ್ಲ. ನೀವು promote ಮಾಡಬೇಕು. ಇವತ್ತು ನೀವು promote ಮಾಡಿದರೆ ತಾನೇ ಸಹಾಯ ಮಾಡಿದರೆ ತಾನೇ ನಿಮಗೆ ವಿದ್ಯಾರ್ಥಿಗಳು ಸಿಗತಕ್ಕದ್ದು. ಒಂದು ಕಡೆ ಅವರಿಗೆ encouragement ಇಲ್ಲ, ಇನ್ನೊಂದು ಕಡೆ ನೂರೆಂಟು ಕ್ವೈರಿಗಳನ್ನು ಹಾಕಿ ಅಲ್ಲಿಗೆ ನಿಲ್ಲಿಸತಕ್ಕದ್ದು. ಇವೆಲ್ಲ ಕೂಡ ನಾವು ನೋಡಿದಾಗ ನಿಜವಾಗಿ ಇವತ್ತು ಈ OBC ಗೆ ಸಿಗತಕ್ಕಂಥದ್ದಕ್ಕೆ ನಾವೆಲ್ಲರೂ ಕೂಡ ಪರೋಕ್ಷವಾಗಲೀ ಅಥವಾ ಪ್ರತ್ಯಕ್ಷವಾಗಲೀ, ಅಲ್ಲಿ ಅಡ್ಡಗಾಲನ್ನು ಹಾಕುತ್ತಿದ್ದೇವೆ. ಅದಕ್ಕೆ ಇದು OBC ಗೆ reservation ಅನ್ನು ಕೊಡಬೇಕೆಂದು ಹೇಳಿ ನಾವು ಒತ್ತಾಯ ಮಾಡತಕ್ಕ ಪರಿಸ್ಥಿತಿ ಏಕೆ ಬಂದಿದೆ ಎಂದರೆ ಯಾವಾಗ suo moto ಜನರು realize ಮಾಡುವುದಿಲ್ಲ, ಅಥವಾ ಅನೇಕ ಜನ ಈ ದೇಶದಲ್ಲಿ ಸ್ವಾತಂತ್ರ್ಯ ಸಿಕ್ಕಮೇಲೆ ಲಾಭವನ್ನು ಪಡೆದುಕೊಂಡಂಥ ಜನ, ನಾವೆಲ್ಲರಿಗೆ ತೆಗೆದುಕೊಂಡು ಹೋಗಬೇಕು, equal opportunity ಯನ್ನು ಎಲ್ಲರಿಗೆ ಕೊಡಬೇಕು, ನಮ್ಮ ಜೊತೆಯಲ್ಲಿ ಅವರನ್ನು ತೆಗೆದುಕೊಂಡು ಹೋಗಬೇಕು ಎನ್ನತಕ್ಕಂಥ ಭಾವನೆ ಯಾರಿಗೆ ಇರುವುದಿಲ್ಲವೋ ಅಂಥವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕೆ ಹೀಗೆ ಒತ್ತಾಯ ಮಾಡಬೇಕು, ತೋರಿಸಬೇಕು, ಇಡೀ ಸದನ ಈ ಒಂದು philosophy ಹಿಂದೆ ಈ ಒಂದು reservation policy ಹಿಂದೆ ಇದೆ ಅನ್ನತಕ್ಕ ದೃಷ್ಟಿಯಿಂದ ಇದನ್ನು ಮೂವ್ ಮಾಡಿದ್ದೇ ಹೊರತಾಗಿ ಇದರಿಂದ ಎಲ್ಲರೂ ಎಲ್ಲೆಲ್ಲೂ ಉದ್ಧಾರವಾಗುತ್ತದೆ ಎಂದು ಅಲ್ಲ. ಇದು ಒಂದು ಸಾಂಕೇತಿಕವಾಗಿ ಅಂದರೆ ಇಂಥ reservation policy ಗೆ ಪ್ರಗತಿಪರ ವಿಚಾರಕ್ಕೆ ನಾವೆಲ್ಲರೂ ಕೂಡ ಬೆಂಬಲಿಗರಿದ್ದೇವೆ, ಅದಕ್ಕೆ ಇಡೀ ಕರ್ನಾಟಕ ರಾಜ್ಯ ನಿಮ್ಮ ಜೊತೆ ಇದೆ, ನಿಮಗೆ ಏನೇ ತೊಂದರೆ ಬಂದರೂ ಕೂಡ ಅದನ್ನು ನೀವು ನಿವಾರಣೆ ಮಾಡತಕ್ಕದ್ದು ಮಾಡಿಕೊಳ್ಳಬೇಕು. ಆ ಶಕ್ತಿಯನ್ನು ನಿಮಗೆ ಕೊಡುತ್ತೇವೆಂದು ಹೇಳಿ ಇವತ್ತು ಇಲ್ಲಿ ಇದನ್ನು ತಂದಿದ್ದೇವೆ. ನಿಜವಾಗಲೂ ಸಿದ್ಧರಾಮಯ್ಯನವರು ಸಮರ್ಥಿಸಿಕೊಂಡರು, ಬಹಳ ಜನ ಅದು ಏಕೋ ನನಗೆ ಗೊತ್ತಿಲ್ಲ, ಏಕೆ quota ವನ್ನು ಜಾಸ್ತಿ ಮಾಡಿ, ಕೊಡತಕ್ಕದ್ದು ಅದೇನು ಬಹಳ ದೊಡ್ಡ ಉಪಕಾರವಲ್ಲ.

(4–00 ಗಂಟೆ)

Quota ಜಾಸ್ತಿ ಮಾಡಿಕೊಡತಕ್ಕಂಥಾದ್ದಲ್ಲ, ಈಗ ಇರತಕ್ಕಂಥಾದ್ದಕ್ಕೆ ಮತ್ತೆ ನೀವು quota ಸೇರಿಸಿದ ಮೇಲೆ, in total seats ನಲ್ಲಿ ಕೊಡಬೇಕು. ಅದು ಕೊಟ್ಟಂತಾಗುತ್ತದೆ.

ಇಲ್ಲವೇ ಏನೋ ದಾನ ಕೊಟ್ಟಂತೆ, 'ನೋಡಿ, ನಿಮಗೆ ನಾವೇನೂ ಮಾಡುವುದಿಲ್ಲ. ಏನೂ ತೊಂದರೆಯಾಗುವುದಿಲ್ಲ, ನಾವು seats enhance ಮಾಡಿದ್ದೇವೆ, fees ಕಡಿಮೆ ಮಾಡಿದ್ದೇವೆ'. ಪ್ರಶ್ನೆ ಅದಲ್ಲ. ಪ್ರಶ್ನೆ ಇರತಕ್ಕಂಥಾದ್ದು, reservation policy ಯನ್ನು ನೀವು ಒಪ್ಪಿಕೊಂಡಿರಾ? ಇಲ್ಲವೇ? ಅಥವಾ OBC ಯಲ್ಲಿ 27% ಕೊಡಬೇಕೆನ್ನುವುದು ನಿಮ್ಮ commitment ಆಗಿದೆಯೇ? ಇಲ್ಲವೇ? ನಿಮಗೆ commitment ಇದ್ದರೆ, quota ಜಾಸ್ತಿ ಇರಬಹುದು, quota ಕಡಿಮೆ ಇರಬಹುದು, ಅದು ಬೇರೆ ವಿಚಾರ. ಆದರೆ, ನೀವು ಇದಕ್ಕೆ ಬದ್ಧರಾಗಿರಬೇಕು, ಇದನ್ನು ಕೊಡಬೇಕು. ಕೇಂದ್ರ ಸರ್ಕಾರದವರು ಈ ವರ್ಷದ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಅದನ್ನು ತಂದಿರಬಹುದು. ಆದರೆ, ತಾತ್ವಿಕ ದೃಷ್ಟಿಯಿಂದ, ನೀತಿಯ ದೃಷ್ಟಿಯಿಂದ ಇವತ್ತು ಎಷ್ಟೇ quota ಇರಲಿ, ಅದರೊಳಗೇ 27% ಕೊಡಬೇಕು. ಇದನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ಮತ್ತು Article 340, 340 (1) (2) ಅಲ್ಲಿಯೂ ಕೂಡ ಇಂತಹ ಒಂದು ವ್ಯವಸ್ಥೆ ಸಹಾಯ ಮಾಡುವುದಕ್ಕೆ ಇದೆ. ಅಂದರೆ, ಸಂವಿಧಾನದಲ್ಲಿ ಇದೆಲ್ಲವೂ ಕೂಡ ಬರಬೇಕಾಗಿದ್ದರೆ, ಈ ಸಮಾಜದ ವ್ಯವಸ್ಥೆಯನ್ನು ತಲೆಯಲ್ಲಿಟ್ಟುಕೊಂಡೇ, ಗಮನಿಸಿ, ವಿಚಾರ ಮಾಡಿ, ಅವರು ಮಾಡಿದ್ದಾರೆಯೇ ಹೊರತು, ಇದನ್ನು ಸುಮ್ಮಸುಮ್ಮನೆ ಸೇರಿಸಿರುವುದಿಲ್ಲ. ಸಮಾಜದ ಇಲ್ಲಿನ ವ್ಯವಸ್ಥೆ ಏನಿದೆ, ಯಾವ ರೀತಿಯಾಗಿ ನಡೆದುಕೊಳ್ಳುತ್ತಾರೆ, ಯಾವ ರೀತಿಯಾಗಿ ಅಡ್ಡಿ-ಅಡಚಣೆಗಳು ಬರಬಹುದು, ಇವೆಲ್ಲವನ್ನೂ ವಿಚಾರ ಮಾಡುತ್ತಿದ್ದಾರೆ. ಅದಕ್ಕೆ ಒಂದೊಂದು ಸಲ ಬೇಜಾರಾಗುತ್ತದೆ. ನಾವು ಅನೇಕ ಜನರು ಜಾತಿ ಹೆಸರಿನಲ್ಲಿ medical college ತೆಗೆದುಕೊಳ್ಳುತ್ತೇವೆ, ಜಾತಿಯ ಹೆಸರಿನಲ್ಲೇ Engineering College ತೆಗೆದುಕೊಳ್ಳುತ್ತೇವೆ. ಆದರೆ, ಅಲ್ಲಿ ನೋಡಿದರೆ, ಆ ಜಾತಿಯ ಜನರೇ ಇರುವುದಿಲ್ಲ! ತೆಗೆದುಕೊಳ್ಳುವಾಗ minority ಎಂದು ತೆಗೆದುಕೊಳ್ಳುವುದು, lingustic minority ಎಂದು ತೆಗೆದುಕೊಳ್ಳುವುದು ಅಥವಾ ಅಂತಹ ಜಾತಿಯವರೆಂದು ತೆಗೆದುಕೊಳ್ಳುವುದು. ಆದರೆ, ಆ ಜಾತಿಯ ಮಕ್ಕಳಿಗೆ ಏನು ಪ್ರಾತಿನಿಧ್ಯ ಕೊಡಬೇಕೋ, ಅನೇಕ ಸಲ ಕೊಡುವುದಿಲ್ಲ. ಅದರಿಂದ ಏನಾಗುತ್ತದೆಂದರೆ, ಇವತ್ತು ಎಲ್ಲವೂ commercialise ಆಗುತ್ತಿದೆ. ಆ ರೀತಿ commercialize ಆದ ಮೇಲೆ ಏನು ಆಗಿಬಿಟ್ಟಿದೆಯೆಂದರೆ, ನಾವು ಕೊಟ್ಟರೂ ಬರುತ್ತದೆ, ಕೊಡದಿದ್ದರೂ ಬರುತ್ತದೆ. ಆದ್ದರಿಂದ, ಈ reservation ಅನ್ನು slowly dilute ಮಾಡತಕ್ಕಂಥ ಶಕ್ತಿಗಳು ದಿನೇ ದಿನೇ

ಬೆಳೆಯುತ್ತಿವೆ. ಕಳೆದ ಆರು ತಿಂಗಳಿನಲ್ಲಿ ಒಂದು ಒಳ್ಳೆಯ ಕೆಲಸವೆಂದರೆ, ನಾವು move ಮಾಡಿದ resolution ಅನ್ನು ಇವರು ಒಪ್ಪಿಕೊಂಡು, ಸರ್ಕಾರವೇ resolution move ಮಾಡತಕ್ಕಂಥ ಇದೊಂದೇ ಒಳ್ಳೆಯ ಕೆಲಸ ಮಾಡಿರುವುದು. ಬಾಕಿ ಏನೂ ಇಲ್ಲ. ಬಾಕಿಯದೆಲ್ಲವೂ ವಿಕಾಸ...ವಿನಯ.... ಇನ್ನು ಏನೇನು ಇದೆಯೋ, ಅದೆಲ್ಲವನ್ನೂ ಮಾಡಿದರು.

ಶ್ರೀ ಜಗದೀಶ್ ಶೆಟ್ಟರ್ :– ಒಳ್ಳೆಯ ಕೆಲಸ ಯಾವುದೂ ನಿಮಗೆ ಕಾಣುತ್ತಿಲ್ಲ. ಒಳ್ಳೆಯ ಕೆಲಸಗಳಾಗಿವೆ. ಆದರೆ, ನಿಮಗೆ ಅದ್ಯಾವುದೂ ಕಾಣುತ್ತಿಲ್ಲ. ನೀವು ಅಲ್ಲಿ ಕುಳಿತಿದ್ದೀರಲ್ಲ, ಅದಕ್ಕೇ ಏನು ಕಾಣುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಾನು ನಿಮ್ಮ ಎದುರುಗಡೆಯೇ ಕುಳಿತಿರುತ್ತೇನೆ, ಏನೂ ಕಾಣುತ್ತಿಲ್ಲ. ನೀವು ಯಾವಾಗಲೂ ಖಾದಿ ಬಟ್ಟೆಯನ್ನೇ ಧರಿಸಿಕೊಂಡು ಬರುತ್ತೀರಿ, ನಾವು ಕಾಣುವಂತಿಲ್ಲ. ಬಿಳಿ ಅಂಗಿಯೂ ಒಮ್ಮೊಮ್ಮೆ ಕಾಣುವುದಿಲ್ಲ. ಅಧ್ಯಕ್ಷರೆ, ಇದಕ್ಕೆ ನಾವು ಸಂಪೂರ್ಣವಾಗಿ ಬೆಂಬಲಿಸಿ, ಈ reservation policy ಏನೂ ಹೊಸದಲ್ಲ. ಸುಮಾರು 1831ರಲ್ಲೇ OBC ಗೆ Madras State ನಲ್ಲಿ reservation ಕೊಡಲಾಗಿತ್ತು. ಮತ್ತು ಎಲ್ಲಕ್ಕಿಂತಲೂ ಮೆಚ್ಚತಕ್ಕಂಥಾದ್ದು ಏನೆಂದರೆ, 1902ರಲ್ಲಿ ಕೊಲ್ಲಾಪುರದ ಒಬ್ಬ ಛತ್ರಪತಿ ಮಹಾರಾಜ, ಅದು ಮರಾಠ ಛತ್ರಪತಿ... Mysore ದು later on 1921ಕ್ಕೆ ಬಂದಿದೆ. ನಾನು ಹೇಳುವುದೇಕೆಂದರೆ, ಕೊಲ್ಲಾಪುರ ಛತ್ರಪತಿಯನ್ನು Scholorship ಕೊಡುವುದಲ್ಲದೇ, scholorship ಕೊಟ್ಟು ಅನೇಕ ಹಿಂದುಳಿದ ವಿದ್ಯಾರ್ಥಿಗಳಿಗೆ, ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ Higher Education ಗೆ England ಗೆ ಕಳುಹಿಸಿಕೊಡುತ್ತಿದ್ದರು. ಆದರೆ, ಇಲ್ಲಿ reservation ಕೊಡಿ ಎಂದರೆ, ಈ ಕಾಲದಲ್ಲೇ ನಾವು ಯಾರೂ ಒಪ್ಪುತ್ತಿಲ್ಲ. ಆ ಕಾಲದಲ್ಲೇ ಹಣ ಕೊಟ್ಟು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಕೊಲ್ಲಾಪುರದ ಮಹಾರಾಜರು ಕಳುಹಿಸಿಕೊಟ್ಟರು. ಅಂದರೆ, ಇದರ ಬಗ್ಗೆ ಯೋಚನೆ ಮಾಡತಕ್ಕಂಥ ರಾಜರಿದ್ದರು. ಆದರೆ, ಇಲ್ಲಿ ಪ್ರಜಾಪ್ರಭುತ್ವದಲ್ಲಿ ನಾವೆಲ್ಲರೂ ಕೂಡ ಸಾಮಾಜಿಕ ನ್ಯಾಯ ಕೊಡುತ್ತೇವೆ, ಆರ್ಥಿಕ ಸಮಾನತೆ ತರುತ್ತೇವೆಂದು ಹೇಳತಕ್ಕಂಥದವರು ವಿದ್ಯಾಭ್ಯಾಸಕ್ಕೂ ಅಡ್ಡಿಪಡಿಸುತ್ತಾರೆಂದರೆ, ನಾವು ಅವರಿಗೆ ಏನು ಹೇಳುವುದು? ಇವತ್ತು ಆ resolution ತಂದಿರುವುದಕ್ಕೆ ಸಂಪೂರ್ಣ ಬೆಂಬಲ ನೀಡುತ್ತಾ, ಇವತ್ತು ಇದನ್ನು ಮುಂದುವರೆಸಬೇಕು ಮತ್ತು ಬಂದ್ ಮಾಡಿದರೆ ಏನೂ ತೊಂದರೆಯಾಗುವುದಿಲ್ಲ. ಇಂತಹ cause ಗೆ ನಾವೆಲ್ಲರೂ ಕೂಡ

ಒಗ್ಗಟ್ಟಾಗಿದ್ದೇವೆ. ಇವತ್ತು ನೀವು ಶಾಂತಿಯುತವಾಗಿ ಬಂದ್ ಅನ್ನು ಪಾಲನೆ ಮಾಡಿ ಎಂದು ಹೇಳತಕ್ಕಂಥಾದ್ದು ಅಷ್ಟೇ ಹೊರತು, ಮತ್ತೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ಹೇಳಿದ್ದು : Court stay ಗೆ ನಾವು ಬಂದ್ ಮಾಡಬಹುದೇ ಎಂದು. ಆದರೆ, ಅದಕ್ಕೆ ನಾನು ತಯಾರಿಲ್ಲವೆಂದು....

ಶ್ರೀ ಜಯಪ್ರಕಾಶ್ ಹೆಗ್ಡೆ :– ಕೊಟ್ಟಿರುವುದು ಕೇವಲ ತಡೆಯಾಜ್ಞೆ, ಇದಿನ್ನೂ final order ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇದನ್ನು ತಕ್ಷಣ ತೆಗೆದುಕೊಳ್ಳಬೇಕು. ಈಗ ನಾವು ಯಾರ ರೀತಿಯಾಗಿ PUC ಮಕ್ಕಳಿಗೆ ತೊಂದರೆಯಾಗುತ್ತದೆ, ಯಾವುದೇ ಒಂದು agitation ಮಾಡಬಾರದು ಅಥವಾ ಬೇರೆ ರೀತಿಯಿಂದ ಇದನ್ನು ತೆಗೆದುಕೊಳ್ಳಬಾರದು, ನಮ್ಮ ಮಕ್ಕಳ ಮೇಲೆ ಪರಿಣಾಮವಾಗುತ್ತದೆಂಬ ರೀತಿಯಿಂದ ನಾವೇನು ಹೋಗುತ್ತಿದ್ದೇವೆ, ಅದನ್ನು ಅವರೂ ಯೋಚನೆ ಮಾಡಬೇಕು. ಇವತ್ತು admission ನಿಂದ ಎಷ್ಟು ದಿವಸ ನೀವು ಮಕ್ಕಳಿಗೆ ತಡೆಯುತ್ತೀರಿ? ಇದೇನು Is it a Constitution dead-lock? ಏನು ಭಾರೀ ಅನಾಹುತವಾಗುತ್ತದೆಯೇ? ನೂರಾರು ಮಕ್ಕಳಿಗೆ Indian Institute of Science ನಲ್ಲಿ, I.M.C.ಯಲ್ಲಿ admission ಕೊಟ್ಟರೆ, ಏನು ಅನಾಹುತವಾಗುವುದಿಲ್ಲವೇ? ನನಗನ್ನಿಸಿದ ಮಟ್ಟಿಗೆ ಅದರಿಂದೇನೂ ತೊಂದರೆಯಾಗುವುದಿಲ್ಲ. ಮತ್ತು ಮುಂದೆ ಯಾರು college ನಿಂದ ಬರುತ್ತಾರೋ, ಅವರೆಲ್ಲರೂ select ಆಗುವುದು merit ಮೇಲೆ ತಾನೇ? ಅದಕ್ಕೋಸ್ಕರ, ಇದಕ್ಕೆ ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ತಂದಿರತಕ್ಕಂಥ ನಿರ್ಣಯ IIM & IIT ಯಲ್ಲಿ ಶೇಕಡ 27ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರ ಏನು ತಂದಿತ್ತು, ಅದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಆ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಮತ್ತು IIM & IIT ಯಲ್ಲಿ ಪ್ರವೇಶ ಪಡೆಯತಕ್ಕಂಥ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಉದ್ದೇಶದಿಂದ ತಂದಿರತಕ್ಕಂಥ ಈ ಶಾಸನಕ್ಕೆ Supreme Court ತಡೆಯಾಜ್ಞೆ ನೀಡಿರತಕ್ಕಂಥಾದ್ದು, ನಮಗೆಲ್ಲರಿಗೂ ಬೇಸರ ತಂದಿರತಕ್ಕಂಥ, ನೋವು ತಂದಿರತಕ್ಕಂಥ ವಿಚಾರವಾಗಿದೆ. ನಾವು ಶ್ರೇಣೀಕೃತ ಸಮಾಜದಲ್ಲಿ ಬದುಕುತ್ತಿದ್ದೇವೆ. ಹಾಗಾಗಿ, ಇದು ಅನಿವಾರ್ಯ. ಎಲ್ಲಿಯವರೆಗೆ ಈ ಸಾಮಾಜಿಕ,

ಆರ್ಥಿಕ ಅಸಮಾನತೆ ಇರುತ್ತದೋ, ಅಲ್ಲಿಯವರೆಗೂ ಕೂಡ ಹಿಂದುಳಿದಂತಹವರನ್ನು ಮುಖ್ಯ ವಾಹಿನಿಗೆ ತರುವುದಕ್ಕೆ ಬೇಕಾಗಿರತಕ್ಕಂಥ ಒಂದು ಪ್ರಮುಖವಾದ ಅಂಶ ಇದಾಗಿರುವುದರಿಂದ ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಇದನ್ನು ತಂದಿರತಕ್ಕಂಥಾದ್ದು. ಇಂಥಾದ್ದರ ಬಗ್ಗೆ ತಡೆಯಾಜ್ಞೆ ಎಂದು ಹೇಳುವುದಕ್ಕೆ ನ್ಯಾಯಾಲಯಗಳು ಮುಂದೆ ಬಂದರೆ, ನಾಳೆ ದಿವಸ transformation of the society from status quo to progress ಅದು ನಿಲ್ಲುತ್ತದೆಂಬ ಆಲೋಚನೆ ನ್ಯಾಯಾಂಗಕ್ಕೆ ಇರಬೇಕು. ಏಕೆಂದರೆ, ಬುದ್ಧಿವಂತಿಕೆ ಎನ್ನುವುದು ಯಾರ ಸ್ವತ್ತೂ ಅಲ್ಲ. ಅದನ್ನು ಈ ಸಮಾಜದಲ್ಲಿ ಯಾರಿಗೂ ಗುತ್ತಿಗೆ ಕೊಟ್ಟಿಲ್ಲ. ಯಾವುದೋ ಐತಿಹಾಸಿಕ ಕಾರಣಕ್ಕೋಸ್ಕರ ನೀವು ನಮ್ಮನ್ನೆಲ್ಲಾ ತುಳಿದಿಟ್ಟಿದ್ದೀರಿ. "ಮಾ ಶೂದ್ರಾಯ ಮತಿ ತಥಾತಿ" ಎಂದು ಹೇಳಿ ನಮ್ಮನ್ನು ನೀವು ಹಿಂದಕ್ಕೆ ಹಾಕಿದ್ದೀರಿ. ಆದರೆ, ಇನ್ನು ಮುಂದೆ ಕೂಡ ಇದು ಹೀಗೆ ನಡೆದುಕೊಂಡು ಹೋಗುವುದಕ್ಕಾಗುವುದಿಲ್ಲ, ಆಗಬಾರದು. ಅದು ನಮ್ಮ ಉದ್ದೇಶ. ಅಂಥಾದ್ದಕ್ಕೆ ನ್ಯಾಯಾಂಗ ಅಡ್ಡಿ ಬರತಕ್ಕಂಥಾದ್ದು. ನಾನು ಇತ್ತೀಚಿನ Supreme Court ನ ಹಲವಾರು ತೀರ್ಮಾನಗಳನ್ನು ಗಮನಿಸಿದ್ದೇನೆ. Main Schedule ಬಗ್ಗೆ ಕೊಟ್ಟಂಥ ತೀರ್ಪು, Medical College ಗಳಲ್ಲಿ admissions ಬಗ್ಗೆ ಕೊಟ್ಟಂಥ ತೀರ್ಪುಗಳನ್ನೂ ನೋಡಿದಾಗ, ಯಾರ ಪರವಾಗಿ ನೀವು ನಿಲ್ಲುತ್ತಿದ್ದೀರಿ? ನೀವು ಪ್ರಜ್ಞಾಪೂರ್ವಕವಾಗಿ ಅದನ್ನು ಮಾಡುತ್ತಿದ್ದೀರೋ, ಅಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದೀರೋ, ನಮಗೆ ಗೊತ್ತಿಲ್ಲ. ಆದರೆ, ನಿಮ್ಮ ತೀರ್ಪುಗಳು ಯಾವುದೋ ಒಂದು ಉನ್ನತ ವರ್ಗದ ಪರವಾಗಿ ಬರುತ್ತಿವೆ ಎನ್ನತಕ್ಕಂಥಾದ್ದು ಭಾರೀ ಸ್ಪಷ್ಟ. ಅದು medical college admissions ನಲ್ಲಿ ಎಷ್ಟು ಗೊಂದಲ ಮಾಡಿದ್ದಾರೆಂದರೆ, 10-12 judgements ಅನ್ನು ಅದೇ Supreme Court ಕೊಟ್ಟಿತು. T.M.A. Pai Case ನಲ್ಲಿ ಕೊಟ್ಟಂಥ judgement, ಇನ್ನೊಂದು judgement, ಮತ್ತೊಂದು judgement, ಇದನ್ನೆಲ್ಲಾ ನೋಡಿದರೆ, ಅವರದೇ self-contradictory judgement. ಕಡೆಗೆ, ನ್ಯಾಯಾಂಗಗಳು ಯಾವ ಹಂತಕ್ಕೆ ಬಂದಿವೆಯೆಂದರೆ, ಕಾನೂನುಗಳನ್ನು ಅವರೇ ಮಾಡತಕ್ಕಂಥಾದ್ದು. Fee ನಿಗದಿ ಮಾಡುವುದು, ಸೀಟನ್ನು ಹಂಚಿಕೆ ಮಾಡತಕ್ಕದ್ದು, almost, they stepped into the shoes of the Legislature and the Executive. This is very dangerous. ಪ್ರಧಾನ ಮಂತ್ರಿಗಳಾದ ಮಾನ್ಯ ಮನಮೋಹನ್‌ಸಿಂಗ್ ರವರಂಥ ಸೌಮ್ಯ ವ್ಯಕ್ತಿಯೇ ಬಹಳ ಸ್ಪಷ್ಟವಾದ ಪದಗಳಲ್ಲಿ

ಇದರ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆಂದರೆ ನಮ್ಮಂಥವರ ಪರಿಸ್ಥಿತಿಯೇನಾಗಬಹುದು? ಅದರ ಬಗ್ಗೆ ಹೇಳಬಾರದೆಂದು ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ. ಅವರ ಮಾತಿಗೆ ಗೌರವ ಕೊಟ್ಟು ಅದನ್ನೆಲ್ಲ ಹೇಳುವುದಿಲ್ಲ. ಆದ್ದರಿಂದ ಮಾನ್ಯ ಮನಮೋಹನ್‌ಸಿಂಗ್ ರವರಂಥವರೇ ಆ ರೀತಿ ಪದಗಳನ್ನು ಉಪಯೋಗಿಸಿರುವಾಗ ಇವತ್ತು ನ್ಯಾಯಾಂಗ ಎಲ್ಲೋ ಒಂದು ಕಡೆ ತನ್ನ ಮಿತಿಯನ್ನು ದಾಟುತ್ತಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅದರ ಪರಿಣಾಮವೇ ಇದು. ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದೀರಿ. ಇದು ಸಮಂಜಸವಲ್ಲ. ಅದನ್ನು ತೆರವುಗೊಳಿಸಬೇಕೆಂದು ಹೇಳುತ್ತೇನೆ. 1931ರ ಮೇರೆಗೆ ತಡೆಯಾಜ್ಞೆ ಕೊಟ್ಟಿದ್ದೇವೆಂದು ಏನು ಕಾರಣ ಕೊಟ್ಟಿದ್ದಾರೆ, ಅದು ಯಾವುದೇ ರೀತಿಯಲ್ಲೂ ಸಕಾರಣವಲ್ಲ. ಇವತ್ತು ನಾವು ಅವರ ವಿರುದ್ಧ ಮಾತನಾಡುತ್ತಿಲ್ಲ. ನಾವು ಸಾಮಾಜಿಕ ನ್ಯಾಯದ ಪ್ರಶ್ನೆ ಕೇಳುತ್ತಿದ್ದೇವೆ. ಸಾಮಾಜಿಕ ನ್ಯಾಯವನ್ನು ಕೊಡತಕ್ಕ ಸಂದರ್ಭದಲ್ಲಿ ತಾವು ಅಡ್ಡಿ ಬರಬಾರದು ಎಂಬುದು ನಮ್ಮ ವಿನಂತಿ. ನೀವು ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ ಇದು ಬೇರೆ ಬೇರೆ ರೂಪಗಳನ್ನು ಪಡೆಯುತ್ತದೆ. ಅದಕ್ಕೆ ನ್ಯಾಯಾಂಗ ಅವಕಾಶ ಮಾಡಿಕೊಡಬಾರದು. ಇದನ್ನು ತೆರವುಗೊಳಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :- ನಾನು ಇದರ ಬಗ್ಗೆ ಒಂದು ವಿಚಾರ ಹೇಳುವುದನ್ನು ಮರೆತೆ. Permanent Backward Class Commission ರಾಜ್ಯದಲ್ಲಿ ಮಾಡುವ ಬಗ್ಗೆ ಮೇಲ್ಮನೆಯಲ್ಲೂ ಪ್ರಸ್ತಾಪವಾಗಿದೆ. ಇವತ್ತು ಕೂಡ ಸಿದ್ಧರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಆದಷ್ಟು ಬೇಗ Permanent Backward Class Commission ಗೆ ಅಧ್ಯಕ್ಷರನ್ನು ನೇಮಿಸಿದರೆ, ಯಾರು ಬಿಟ್ಟುಹೋಗಿದ್ಧಾರೆ, ಯಾರಿಗೆ list ನಲ್ಲಿ ಹೆಸರೇ ಇಲ್ಲ, ಅವರಿಗೆ minimum educational facilities or employment facility ಸಿಗಬೇಕಾದರೆ represent ಮಾಡಿಕೊಳ್ಳುತ್ತಾರೆ. ಆ list ನ್ನು revive ಮಾಡುವುದಕ್ಕೂ ಅಧಿಕಾರವಿದೆ. ಆದ್ದರಿಂದ ಆ Parmanent Backware Commission ನ್ನು ಆದಷ್ಟು ಬೇಗ ಮಾಡಬೇಕು. ಪದೇ ಪದೇ ಕೇಳಿಸಿಕೊಂಡು ಮಾಡತಕ್ಕದ್ದಲ್ಲ. Pollution Control Board, K.S.R.T.C., Slum Clearance Board, Sweepers Board ಈ ರೀತಿ ಬೇರೆ ಎಲ್ಲದ್ದೂ ಆಯಿತು. At least ಇದು 71% ಜನರಿಗೆ ಸಂಬಂಧಪಟ್ಟಂಥ Commission. ಈಗಲಾದರೂ ತಕ್ಷಣ ಇದನ್ನು

ಘೋಷಣೆ ಮಾಡಿ resolution ಗೆ reply ಕೊಡುವಾಗ ಇಂತಿಂಥವರನ್ನು ಮಾಡಿದ್ದೇವೆ, ಇಂಥವರು ಅಧ್ಯಕ್ಷರು, ದಯವಿಟ್ಟು ನೀವು ಅಲ್ಲಿ ಹೋಗಿ ಅರ್ಜಿಯನ್ನು ಕೊಡಿ ಎಂದು ಹೇಳಿ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :- ಮಾನ್ಯ ಉಪಾಧ್ಯಕ್ಷರೆ, ಕೋರ್ಟ್‌ಗಳಲ್ಲಿ judges ಯಾವಾಗಲೂ ಸ್ವಲ್ಪ reactionary attitude ಎಂಬ ಅನುಭವ ಈ ದೇಶದಲ್ಲಿದೆ. ಜಗತ್ತಿನ ಎಲ್ಲಾ ಕಡೆ ಇದು ಇದ್ದರೂ ಇಲ್ಲಿ ವಿಶೇಷ. Progressive measures ಏನೇ ತೆಗೆದುಕೊಂಡರೂ ಅದರ ವಿರುದ್ಧ judgement ಕೊಡುತ್ತಾರೆ. ಎಲ್ಲರೂ ಅದೇ ರೀತಿಯೆಂದಲ್ಲ. Justice Iyer ಅಂಥವರು ಈ ದೇಶದಲ್ಲಿ ಬಹಳ ಕ್ರಾಂತಿಕಾರಿಯಾದ judgement ನ್ನು ಕೊಟ್ಟಿದ್ದಾರೆ. ಇಂಥ ಅನೇಕ judges, bank nationalization ಆಗಲಿ, Privy Purse abolition ಆದಾಗಲೂ ಅದರ ವಿರುದ್ಧ judgement ಕೊಟ್ಟು stay ಮಾಡಿದರು. ಆದರೂ public opinion ಈ ದೇಶದಲ್ಲೇನು ಅವಶ್ಯಕತೆ ಇತ್ತು, ಅದಕ್ಕೆ High Court and Supreme Court judges yield ಆಗಬೇಕಾಯಿತು. ಆ ರೀತಿಯ opinion ನ್ನು ಅವರ ಮೇಲೆ ಹಾಕಬೇಕು. ಎಲ್ಲಾ Assembly ಗಳಿಂದ ಬೇರೆ ಬೇರೆ ಕಡೆಗಳಿಂದ ಇದರ ಬಗ್ಗೆ pressure ತರಬೇಕು. ಎಲ್ಲೋ ಒಂದು ಕಡೆ ಕಾರ್ಲ್ ಮಾರ್ಕ್ಸ್ "Courts are custodians of rich people" ಎಂದು ಹೇಳಿದ್ದಾರೆ. ಅವರಷ್ಟು ಅನುಭವ ಬಹುಶಃ ಕಡಿಮೆ ಜನರಿಗಿದೆ. ಕಾರ್ಲ್ ಮಾರ್ಕ್ಸ್‌ರಂಥವರು ಆ ರೀತಿ ಹೇಳಿದ್ದಾರೆ. ಅವರ attitude ಅದೇ ರೀತಿ ಇದೆ. ಇವತ್ತು ಸರ್ಕಾರದವರೇನು ರೆಸಲ್ಯುಷನ್ ತಂದಿದ್ದಾರೆ, ಅದನ್ನು ಸ್ವಾಗತಿಸುತ್ತೇನೆ. ರೆಸಲ್ಯುಷನ್ ಮಾತ್ರವಲ್ಲ, ಈ ದೇಶದಲ್ಲಿ public opinion ಬೆಳೆಸುವ ಸಲುವಾಗಿ public movement ಕೂಡ ಮಾಡಬೇಕಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ) :- ಮಾನ್ಯ ಉಪಾಧ್ಯಕ್ಷರೆ, ಈ ದೇಶದ ಸಾಮಾಜಿಕ ಸೂಕ್ಷ್ಮ ವಿಚಾರದ ಬಗ್ಗೆ ಈ ಸದನದಲ್ಲಿ ನಾವು ಚಿಂತನೆ ಮಾಡುತ್ತಿದ್ದೇವೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಮೇಲೆ ಬದಲಾವಣೆ ತರುವ ಜವಾಬ್ದಾರಿ ಶಾಸನ ಸಭೆಯ ಮೇಲೆ ಇದ್ದೇ ಇರುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆಯನ್ನು ತರುವ ದೃಷ್ಟಿಯಿಂದ ಶಾಸನ ಸಭೆಗಳು ಸಂದರ್ಭಕ್ಕೆ ಅನುಸಾರವಾಗಿ ಹಲವಾರು ಪೂರಕವಾದ ಪ್ರಗತಿಪರ ಹೆಜ್ಜೆಗಳನ್ನು ಈ ದೇಶದ

ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳಲ್ಲಿ ಇಂಥ ಬದಲಾವಣೆಗಳಿಗೋಸ್ಕರ ಕಾನೂನುಗಳನ್ನು ರಚನೆ ಮಾಡಿದ್ದೇವೆ. ತನ್ಮೂಲಕ enforcement of law ಎಂದು ಇದೆ, ಅದರ ಮೂಲಕ ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದೇವೆ. ಆ ನಿಟ್ಟಿನಲ್ಲಿ ಮಾನ್ಯ ಅರ್ಜುನ್‌ಸಿಂಗ್‌ರವರು ಮಹತ್ವವಾದ ಹೆಜ್ಜೆಯೊಂದನ್ನಿಟ್ಟು ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿಯನ್ನು ತಂದಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ ಈ ಮೀಸಲಾತಿಯನ್ನು ತಂದಾಗ ಬಹಳ ದೊಡ್ಡ ಅನಾಹುತ ಆಯಿತು ಎಂಬ ಭಾವನೆಯನ್ನು ವಿಶೇಷವಾಗಿ ನಮ್ಮ ತರುಣರಲ್ಲಿ ಮೂಡಿಸಿದರು. ಬಹಳ ಆಶ್ಚರ್ಯವೆಂದರೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ Medical students ಇದರ ಬಗ್ಗೆ ಹೋರಾಟ ಶುರು ಮಾಡಿದರು. ಅದರ ಬಗ್ಗೆ ನಾವು ಬಹಳ ಹತ್ತಿರದಿಂದ ತಿಳಿದುಕೊಂಡಾಗ ಬಹಳ ದುರ್ದೈವವೆಂದರೆ ಇದರ ನೇತೃತ್ವ ವಹಿಸಿದ್ದವನು Backward Class ಹುಡುಗ. ಪಾಪ, ಅವನಿಗೆ ಇದರ ಲಾಭ ಯಾರಿಗೆ ಸಿಗುತ್ತದೋ, ಯಾರಿಗೆ ಹಾನಿಯಾಗುತ್ತದೋ ಎಂಬ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಆ backward class ಹುಡುಗನಿಗೆ ಬೇರೆಯವರೆಲ್ಲ ದಾರಿತಪ್ಪಿಸಿ ಪ್ರಚೋದನೆ ಮಾಡಿ ಇದರ ವಿರುದ್ಧ ಬೀದಿಗಿಳಿಸಿ ಯಾವ ರೀತಿಯಾಗಿ ತಂತ್ರಗಳನ್ನು ಈ ದೇಶದಲ್ಲಿ ಮಾಡುತ್ತಾರೆಂದರೆ, ಹಿಂದುಳಿದವರಿಗೆ ಸಿಗತಕ್ಕ ಲಾಭವನ್ನು ನೇರವಾಗಿ ತಾವು ವಿರೋಧ ಮಾಡುವುದಕ್ಕೆ ಮುಂದಾಗದೆ ಬೇರೆಯವರನ್ನು ಬಿಟ್ಟು ಅವರನ್ನು ತುಳಿಯುವಂಥ ಪ್ರಯತ್ನ ಈ ದೇಶದಲ್ಲಿ ಮಾಡುತ್ತಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರ ಪಕ್ಷದಂಥ ಸಮ್ಮಿಶ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸಿ ನಿರ್ಣಯವನ್ನು ಸದನದಲ್ಲಿ ಮಂಡಿಸುವ ಚಾಣಾಕ್ಷತನವನ್ನೇನು ನಮ್ಮ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ, ಅದು ಬಹಳ ಸಂತೋಷದ ವಿಷಯ. ಜಗದೀಶ್ ಶೆಟ್ಟರ್‌ರವರು ಕೂಡ ಇದಕ್ಕೆ ಮಾನ್ಯತೆ ಕೊಟ್ಟಿದ್ದಾರೆ, ಅವರಿಗೂ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಹೇಳಬೇಕಾಗುತ್ತದೆ. ಸಂವಿಧಾನದಲ್ಲಿ preamble ನಲ್ಲಿ sovereign democratic republic ಎಂದು ಬರೆದುಕೊಂಡಿದ್ದೇವೆ. ಆದರೆ ಇಂದಿರಾಗಾಂಧಿಯವರ ಕಾಲದಲ್ಲಿ socialistic ಎಂಬ ಶಬ್ದವನ್ನು ಸೇರಿಸಿ ಬದಲಾವಣೆ ಮಾಡಿದರು. ಅದರಿಂದ ಸಂವಿಧಾನದ ಮೇಲೆ ಇನ್ನಷ್ಟು ಜಾಸ್ತಿ ಜವಾಬ್ದಾರಿ" ಸಾಮಾಜಿಕವಾದ ನ್ಯಾಯ ಕೊಟ್ಟು ಸಮಾನತೆ ತರತಕ್ಕದ್ದು" ಕೂಡ ಬರುತ್ತದೆ. ಈ ದೇಶದಲ್ಲಿ ಪಾರ್ಲಿಮೆಂಟ್ ಸುಪ್ರೀಮೋ, Judiciary ಸುಪ್ರೀಮೋ ಎಂಬ ಸಂಘರ್ಷವನ್ನು ಅನೇಕ ಸಂದರ್ಭಗಳಲ್ಲಿ ನೋಡುತ್ತಿದ್ದೇವೆ. ಇವತ್ತೇನು

ಮಾನ್ಯ ಮನಮೋಹನ್ ಸಿಂಗ್‌ರವರು ಹೇಳಿದ್ದಾರೆ, ಅದೇ ಮಾತನ್ನು ಇಂಥದ್ದೇ ಒಂದು ಸಂದರ್ಭದಲ್ಲಿ ಪೀಠಾಧಿಪತಿಗಳ ಸಮಾವೇಶದಲ್ಲಿ ಶಿವರಾಜ್‌ಪಾಟೀಲರು ಹೇಳಿದ್ದರು. ತಾವೂ ಆ ಸಮ್ಮೇಳನಕ್ಕೆ ಹೋಗಿರಬೇಕು. ನಮ್ಮ ಇಡೀ ದೇಶದ ಲೋಕಸಭಾ ಅಧ್ಯಕ್ಷರು, ರಾಜ್ಯಸಭೆಯ ಅಧ್ಯಕ್ಷರಿಂದ ಹಿಡಿದು ವಿವಿಧ ವಿಧಾನಸಭೆಯ ಅಧ್ಯಕ್ಷರ ಸಮಾವೇಶ ನಡೆದಾಗ ಈ ವಿಷಯ ಬಹಳ ಗಂಭೀರವಾಗಿ ಚರ್ಚೆಗೆ ಬಂತು. ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಇರುವ ಸಂಘರ್ಷವನ್ನು ಯಾವ ರೀತಿಯಾಗಿ ಕಡಿಮೆ ಮಾಡಬೇಕು ಎಂಬ ಚರ್ಚೆ ಬಂದಾಗ ಲೋಕಸಭೆಯ ಅಧ್ಯಕ್ಷರಾಗಿದ್ದ ಶಿವರಾಜ್ ಪಾಟೀಲರು ಇದೇ ಮಾತನ್ನು ಅಂದೂ ಕೂಡ ಹೇಳಿದ್ದರು. ನಮ್ಮ ನಮ್ಮ ಇತಿಮಿತಿಗಳನ್ನು ಅರಿತುಕೊಂಡರೆ ಈ ಸಂಘರ್ಷವನ್ನು ತಡೆಯಲು ಸಾಧ್ಯವಿದೆಯೆಂದು ಆ ಸಮ್ಮೇಳನದಲ್ಲಿ ಅವರು ಹೇಳಿದ್ದರು. ಈ ಜುಡಿಷಿಯರಿಯಲ್ಲಿ reservation ಇಲ್ಲದಿರುವ ಕಾರಣಕ್ಕಾಗಿಯೇ ಇಂಥ ಯೋಚನೆಗಳು ಹಲವಾರು ಸಲ ಮಟಿದು ಮಟಿದು ಬರುತ್ತಿದೆ. ಯಾರು ಈ ಸಮಾಜದ ನೋವನ್ನು ಉಂಡಿರುತ್ತಾರೆ ಮತ್ತು ಸಮಾಜದ ಸಮಸ್ಯೆಯನ್ನು ತಿಳಿದುಕೊಂಡಿರುತ್ತಾರೆ, ಅಂಥವರ ಕೈಯಲ್ಲಿ ಜವಾಬ್ದಾರಿ ಸಿಕ್ಕಿದಾಗ ಬಹುಶಃ ಇಂಥ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ. ಈ ಜುಡಿಷಿಯರಿಯಲ್ಲೂ reservation ಬಂದಿದ್ದರೆ ಈ ರೀತಿಯ ನಿರ್ಣಯ ನಮ್ಮ ದೇಶದಲ್ಲಿ ಬರಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಇನ್ನು ಮುಂದೆಯಾದರೂ judiciary ಯಲ್ಲೂ ಕೂಡ reservation ಅನ್ನು ತರಲೇಬೇಕಾಗುತ್ತದೆ. ಆ ಹಂತವನ್ನು ನಾವು ಮುಟ್ಟಿದ್ದೇವೆ. ಅದನ್ನು ತರದಿದ್ದರೆ ಅನೇಕ ಅನಾಹುತಗಳನ್ನು ನಾವು ಎದುರಿಸಬೇಕಾಗುತ್ತದೆ ಎನ್ನುವಂತಹ ಮಾತನ್ನೂ ಕೂಡ ನಾವು ಇಂತಹ ಶಾಸನ ಸಭೆಯಲ್ಲಿ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಉದಾರೀಕರಣ ಬಂದ ಮೇಲೆ, ನೋಡಿ, ಹೇಗೆ ಈ ದೇಶದಲ್ಲಿ ತಂತ್ರಗಾರಿಕೆಗಳು ನಡೆಯುತ್ತವೆ ಎಂದರೆ, ಶ್ರೀಮಾನ್ ವಿ.ಪಿ.ಸಿಂಗ್‌ರವರು ಈ ಮಂಡಲ್ ವರದಿಯನ್ನು ಜಾರಿಗೆ ತಂದ ಮೇಲೆ, ಇದಕ್ಕೆ ತದ್ವಿರುದ್ಧವಾದಂತಹ ತಂತ್ರವನ್ನು ಈ ದೇಶದಲ್ಲಿ ರೂಪು ಮಾಡಿದರು. ಅದೇನೆಂದರೆ, ಏನೆಲ್ಲಾ ಕೆಲಸಗಳು ಈ job reservation ಮುಖಾಂತರ ಹಿಂದುಳಿದ ಜಾತಿ ಮತ್ತು ಪರಿಶಿಷ್ಟರಿಗೆ ಸರ್ಕಾರಿ ಕ್ಷೇತ್ರದಲ್ಲಿ ಸಿಗುತ್ತಿದ್ದವು, ಅದನ್ನು ಒಂದೇ ಒಂದು stroke ನಲ್ಲಿ ಹೊಡೆದು ಹಾಕಿದರು. ದೇಶದಲ್ಲಿ ಉದಾರೀಕರಣವನ್ನು ತಂದರು. ಉದಾರೀಕರಣ ತಂದ ಮೇಲೆ, ಅವರ್ಯಾರೂ reservation ಗೆ ಒಪ್ಪಲಿಲ್ಲ. ಇವತ್ತೂ ಕೂಡ ಖಾಸಗಿ

ಕ್ಷೇತ್ರದಲ್ಲಿ reservation ತರಬೇಕು ಎನ್ನುವುದರ ಬಗ್ಗೆ ವಾದ ನಡೆಯುತ್ತಿದೆ, ಆದರೆ ಅವರು ಒಪ್ಪುತ್ತಿಲ್ಲ. ಇನ್ನು ಉಳಿದಿದ್ದೇ, ಈ ಶೈಕ್ಷಣಿಕ ಕ್ಷೇತ್ರ, ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಈಗ ಓದಿದ ವರ್ಗ ಏನಿದ್ದರೂ ಸರ್ಕಾರಿ ನೌಕರಿಗೆ ಬರುವಂತಹ ಸಂದರ್ಭ ಬರುವುದಿಲ್ಲ. ಇನ್ನು ಓದು ಬರೆಯಲಿಕ್ಕಾಗಿ ಈ ಸಂಸ್ಥೆಗಳಲ್ಲಿ reservation ಕೊಡುತ್ತೇವೆ ಎಂದರೆ, ಅದಕ್ಕೂ ಕೂಡ ಈ ತರಹ ಅಡ್ಡಿ ಬಂದರೆ, ಇನ್ನು ಮುಂದೆ ಯಾವ ಸಮಾಜವಾದವನ್ನು ನಾವು ಸಂವಿಧಾನದಲ್ಲಿ ಸೇರಿಸಿದ್ದೇವೆ, ಅದಕ್ಕೆ ಯಾವುದೂ ಕೂಡ ಅರ್ಥ ಬರುವುದಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಇವತ್ತು ನಾನು, ಮಾನ್ಯ ವೈಜನಾಥ್ ಪಾಟೀಲ್‌ರವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು, ಈ reservation ಗೆ ಬೆಂಬಲ ಕೊಡುವುದು ಬಹಳ ಮಹತ್ವದ್ದಾಗಿದೆ. ಏಕೆಂದರೆ, ಇವತ್ತು ಇಲ್ಲಿ ಈ ಮಾತನ್ನು ನಾವು ಆಡದೇ ಹೋಗಿದ್ದರೆ, ನಾಳೆ ನಮ್ಮ ಬಗ್ಗೆ ಅನುಮಾನ ಪಟ್ಟುಕೊಳ್ಳುವಂತಹ ಜನರೂ ಕೂಡ ಇರುತ್ತಾರೆ. ಹಾಗಾಗಿ, ಇದೊಂದು ಸಾಮಾಜಿಕ ಜವಾಬ್ದಾರಿ ಎನ್ನುವಂತಹ ಕಾರಣಕ್ಕಾಗಿ ನಾವೆಲ್ಲಾ ಎದ್ದು ನಿಂತು ಮಾತನಾಡುತ್ತಿದ್ದೇವೆ. ಈ ದೇಶದಲ್ಲಿ reservation ಬರಲೇಬೇಕು. Even, ಅವತ್ತು 12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ಎಲ್ಲಾ ಸಮುದಾಯಗಳಿಗೂ ಪ್ರಾತಿನಿಧ್ಯ ಕೊಟ್ಟು, ಸಮಾಜದಲ್ಲಿ ಸಮಾನತೆ ತರುವಂತಹ ಪ್ರಯತ್ನವನ್ನು ಮಾಡಿದ್ದರು. ಅವತ್ತು ಬಸವಣ್ಣ ಪ್ರಯತ್ನ ಮಾಡಿದಂತಹ ಈ ಭೂಮಿಯಲ್ಲಿ ಇವತ್ತು ನಾವೆಲ್ಲರೂ ಕೂಡ ಆ ಒಂದು ದಿಕ್ಕಿನಲ್ಲಿ ಚಿಂತನೆ ಮಾಡಬೇಕಾದುದು ಅತಿ ಅವಶ್ಯಕವಾಗಿದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಇವತ್ತು ಏನು 27% ಮೀಸಲಾತಿಯನ್ನು ಕೋರ್ಟ್ ತಡೆಹಿಡಿದಿದೆ, ಅದನ್ನು ಕೇಂದ್ರ ಸರ್ಕಾರದವರು ಆದಷ್ಟು ಬೇಗನೆ ತೆರವು ಮಾಡಿಕೊಂಡು ಜಾರಿಗೊಳಿಸಬೇಕು. ಇವತ್ತು ಜನಾಭಿಪ್ರಾಯ ಕೂಡ ದೇಶದಲ್ಲಿ ಬಹಳ ಮುಖ್ಯವಾದುದು. ಏಕಂದರೆ, ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯ ಇಲ್ಲದೇ ಯಾವುದೂ ಕೂಡ ಸೃಷ್ಟಿಯಾಗಲಿಕ್ಕೆ ಸಾಧ್ಯತೆಯಿಲ್ಲ. ಇದನ್ನು open democracy ಎಂದು ನಾವು ಹೇಳುತ್ತೇವೆ. ಈ Open Democracy ಯಲ್ಲಿ ಸರ್ಕಾರದವರು ಮತ್ತು ವಿರೋಧ ಪಕ್ಷದವರು ಒಂದು ದಿವಸ ಕರ್ನಾಟಕ ಬಂದ್ ಕರೆ ಕೊಡುವುದರ ಮುಖಾಂತರ ಇಡೀ ಕರ್ನಾಟಕದ ಜನತೆಯ ಕೂಗನ್ನು ದಿಲ್ಲಿಗೆ ಮುಟ್ಟಿಸಬೇಕು ಮತ್ತು ಅಲ್ಲಿ judicial ನಲ್ಲಿ ಕುಳಿತಂತಹವರಿಗೂ ಕೂಡ ಅದು ಕೇಳಿಸಬೇಕು ಎನ್ನುವಂತಹ ಪ್ರಯತ್ನ ಏನಿದೆ, ಇದು ಸಮಯೋಚಿತವಾದುದು. ಇದು ಆಗಲೇಬೇಕು.

ಇದು ಆಗಿ ಈ ದೇಶದಲ್ಲಿ ಬದಲಾವಣೆ ತರಲಿಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ.

ಉಪಾಧ್ಯಕ್ಷರು :- ಈಗಾಗಲೇ ಟೈಮ್ ಆಗಿದೆ, ದಯಮಾಡಿ ಕುಳಿತುಕೊಳ್ಳಿ. ಈಗ ಬೇಡ, ಮಾನ್ಯ ಮಂತ್ರಿಗಳಾದ ಎಂ.ಪಿ.ಪ್ರಕಾಶ್‌ರವರು ಮಾತನಾಡುತ್ತಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, Back benches ನವರು ಯಾರೂ ಮಾತನಾಡುವುದರಿಂದ ದಯವಿಟ್ಟು ನನಗೆ ಮಾತನಾಡಲು ತಾವು ಅವಕಾಶವನ್ನು ಕೊಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :- ದಯವಿಟ್ಟು ಬೇಡ. ಮೀಡಿಯಾದವರೆಲ್ಲಾ ಹೋಗುತ್ತಿದ್ದಾರೆ, ಇದು ಪ್ರೆಸ್‌ಗೆ ಹೋಗಬೇಕಾಗುತ್ತದೆ. ದಯವಿಟ್ಟು ಕುಳಿತುಕೊಳ್ಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಪ್ರೆಸ್‌ಗೆ ಹೋಗಬೇಕಾಗುತ್ತದೆ ಎಂಬ ಕಾರಣ ನೀಡಿ, ನಾವು ಮಾತನಾಡತಕ್ಕಂಥ ಅಧಿಕಾರವನ್ನು ಕಿತ್ತುಕೊಳ್ಳಲಿಕ್ಕಾಗುವುದಿಲ್ಲ.

ಉಪಾಧ್ಯಕ್ಷರು :- ಇನ್ನೂ ಅನೇಕ ಬಿಲ್‌ಗಳಿವೆ, ಆಗ ಅವಕಾಶ ಕೊಡುತ್ತೇನೆ. ಈಗ ದಯಮಾಡಿ ಕುಳಿತುಕೊಳ್ಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಕೆಲವೊಂದು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ತಾವು ನನಗೊಂದು ಅವಕಾಶವನ್ನು ಕೊಡಲೇಬೇಕು. ನಾನು ಕೇವಲ ಒಂದು ನಿಮಿಷ ಮಾತ್ರ ಮಾತನಾಡಿ ಬಿಡುತ್ತೇನೆ.

[ಗೊಂದಲ]

ಉಪಾಧ್ಯಕ್ಷರು :- ಆಯಿತು, ಒಂದೆರೆಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇವತ್ತು ವಿಶೇಷವಾಗಿ ನಮ್ಮ ರಾಜ್ಯದಲ್ಲಿ, ಸರ್ಕಾರ ಉನ್ನತ

ಶಿಕ್ಷಣದಲ್ಲಿ ಹಿಂದುಳಿದ ವರ್ಗಕ್ಕೆ 27% reservation ಕೊಡಲೇಬೇಕು ಎನ್ನತಕ್ಕಂಥ ನಿರ್ಣಯವನ್ನು ಮಂಡಿಸಿರತಕ್ಕಂಥದ್ದು ಬಹಳ ಸ್ವಾಗತಾರ್ಹವಾದುದು. ಇವತ್ತು ಸಮಾನತೆಯ ಹೆಸರಿನಲ್ಲಿ ಇದಕ್ಕೆ Supreme Court ನಲ್ಲಿ stay ಸಿಕ್ಕಿದ್ದು, ನನಗೆ ಬಹಳ ಆಶ್ಚರ್ಯವನ್ನು ತರತಕ್ಕಂಥ ಸಂಗತಿಯಾಗಿದೆ. ಇವತ್ತು equality ಯ ಹೆಸರಿನ ಮೇಲೆ, ಅಂದರೆ, there should be equal opportunities for everybody ಎನ್ನತಕ್ಕಂಥ ಒಂದು ನಮ್ಮ ವಾದ ಇದ್ದರೂ ಕೂಡ, ನಾವು ಯಾವತ್ತೂ ಇದನ್ನು ನೆನಪಿಡಬೇಕು. There cannot be any competition among un-equals. ಸ್ಪರ್ಧೆ ನಡೆಯುವಾಗ ಇವತ್ತು ಸಮಾನರ ಮಧ್ಯದಲ್ಲಿ ಸ್ಪರ್ಧೆ ಇದ್ದರೆ, ಅದಕ್ಕೆ ಯಾರದೂ ತಕರಾರು ಇರುವುದಿಲ್ಲ. Where there is a competition among un-equals, ಯಾರು ಈ ಸಮಾಜದಲ್ಲಿ ಇವತ್ತು ತುಳಿತಕ್ಕೆ ಒಳಗಾಗಿದ್ದಾರೆ, ಯಾರು ಈ ಸಮಾಜದಲ್ಲಿ ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಮೀಸಲಾತಿ ಸಿಗಲೇಬೇಕು. ಶೈಕ್ಷಣಿಕವಾಗಿ ಸಮಾನತೆಯ ಹಂಗು ಇಲ್ಲದಿರತಕ್ಕಂಥವರನ್ನು, ಇವತ್ತು ಸಮಾಜದಲ್ಲಿ ಸಬಲರ ಜೊತೆಗೆ ನೀವು ಪೈಪೋಟಿ ಮಾಡಿ ಎಂದರೆ ಅದು, it is not an equality. ಇದನ್ನು equality ಎಂದು ಹೇಳಲಿಕ್ಕಾಗುವುದಿಲ್ಲ. ಅದಕ್ಕಾಗಿಯೇ ಈ ಹಿಂದೆ ಆಗಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸಲಿಕ್ಕೆ, ಇವತ್ತು reservation ಆಗಲೇಬೇಕಾಗುತ್ತದೆ. ಈ ಸಮಾಜದಲ್ಲಿ ಸಮಾನತೆ ತರಬೇಕಾದರೆ, ನಾವು ಖಂಡಿತವಾಗಿ ಇವತ್ತು ಶೋಷಣೆಗೆ ಒಳಗಾಗಿರತಕ್ಕಂಥ ಸಂಗತಿ ಏನೆಂದರೆ, ಈಗಾಗಲೇ ಉನ್ನತ ಶಿಕ್ಷಣದಲ್ಲಿ backward classes ಗೆ reservation ಇದೆ. ಇವತ್ತು Medical Entrance ನಲ್ಲಿ backward classes ಗೆ reservation ಇದೆ. ಹೀಗಿರುವಾಗ IIT ಮತ್ತು IIM ಗಳಲ್ಲಿ ಏಕೆ ಇವತ್ತು ಈ ತಾರತಮ್ಯ ಇದೆ ಅನ್ನತಕ್ಕಂಥ ಪ್ರಶ್ನೆ ಕೇಳಬೇಕಾಗುತ್ತದೆ. ಇವತ್ತು ನಾವು IIT ಮತ್ತು IIM ಗಳಲ್ಲೂ ಕೂಡ ಇದನ್ನು ವಿಸ್ತರಣೆ ಮಾಡುತ್ತಿದ್ದೇವೆ. ನಾವು ಹೊಸದಾಗಿ reservation ಅನ್ನು ತಂದಿಲ್ಲ, ಅದನ್ನು ವಿಸ್ತರಣೆ ಮಾಡುತ್ತಿದ್ದೇವೆ. ಇದಕ್ಕೆ ಇವತ್ತು Supreme Court ನಿಂದ stay ಸಿಕ್ಕಿದೆ ಎಂದರೆ, ಇದರ ಬಗ್ಗೆ ಅವರಿಗೆ ಸಂಪೂರ್ಣವಾಗಿರತಕ್ಕಂಥ ಮಾಹಿತಿಯನ್ನು ಒದಗಿಸಲಿಕ್ಕೆ ಆಗಿಲ್ಲವೆಂದು ನನಗನಿಸುತ್ತದೆ. ವಿಶೇಷವಾಗಿ ಕೋರ್ಟ್ ಏನು ಹೇಳಿದೆ ಎಂದರೆ, ಇವತ್ತು census ನಮ್ಮ ಹತ್ತಿರ ಇಲ್ಲ. 1931ರಲ್ಲಿ census ಆದಮೇಲೆ backward classes census ಇವತ್ತು ನಮ್ಮ ದೇಶದಲ್ಲಿ

ಆಗಿಲ್ಲ. ಇದನ್ನು ಮಾಡಲಿಕ್ಕೆ 2-3 ಸಾರಿ ಪ್ರಯತ್ನ ಮಾಡಿದರೂ ಕೂಡ, ಕೇವಲ ಅವರನ್ನು ಮಾತ್ರವೇ census ಮಾಡಲಿಕ್ಕಾಗುವುದಿಲ್ಲ ಎಂದು ಹೇಳಿದ್ದರಿಂದ ಅದಾಗಲಿಲ್ಲ. ಆದ್ದರಿಂದ, ಇವತ್ತು ರಾಜ್ಯ ಸರ್ಕಾರದ ಮೇಲೆ ಬಹಳ ಭಾರ ಬಿದ್ದಿದೆ. ಈ ರಾಜ್ಯದಲ್ಲಿ ಯಾವ್ಯಾವ ವರ್ಗದ ಜನರು ಎಷ್ಟೆಷ್ಟು ಇದ್ದಾರೆ ಎಂಬ ಬಗ್ಗೆ census ಮಾಡುವುದು ಇವತ್ತು ರಾಜ್ಯ ಸರ್ಕಾರದ ಮೇಲೆ ಬೀಳುತ್ತದೆ. ಈಗಾಗಲೇ ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ಸಿದ್ದರಾಮಯ್ಯ ಮತ್ತು ಮಾನ್ಯ ಖರ್ಗೆ ಸಾಹೇಬರು ಹೇಳಿದ ಹಾಗೆ, ರಾಜ್ಯದಲ್ಲಿರುವ ಹಿಂದುಳಿದ ಆಯೋಗ ಹಿಂದುಳಿದ ವರ್ಗಗಳ ಗಣತಿ ಮಾಡಬೇಕು. ಅದಕ್ಕಾಗಿ, ಈಗಾಗಲೇ ಹಣವನ್ನು ಒದಗಿಸಲಾಗಿದೆ. ಅದಕ್ಕಾಗಿ 2004ನೇ ಬಜೆಟ್‌ನ 1 ಕೋಟಿ ಮತ್ತು ಕೇಂದ್ರ ಸರ್ಕಾರದ 20 ಕೋಟಿ ರೂ.ಗಳು ಏನು ಮೀಸಲಾಗಿಟ್ಟಿದೆಯೋ, ಅದನ್ನು ಉಪಯೋಗ ಮಾಡಿಕೊಂಡು, ಆರು ತಿಂಗಳೊಳಗಾಗಿ ಹಿಂದುಳಿದ ವರ್ಗಗಳ census ಮಾಡಬೇಕು. Census ಆಧಾರದ ಮೇಲೆ ಮೀಸಲಾತಿ ನೀಡಿದ್ದರೆ, ಅದಕ್ಕೆ ಯಾರೂ ಕೂಡ ಆಕ್ಷೇಪಣೆ ವ್ಯಕ್ತಪಡಿಸಲಿಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕಂಥದ್ದು ಇಷ್ಟೇ. ಇವತ್ತೇನು ಸರ್ಕಾರ ಈ ನಿರ್ಣಯವನ್ನು ಮಂಡನೆ ಮಾಡಿದೆ, ಅದಕ್ಕೆ ಸಂಪೂರ್ಣವಾಗಿರತಕ್ಕಂಥ ಬೆಂಬಲವನ್ನು ನಾನು ಕೊಡುತ್ತೇನೆ. ನನಗೆ ಈ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :- ಮಾನ್ಯ ಉಪಾಧ್ಯಕ್ಷರೆ,....

ಉಪಾಧ್ಯಕ್ಷರು :- ಮಾನ್ಯ ನರೇಂದ್ರಬಾಬುರವರೆ, ಇನ್ನೂ discuss ಮಾಡಲು ನಮ್ಮಲ್ಲಿ ಬೇಕಾದಷ್ಟು subjectsಗಳಿವೆ.

ಶ್ರೀ ನೆ.ಲ. ನರೇಂದ್ರಬಾಬು :- ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ, ಎರಡೇ ಎರಡು ನಿಮಿಷ ಮಾತನಾಡುತ್ತೇನೆ.

ಉಪಾಧ್ಯಕ್ಷರು :- ಆಯಿತು, ಮಾತನಾಡಿ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :- ಮಾನ್ಯ ಉಪಾಧ್ಯಕ್ಷರೆ, IIMನಲ್ಲಾಗಲಿ ಅಥವಾ IIT ಗಳಲ್ಲಾಗಲಿ ಜ್ಞಾನಾರ್ಜನೆ ಮಾಡಲಿಕ್ಕೆ ಅವಕಾಶವನ್ನು ಕೊಡುವುದಕ್ಕೆ ಇವತ್ತು ಈ ದೇಶದಲ್ಲಿ ಸ್ವಾತಂತ್ರ್ಯ ಬಂದು 57 ವರ್ಷಗಳಾದರೂ

ಸಹ ಸಾಧ್ಯವಾಗದೇ ವಂಚನೆಯಾಗುತ್ತಿರುವುದು ವಿಷಾದಕರ. ಸಂವಿಧಾನದ ಕಲಂ 15(4) ರಲ್ಲಿ ಅವಕಾಶ ಅದಕ್ಕೆ ಅವಕಾಶ ಇದ್ದರೂ ಅದರಿಂದ ವಂಚಿತರಾಗಿದ್ದಾರೆ ಎಂದು ಹೇಳಿದರೆ ನಿಜವಾಗಿಯೂ, ಈ ದೇಶದಲ್ಲಿ ನಾವು ಎಷ್ಟು ಪ್ರಗತಿಪರವಾಗಿದ್ದೇವೆ ಮತ್ತು democracy ಯಲ್ಲಿ equal opportunities ಗಳನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ಸಂಶಯ ಬರುತ್ತದೆ. ಆಗಲೇ ಮಾತನಾಡಿದಂತಹ ನಾಯಕರುಗಳೆಲ್ಲಾ ಬಹಳ ಸ್ಪಷ್ಟವಾಗಿ ಹೇಳಿದರು. ಧ್ವನಿ ಇಲ್ಲದಿರತಕ್ಕಂಥ ಮತ್ತು ಅಸಂಘಟಿತ ವಾಗಿರತಕ್ಕಂಥ ಹಿಂದುಳಿದ ವರ್ಗದ ಜನ, ಇವತ್ತು ತಮ್ಮ ಹಕ್ಕುಗಳನ್ನು ಕೇಳಲಿಕ್ಕೂ ಆಗದಿರುವಂತಹ ಸ್ಥಿತಿ ಇವತ್ತು ಬಂದಿದೆ ಎಂದರೆ, ಈ ದೇಶದಲ್ಲಿ ನಿಜವಾಗಿಯೂ ಸಮಪಾಲು, ಸಮಬಾಳ್ವೆ ಸಂವಿಧಾನಬದ್ಧವಾಗಿ ಲಭ್ಯವಾಗುತ್ತಿದೆಯೇ ಎಂಬುದು ನನ್ನ ಮೂಲಭೂತವಾದಂತಹ ಪ್ರಶ್ನೆಯಾಗಿದೆ. Supreme Court ಇವತ್ತು ಮೀಸಲಾತಿ ನೀಡುವುದಕ್ಕೆ ತಡೆಯಾಜ್ಞೆ ನೀಡಿದೆ. ವಿಶೇಷವಾಗಿ IIT & IIM ಗಳಲ್ಲಿ ತೇರ್ಗಡೆ ಹೊಂದಿದವರಿಗೆ ಈ ದೇಶದಲ್ಲಿ CEO ಹುದ್ದೆಗಳು ಮತ್ತು ಪ್ರಪಂಚದ ಬೇರೆ ಬೇರೆ ದೊಡ್ಡ ಸಂಸ್ಥೆಗಳಲ್ಲಿ ಅವಕಾಶ ಸಿಗುವುದರಿಂದ, ಅಲ್ಲಿ ಓದಲು ಅವಕಾಶ ಸಿಗದಿದ್ದರೆ ಹಿಂದುಳಿದ ವರ್ಗದವರು ಇದರಿಂದ ಮೂಲಭೂತವಾಗಿ ವಂಚಿತರಾಗುತ್ತಾರೆ ಎಂಬುದು ಇವತ್ತು ಈ ತೀರ್ಪನ್ನು ನೋಡಿದಾಗ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. 'ದೇವರು ಕೊಟ್ಟರೂ ಪೂಜಾರಿ ವರ ಕೊಡ' ಎಂಬ ಗಾದೆಯ ರೀತಿಯಲ್ಲಿ ಇವತ್ತು ಈ ತೀರ್ಪನ್ನು ಕೊಟ್ಟಿರುವುದು ದುರದೃಷ್ಟಕರ. ರಾಜ್ಯ ಸರ್ಕಾರ ಮತ್ತು ಪ್ರತಿಪಕ್ಷ ಸಂಯುಕ್ತವಾಗಿ ಸೇರಿ ಇದನ್ನು ಇವತ್ತು ಪ್ರತಿಪಾದನೆ ಮಾಡಲಿಕ್ಕಾಗಿ ಈ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥದ್ದು ಸ್ವಾಗತಾರ್ಹ. ಇಡೀ ಕರ್ನಾಟಕದ ಜನತೆಯ ಧ್ವನಿಯನ್ನು ಈ ಶಾಸನಸಭೆ ಇವತ್ತು ಎತ್ತಿ ಹಿಡಿಯುವುದರ ಮುಖಾಂತರ, ಈ ರಾಷ್ಟ್ರದಲ್ಲಿ ಎಲ್ಲರೂ ಕೂಡ ಸಮಾನವಾಗಿ ಬಾಳಲಿಕ್ಕೆ ಅವಕಾಶ ಇದೆ ಎನ್ನುವುದನ್ನು ಪುಷ್ಟೀಕರಿಸಬೇಕು. ಕೇಂದ್ರ ಶಿಕ್ಷಣ ಸಂಸ್ಥೆಗಳಲ್ಲಿ ಈ ಪ್ರಸಕ್ತ ಸಾಲಿನಲ್ಲಿ 17,760 ಕೋಟಿ ರೂ.ಗಳನ್ನು ಈ ಒಂದು ವಿದ್ಯಾಭ್ಯಾಸಕ್ಕಾಗಿ ಇಡಲಾಗಿದೆ. ಅಂತಹ ಸಂಸ್ಥೆಗಳಲ್ಲಿ ಓದಲು ಹಿಂದುಳಿದ ವರ್ಗಕ್ಕೆ ಅವಕಾಶ ಸಿಗಲಿಲ್ಲವೆಂದರೆ ದುರದೃಷ್ಟಕರ. Unless we care and share the knowledge, ಇವತ್ತು equal ಅವಕಾಶ ಇರತಕ್ಕಂಥ ಈ ವ್ಯವಸ್ಥೆಯ ಸಮಪಾಲನ್ನು ಕೊಡತಕ್ಕಂಥ ವಿಶಾಲ ಹೃದಯವನ್ನು ನಾವು ಬೆಳೆಸಿಕೊಳ್ಳದೇ ಹೋದರೆ, ಸರ್ಕಾರ ಅಥವಾ ನ್ಯಾಯಾಲಯಗಳು ಆ ದಿಕ್ಕಿನಲ್ಲಿ ತೀರ್ಪು ಕೊಡದೇ ಹೋದರೆ,

ಖಂಡಿತವಾಗಿಯೂ ಅದು ಮುಂದಿನ ದಿನಗಳಲ್ಲಿ ಮತ್ತೊಂದು ಸಂಘರ್ಷಕ್ಕೆ ಎಡೆಕೊಡುತ್ತದೆ, ಅದಕ್ಕೆ ಅವಕಾಶ ಕೊಡುವುದು ಬೇಡ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅವಕಾಶ ವಂಚಿತರಿಗೆ ಈ ಒಂದು ನಿರ್ಣಯ ನಿಜವಾಗಿಯೂ ಒಂದು ರೀತಿಯಾಗಿ ನೈತಿಕ ಬೆಂಬಲ ಕೊಟ್ಟ ಹಾಗೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

<u>4–30 ಗಂಟೆ</u>

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಹಿಂದುಳಿದ ಜನಾಂಗವೆನ್ನುವುದನ್ನೇ ಪ್ರತ್ಯೇಕವಾಗಿ ಯೋಚನೆ ಮಾಡಿ ಅವಕಾಶದಿಂದ ವಂಚಿತರಾಗಿರುವ ಜನಸಮೂಹಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂಬುದಕ್ಕೆ ಬಹಳ ದೊಡ್ಡ ಹೋರಾಟ ಹಿಂದಿನಿಂದಲೂ ನಡೆದು ಬಂದಿರುವುದನ್ನು ನಾವು ಕಂಡಿದ್ದೇವೆ. ತತ್‌ಕ್ಷಣದಲ್ಲಿ ನಾವು ಎಲ್ಲಾ ಹಿಂದುಳಿದ ಜನಾಂಗಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆನ್ನುವುದರಲ್ಲಿ ನಾವು ಪ್ರಗತಿಪರವಾಗಿ ಯೋಚನೆ ಮಾಡಲೇಬೇಕಾಗುತ್ತದೆ. ಎರಡು ಹೆಜ್ಜೆ ಮುಂದೆ ಹೋಗಿ ಒಂದು ಹೆಜ್ಜೆ ಹಿಂದಕ್ಕೆ ಸರಿಯಬೇಕು ಎನ್ನುವ ಸಾಮಾಜಿಕ ಪರಿವರ್ತನೆಗಳ ಹಿನ್ನೆಲೆಯಲ್ಲಿ, ಈ ವಿಚಾರದಲ್ಲಿ ಅನೇಕ ಮಹನೀಯರು ಹೋರಾಟ ಮಾಡಿದ್ದಾರೆ. ಅದರಲ್ಲಿ ಡಾ|| ಲೋಹಿಯಾರವರು ಬಹಳ ಮುಖ್ಯವಾದ ಒಂದು ವಿಷಯವನ್ನು ಪ್ರಸ್ತಾಪಿಸುತ್ತಾರೆ. ಒಂದು ಸಮುದಾಯ ದೈಹಿಕವಾಗಿಯೂ, ಮಾನಸಿಕವಾಗಿಯೂ ಅಸಮರ್ಥವೆಂದು ಇತರರಿಂದ ತುಳಿಯಲ್ಪಟ್ಟಾಗ ಅವರನ್ನು ಸಮಾನತೆಯ ಮಟ್ಟಕ್ಕೆ ತರುವುದಕ್ಕೆ ಇರುವುದು ಒಂದೇ ಒಂದು ಮಾರ್ಗ, ಅವರಿಗಾಗಿ ವಿಶೇಷ ಸವಲತ್ತುಗಳನ್ನು, ಅವಕಾಶಗಳನ್ನು ನಿರ್ಮಾಣ ಮಾಡಿಕೊಡುವುದು. ಯಾವುದಾದರೂ "ಒಂದು ಮಾರ್ಗ", "class of citizens" ಎನ್ನುವ ಪದವನ್ನು ಬಳಸುತ್ತೇವೆ. ಕಮ್ಯುನಿಟಿ ಎನ್ನುತ್ತೇವೆ, ಕ್ಯಾಸ್ಟ್ ಎನ್ನುತ್ತೇವೆ, class of citizens ಎಂದು ನಾವು ಈ ಶಬ್ದಗಳನ್ನು ಬಳಸುತ್ತೇವೆ. ಯಾವುದಾದರೂ ಒಂದು ಸಮುದಾಯ ದೈಹಿಕವಾಗಿಯೂ, ಮಾನಸಿಕವಾಗಿಯೂ ಅಸಮರ್ಥರೆಂದು ಇತರರಿಂದ ತುಳಿಯಲ್ಪಟ್ಟಾಗ ಅವರನ್ನು ಸಮಾನತೆಯ ಮಟ್ಟಕ್ಕೆ ತರುವುದಕ್ಕೆ ಇರುವುದು ಒಂದೇ ಒಂದು ಮಾರ್ಗ, ಅವರಿಗಾಗಿ ವಿಶೇಷ ಸವಲತ್ತುಗಳನ್ನು, ಅವಕಾಶಗಳನ್ನು ನಿರ್ಮಾಣ ಮಾಡಿಕೊಡುವುದು. ಆದರೆ, ಇದನ್ನು ಎಲ್ಲರೂ ಒಪ್ಪುತ್ತೇವೆ. ಆದರೆ ಇವೆಲ್ಲವನ್ನು ಜಾರಿಗೊಳಿಸುವುದಕ್ಕೆ,

ಮಾನಸಿಕವಾಗಿ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗುವುದಿಲ್ಲ. ಅದಕ್ಕೆ ಆಂತರಿಕವಾಗಿರುವ ತೊಂದರೆ ಏನು? ಇಲ್ಲಿಯವರೆವಿಗೆ ನಡೆದುಕೊಂಡು ಬಂದಿರುವ ನಮ್ಮ ಚರಿತ್ರೆ, ಹಿನ್ನೆಲೆ ಮತ್ತು ಪರಂಪರೆಗಳನ್ನು ಕಂಡುಕೊಂಡಾಗ, ಯಾವ ತರಹದ ಮೋಸವಾಗುತ್ತದೆಂದರೆ, ಭಾರತೀಯ ಜೀವನದ ಅತ್ಯಂತ ಪ್ರಮುಖ ಅಂಶವೆಂದರೆ, ಜಾತಿ ಪದ್ಧತಿ. ಇದನ್ನು ಸೈದ್ಧಾಂತಿಕವಾಗಿ ತಿರಸ್ಕರಿಸುವವರು ಕೂಡ ನಡವಳಿಕೆಯಲ್ಲಿ, ಆಚಾರ, ವ್ಯವಹಾರಗಳಲ್ಲಿ ಅದನ್ನು ಅನುಸರಿಸುತ್ತಾರೆ. ಅವರ ಜೀವನವು ಜಾತಿಯ ಸರಹದ್ದಿನೊಳಗೆ ಚಲಿಸುತ್ತಾ ಅದನ್ನು ತಿರಸ್ಕರಿಸುವುದು ಎಂದು, ಅವರಿಗೆ ಕರ್ತವ್ಯವಾದ ಪ್ರಶ್ನೆ ಆಗುವುದೇ ಇಲ್ಲ. ನಾವು ಅದರ ನಡವಳಿಕೆಗಳನ್ನೇನಾದರೂ ಅವರ ಗಮನಕ್ಕೆ ತಂದು ಅದು ಹೇಗೆ ಜಾತಿ ಪದ್ಧತಿಗೆ ಪೂರಕವಾಗಿದೆ ಎಂದು ತೋರಿಸಿದರೆ ಅವರು ಅತ್ಯಂತ ಕೋಪದಿಂದ ತಮ್ಮ ಆಲೋಚನೆಗಳನ್ನು, ಭಾಷಣಗಳನ್ನು ಗಮನಿಸುವಂತೆ ತಿಳಿಸುತ್ತಾರೆ. ಈ ಅಸ್ಪೃಶ್ಯತೆಯನ್ನು ಈ ದೇಶದಲ್ಲಿ ತೊಡೆದು ಹಾಕಬೇಕೆಂದು ಹೇಳಿ ಹೇಗೆ ನಾವು ಶತಶತಮಾನಗಳಿಂದ ಮಾತನಾಡುತ್ತಾ ಬಂದಿದ್ದೆವು, ಹಾಗೆ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಡಿ, ಹಿಂದುಳಿದ ಜನಾಂಗಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ. ಇಂತಹ ಮಾತುಗಳನ್ನು ಬಹಳ ಸುಂಧರವಾಗಿ ಹೇಳುತ್ತಲೇ ಹೋಗಬಹುದು. ಆದರೆ ನಮ್ಮ ವೈಯಕ್ತಿಕ ನಡವಳಿಕೆಗಳಲ್ಲಿ, ನಮ್ಮ ಆಚಾರ ವಿಚಾರ, ವ್ಯವಹಾರಗಳಲ್ಲಿ ಅದು ಜಾತಿ ಪದ್ಧತಿ ವ್ಯವಸ್ಥೆಗೆ ಅನುಕೂಲವಾಗುವ ಪ್ರಚೋದನೆ ಕೊಡುವ ರೀತಿಯಲ್ಲಿಯೇ ಇರುತ್ತದೆ ಎನ್ನುವುದು. ಆ ಕಾರಣಕ್ಕಾಗಿ ಅವರು ಮತ್ತೊಂದು ಮಾತನ್ನು ಹೇಳುತ್ತಾರೆ, "ಕೆಲವರನ್ನು ಕೋಪವಿಷ್ಟರನ್ನಾಗಿ ಮಾಡದೆ ಏನನ್ನು ಸಾಧಿಸಲಾಗದು. ನಮ್ಮ ಜನಪ್ರಿಯತೆಯನ್ನು ಪಣವಾಗಿ ಒಡ್ಡಿ ಇಂತಹವರೊಡನೆ ಸೆಣಸಬೇಕು." ಇವತ್ತು ನಮ್ಮ ಮುಂದಿರುವ ಪ್ರಶ್ನೆ, ನಮ್ಮ ಭಾಷಣವನ್ನು ನೋಡಿ, ನಾವು ಮಾತನಾಡಿದ್ದನ್ನು ನೋಡಿ, ನಮ್ಮ ಬರವಣಿಗೆಯನ್ನು ನೋಡಿ, ನಾವು ಎಷ್ಟು ಪ್ರಗತಿಪರವಾಗಿ ಯೋಚನೆ ಮಾಡಿದ್ದೇವೆಂದು ಹೇಳುತ್ತಾರೆ, ಆದರೆ ವಾಸ್ತವವಾಗಿ, ನೈಜವಾಗಿ ಅದು ನೆಲದ ನೈಜತೆಯನ್ನು ತಿಳಿಯಲಾರದಂತಹ ಗಾಂಧಾರಿಯ ಕಣ್ಣುಪಟ್ಟಿಯಾಗಿರುತ್ತದೆ. ಕಣ್ಣು ಪಟ್ಟಿಯನ್ನು ಕಟ್ಟಿಕೊಂಡು ಧೃತರಾಷ್ಟ್ರನಂತೆ, ಅವರು ಹುಟ್ಟು ಕುರುಡರಾಗಿದ್ದಾರೆ, ಇವರು, ನಾನು ಕಣ್ಣಿಗೆ ಪಟ್ಟಿಯನ್ನು ಕಟ್ಟಿಕೊಂಡಿದ್ದೇನೆ, ಎಲ್ಲವನ್ನೂ ನಾನು ನಿಷ್ಪಕ್ಷಪಾತವಾಗಿ ನೋಡುವಂತಹ ಕುರುಡ ನಾನಾಗಿದ್ದೇನೆ ಎಂದು ಹೇಳಿದರೂ ಕೂಡ, ಆ ವ್ಯಾಮೋಹದಿಂದ, ತನ್ನ ಮಕ್ಕಳ ವ್ಯಾಮೋಹದ ಮೂಲಕ ಅವರು ಗಾಂಧಾರಿಯ ಕಣ್ಣು ಪಟ್ಟಿಯನ್ನು

ಕಟ್ಟಿಕೊಂಡಿದ್ದೇವೆ. ಅದರಿಂದ ಅವರು ಕೋಪವಿಷ್ಟರಾಗುತ್ತಾರೆ, ಅದು ನನ್ನನ್ನು ಮೊದಲು ಮಾಡಿಕೊಂಡು, ನನ್ನ ಜಾತಿ ವರ್ಗದಿಂದ ಬಂದಂತಹ ನನ್ನ ತಿಳುವಳಿಕೆ ಮತ್ತು ನನ್ನ ಅಂಶಗಳು ಕೂಡ, ಎಲ್ಲೋ ಆಳದಲ್ಲಿ ನಾವು ಈ ಮಾತನ್ನು ನಾವು ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಕೆಲವು ಕೋಪವಿಷ್ಟರನ್ನಾಗಿ ಮಾಡದೇ, ಏನನ್ನೂ ಸಾಧಿಸಲಾಗದು. ಎಲ್ಲರನ್ನೂ ನಾವು ಪ್ರೀತಿಸುತ್ತೇವೆ, ಎಲ್ಲರಿಂದ ಮೆಚ್ಚುಗೆಯನ್ನು ಪಡೆಯುತ್ತೇವೆ, ಎಲ್ಲರಿಂದ ಶಹಭಾಷ್‌ಗಿರಿಯನ್ನು ಪಡೆಯುತ್ತೇವೆನ್ನುವ ಸಮನ್ವಯ ಸಿದ್ಧಾಂತ ಮಾತುಗಳನ್ನು ನಾವು ಮಾತನಾಡಿ ನಮ್ಮ ಜನಪ್ರಿಯತೆಯನ್ನು ಪಣವಾಗಿ ಒಡ್ಡದಿರುವುದೇನಿದೆ, ಈ ಬಗ್ಗೆ ಮೂಲಭೂತವಾಗಿ ವಿಚಾರದ ಬಗ್ಗೆ ಕಾಲಕಾಲಕ್ಕೆ ಬರೆದಿರುವ ಕಾಕಾ ಕಾಲೇಲ್ಕರ್‌ರವರು ಕೂಡ ತಮ್ಮ ವರದಿಯಲ್ಲಿ ಬಹಳ ಒಳ್ಳೆಯ ಮಾತನ್ನು ಹೇಳುತ್ತಾರೆ. ಎಂತಹ ಮಾತನ್ನು ಹೇಳುತ್ತಾರೆಂದರೆ, ಕಾಕಾ ಕಾಲೇಲ್ಕರ್ ರವರು ಈ ವಿಷಯದಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಕಾಕಾ ಕಾಲೇಲ್ಕರ್‌ರವರು ರಿಪೋರ್ಟ್ ಕೊಟ್ಟು ಅವರೇ ಡಿಸೆಂಟಿಂಗ್ ನೋಟ್ ಕೊಟ್ಟರೆಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಡಿಸೆಂಟಿಂಗ್ ನೋಟು ಕೊಡುತ್ತಾರೆ, ಇಲ್ಲೇನು ಲೋಹಿಯಾರವರು ಪ್ರಸ್ತಾಪ ಮಾಡುತ್ತಾರೆ? ವರದಿಗಳನ್ನು ಕೊನೆಗೆ ಬರೆಯಿಸುವಾಗ ನಾವು ಆಡಳಿತ ಪಕ್ಷದವರು ಹೇಗೆ ಹೇಗೆ ಮಾಡಿಸುತ್ತೇವೆಂಬುದು ನಮಗೂ ನಿಮಗೂ ಚೆನ್ನಾಗಿ ಗೊತ್ತಿರುತ್ತದೆ. ಕೆಲವರನ್ನು ಆ ರೀತಿಯಾಗಿ ಪರಿವರ್ತನೆಗೊಳಿಸಿ, ಅವರು ಬಹಳ ಡಿಸೆಂಟಿಂಗ್ ನೋಟ್ ಅನ್ನು ಕೊಟ್ಟರು, ಅದಕ್ಕಾಗಿಯೇ ಅದನ್ನು ಸರ್ಕಾರ ಜಾರಿಗೊಳಿಸುವುದಕ್ಕೂ ಕೂಡ ಆಗಲಿಲ್ಲ, ಅದು ನಿಜ. ಆ ಕಾರಣಕ್ಕಾಗಿ ಲೋಹಿಯರವರು ಹೇಳಿದ ಮಾತನ್ನೆ ತಮ್ಮ ವರದಿಯಲ್ಲಿ ಪ್ರಸ್ತಾಪ ಮಾಡುತ್ತಾರೆ;

"The religious caste complex has become so deep rooted that it is not easy for any caste group to get away from its strong grip. Even the most intellectual including those who declare themselves to be enemies of the caste are not often entirely free and consciously or unconsciously they act in a manner which gives a fresh lease of life to the caste system. These are all the manifestations.

Whethere it is the judgements or whether it is G.O.s or whether our utterances or the manifestations that the deep rooted caste system have taken us into the grip. Both by the force or inherited habit and the training imparted to an individual, he feels a deep loyalty to the caste group. That loyalty is so deep that he is generally unable to shake it up even when he is intellectually convinced that it is painful. The social differences of caste has become so firm in the mind of a Hindu that he regards them as natural. The two important elements in the Hindu caste system are endogamy and hierarchy. The desire to keep themselves pure is responsible for the rigid observance of endogamy. The feeling in inferiority has resulted in the Caste hierarchy."

ಅದನ್ನು ಅವರೇ ಹೇಳಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಅದನ್ನು ಬೇರೆ ಬೇರೆ ಸಂದರ್ಭದಲ್ಲಿಯೂ ಕೂಡ ತಮ್ಮ ತೀರ್ಪಿನಲ್ಲೂ ಹೇಳುತ್ತಾರೆ, specially Trilkinath Vs. State of Jammu & Kashmir, A.I.R. 1967 ಸುಪ್ರೀಂ ಕೋರ್ಟ್‌ನ ವಿಚಾರದಲ್ಲಿ ಈ ವಿಷಯವನ್ನು ಮಾಡುವ ಸಂದರ್ಭದಲ್ಲಿ ಹೇಳುತ್ತಾರೆ: "Caste is nothing if it is not endogamy". ಆದುದರಿಂದ, ಈ ಜಾತಿ ಪದ್ಧತಿ ಎನ್ನುವುದು ಚಲನಶೀಲತೆಯನ್ನು ಕಳೆದುಕೊಳ್ಳುತ್ತದೆ. ಭಾರತದಲ್ಲಿರುವ ಮತ್ತೊಂದು ವಿಚಿತ್ರವಾದ ಸನ್ನಿವೇಶವೆಂದರೆ, ವರ್ಗ ಮತ್ತು ಜಾತಿ ಇವೆರಡು ಕುರಿತಾಗಿಯೂ ಕೂಡ ಮಾರ್ಕ್ಸ್ ತಪ್ಪುದಾರಿಗೆ ಹೋದ. ಅವರು 1857 ಆಜುಬಾಜಿನಲ್ಲಿ ಬಂದಂತಹ ಪ್ರಣಾಳಿಕೆ ಏನಿದೆ, ಅದರಲ್ಲಿ ಮಾತನಾಡುವಾಗ, ಆತ ಭಾರತ ದೇಶದ ವರ್ಗದ ಬಗ್ಗೆಯೇ ಹೆಚ್ಚು ಗಮನವನ್ನು ಕೊಟ್ಟ, ಜಾತಿ ವ್ಯವಸ್ಥೆಯ ಬಗ್ಗೆ ಹೆಚ್ಚು ಗಮನವನ್ನು ಕೊಡಲಿಲ್ಲ. ಆದರೆ ಯಾವತ್ತು ವರ್ಗ ಚಲನಶೀಲತೆಯನ್ನು ಕಳೆದುಕೊಳ್ಳುತ್ತದೆ, ಚಲನಶೀಲತೆಯನ್ನು ಕಳೆದುಕೊಂಡ ತಕ್ಷಣವೇ ಅದು ಜಾತಿಯಾಗಿ ಪರಿವರ್ತನೆಯಾಗುತ್ತದೆ. ಯಾವ ಜಾತಿ ಚಲನಶೀಲತೆಯನ್ನು ಪಡೆದುಕೊಳ್ಳುತ್ತದೆ, ಅದು ವರ್ಗವಾಗಿ ಪರಿವರ್ತನೆಯಾಗುತ್ತದೆ.

ತುಳಿತಕ್ಕೊಳಗಾದಂತಹ ಜಾತಿಯ ಹಿಂದುಳಿದ ಜನಾಂಗದವರು ಅಥವಾ ಮತ್ತೊಂದು ವರ್ಗಕ್ಕೋ ನಾವು ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟ ತಕ್ಷಣವೇ ಅವರು ವಿದ್ಯಾವಂತರಾಗಿ ಶ್ರೀಮಂತರಾಗಿ, ಅಧಿಕಾರಸ್ಥರಾಗಿ, ಅವರು ಆ ಒಂದು ಮೇಲ್ಜಾತಿಯ ವರ್ಗಕ್ಕೆ ಸೇರಿಕೊಂಡುಬಿಡುತ್ತಾರೆ. ಆ ವರ್ಗಕ್ಕೆ ಸೇರಿಕೊಳ್ಳುವುದರಿಂದ ಜಾತಿ ಚಲನಶೀಲತೆಯನ್ನು ಪಡೆದ ತಕ್ಷಣವೇ ವರ್ಗವಾಗಿ ಹೋಗುತ್ತದೆ. ಯಾವುದೊಂದು ವರ್ಗ ತನ್ನ ದುಡಿಮೆ ಅಥವಾ ಆರ್ಥಿಕ ಸಬಲತೆಯಿಂದ ಹಿಂದುಳಿಯುತ್ತದೆ, ಆ ವರ್ಗ ಜಾತಿಯಾಗಿ ಪರಿವರ್ತನೆಗೊಳ್ಳುತ್ತದೆ. ಆದುದರಿಂದ ಚಲನಶೀಲತೆಯನ್ನು ತಂದುಕೊಡಲಾರದಂತಹ ಒಂದು ಸಾಮಾಜಿಕ ವ್ಯವಸ್ಥೆ ಇಂತಹ ಕೃತಿಗಳನ್ನು ಅನೇಕ ಸಂದರ್ಭಗಳಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆ. ಈಗ ಆಗಿರುವುದೇನು ರಾಜಿ ವ್ಯವಸ್ಥೆ. ರಾಜಿ ವ್ಯವಸ್ಥೆ ಯಾವುದು? ಆಯಿತು, ನಿಮಗೇನು ತೊಂದರೆಯಾಗಿದೆಯಲ್ಲಪ್ಪ, ತೊಂದರೆಯಾದಂತಹವರಿಗೆ ನಾವು ಅವಕಾಶವನ್ನು ಕಲ್ಪಿಸಿಕೊಟ್ಟು ಸೀಟು ಹೆಚ್ಚು ಮಾಡಿಬಿಡುತ್ತೇವೆ, ನಿಮ್ಮ ಫೀಸ್ ಕಡಿಮೆ ಮಾಡಿಬಿಡುತ್ತೇವೆ, ಅದಕ್ಕಾಗಿ ನಾವು ಈ ಸಾರಿ ಸುಮಾರು 1700 ಕೋಟಿಗಿಂತ ಹೆಚ್ಚು ಹಣವನ್ನು ನಮ್ಮ ಆಯವ್ಯಯದಲ್ಲಿ ಕೊಟ್ಟುಬಿಡುತ್ತೇವೆ ಎಂದಾಗ, ನಿಜವಾಗಿ ಕೇಂದ್ರ ಸರ್ಕಾರ ಎಷ್ಟು ತಪ್ಪು ದಾರಿಗೆ ಹೋಗುತ್ತದೆ, ಮತ್ತೆ ಆ ವರದಿಯಲ್ಲಿ ಬರುವುದು ಕೂಡ ಸರಿಯಾದಂತಹ ಉತ್ತರವಲ್ಲ. ಅವರು ಪ್ರಸ್ತಾಪ ಮಾಡಿದಂತೆ, ಒಟ್ಟು ಅವಕಾಶಗಳಲ್ಲಿ ಅವರಿಗೆ ಸಲ್ಲಬೇಕಾದ 27% ಸೇರಬೇಕು. ನೀವು ಹೆಚ್ಚು ಸೀಟನ್ನು ಮಾಡಿದರೆ, ಆ ಹೆಚ್ಚು ಸೀಟಿನಲ್ಲಿ 27% ಬರಬೇಕೇ ವಿನಹ, ಅದರಲ್ಲಿ ನಿಮಗೆ ಹೆಚ್ಚು ಮಾಡಿಕೊಡುತ್ತೇವೆಂದರೆ, ನಾಳೆ ನಮ್ಮ ಕ್ಷೇತ್ರದ ಪುನರ್ವಿಂಗಡಣೆಯಾಗುತ್ತದೆ. ಕ್ಷೇತ್ರದ ಪುನರ್ವಿಂಗಡಣೆಯಲ್ಲಿ 14 ಸ್ಥಾನಗಳಲ್ಲಿ ಹೆಚ್ಚಾಗಿ ನಾವು ಪರಿಶಿಷ್ಟ ಪಂಗಡಕ್ಕೆ ಕೊಟ್ಟಿದ್ದೇವೆ, 36 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ ಕೊಟ್ಟಿದ್ದೇವೆ. ಆದುದರಿಂದ ಹಾಗೆ ಆಗುವುದಾದರೆ ಜನರಲ್ ಸೀಟ್‌ನಲ್ಲಿ ಕಡಿಮೆಯಾಗುವುದರಿಂದ 14 ಸೀಟುಗಳನ್ನು ಹೆಚ್ಚು ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ನೀವು 14 ಸೀಟುಗಳನ್ನು ಹೆಚ್ಚು ಮಾಡಿ, 224ಕ್ಕಿಂತ 14ನ್ನು ಹೆಚ್ಚು ಮಾಡಿ, ನಮಗೆ ಅವಕಾಶ ಕೊಡಿ ಎಂದು ಕೇಳಿಕೊಂಡರೆ, ಅದು ಅವಾಸ್ತವವಾಗುತ್ತದೋ, ಅದೇ ರೀತಿ ಇಲ್ಲಿ ಕೂಡ ಅವಾಸ್ತವವಾಗಿ ಮಾತನಾಡಿ, ನಾನು ರಾಜಕೀಯ ತಂದಿದ್ದೇನೆ ಎಂದು ಅಂದುಕೊಳ್ಳಬೇಡಿ, ನಿಜವಾಗಿಯೂ ನಾವೂ ಅಲ್ಲಿದ್ದರೆ, ನಾವೆಲ್ಲರೂ ಆ ಆಳದಲ್ಲಿ ಎಲ್ಲೋ ಒಂದು ಜಾತಿಯ ಸೋಂಕನ್ನು ಇಟ್ಟುಕೊಂಡಿದ್ದೇವೆ. ಆ ಜಾತಿಯ

ಸೋಂಕನ್ನು ಇಟ್ಟುಕೊಂಡಿರುವಾಗ willing to strike, but afraid to wound. ಖಡ್ಗ ಝಳಪಿಸುತ್ತೇವೆ, ಆದರೆ ಗಾಯ ಮಾಡುವುದಕ್ಕೆ ತಯಾರಿಲ್ಲ. ಆ ರೀತಿಯಾಗಿ ಇವರು ಅವಕಾಶ ಕಲ್ಪಿಸಿಕೊಡುತ್ತಾರೆ. ಸೀಟು ಹೆಚ್ಚು ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಇದು ನಿಜವಾಗಿಯೂ ಕಾಲಘಟ್ಟದಲ್ಲಿ ನಾನು ಇದನ್ನು ಟೀಕೆ ಮಾಡುತ್ತೇವೆ ಎನ್ನುವುದಕ್ಕಿಂತ ಹೆಚ್ಚಾಗಿ, ಈ ಬದಲಾವಣೆಗಳನ್ನು ತರುವಂತಹ ಸಂದರ್ಭದಲ್ಲಿ.....

ಶ್ರೀ ಡಿ.ಆರ್. ಪಾಟೀಲ್ :– 27% reservation intake ಜಾಸ್ತಿಯಾದರೂ ಅದರಲ್ಲಿ 27% reservation provide ಮಾಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ :– That is what precisely Mr. Mallikarjuna Kharge has said. ಆದರೆ,

SRI D.R. PATIL:- 27% of the total intake is provided.

ಶ್ರೀ ಎಂ.ಪಿ. ಪ್ರಕಾಶ್ :– 27% of the total intake ಆದರೆ we welcome it. I don't think so. I have not seen that recommendation.

SRI D.R. PATIL :- No. No. 27% of total intake.

ಡಾ॥ ಹೆಚ್.ಸಿ. ಮಹಾದೇವಪ್ಪ :– ಕೇಂದ್ರ ಸರ್ಕಾರದವರು ಮಾಡಿರುವುದು Enhancement ಗೂ 27% included ಇದೆ.

ಶ್ರೀ ಎಂ.ಪಿ. ಪ್ರಕಾಶ್ :– I stand to correction. If it is 27% of the total intake, then I have no objection for this. ಏಕೆಂದರೆ, ಮಾನ್ಯ ಖರ್ಗೆಯವರು ಹೇಳಿದ ಮಾತು ನನಗೂ ಹಿಡಿಸುತ್ತದೆ. ಬೀಸುವ ದೊಣ್ಣೆ ತಪ್ಪಿಸುವ ಕೆಲಸ ಇದು. ಯಾವ ಕಾರಣಕ್ಕಾಗಿ ಈ ಆಜ್ಞೆ ಬಂದಿತು ಎಂದು ನಮಗೆ ಗೊತ್ತಿದೆ. ಎಂದೂ ಇಲ್ಲದ ಮೋಹ ಯಾವ ಸಂದರ್ಭದಲ್ಲಿ ಬಂದಿತು ಎಂದು ನನಗೆ ಗೊತ್ತಿದೆ. ಆದರೆ ಇಲ್ಲಿ ಅಪಸ್ವರ ಎತ್ತಬಾರದು ಎಂದು ನಿರ್ಣಯ ಬಂದಿರುವುದರಿಂದ ನಾವು ಅಪಸ್ವರ ಎತ್ತುವುದಕ್ಕೆ ತಯಾರಿಲ್ಲ. ಇದು ಬಹಳ ಮುಖ್ಯವಾದ ವಿಷಯವೆಂದು ಹೇಳಿ, ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಹಿಂದೆ ಕೂಡ ನಾವು ಈ ರೀತಿಯಾಗಿ 15.4 ಮತ್ತು 16.4ರ ವಿಚಾರದಲ್ಲಿ 1995–96ರ ಸಾಲಿನಲ್ಲಿ ಮಾಡಿದಾಗ

Category I, Category IIA, Category IIB, Category IIIA, Category IIIB, Scheduled Castes and Scheduled Tribes ಇದಕ್ಕೆಲ್ಲಾ ಪರ್ಸೆಂಟೇಜ್‌ನ್ನು ನಿರ್ಣಯ ಮಾಡಿದಾಗ ಕೆಟಗರಿ 2(ಎ)ಗೆ 15% ಮಾಡಿದ್ದೇವೆ. ಮುಸ್ಲಿಂ ಮೊದಲಾದ ಜನಾಂಗಕ್ಕೆ 4% ಮಾಡಿದ್ದೇವೆ. ಒಂದು ಸಂತೋಷದ ಸಂಗತಿ ಎಂದರೆ, ಅವತ್ತು ನಾನು ಈ ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷನಾಗಿದ್ದೆ. ಮಾನ್ಯ ಜಾಲಪ್ಪನವರು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಎಲ್ಲರೂ ಸದಸ್ಯರಾಗಿದ್ದಾರೆ. ಅದನ್ನು ಒಪ್ಪಿಕೊಂಡು ಇವತ್ತಿನವರೆಗೂ ಕೂಡ it stands to the test of the time and it stood the scrutiny of the judiciary. ಆದ್ದರಿಂದ ನಾವು ಇಂತಹ ವಿಚಾರಗಳಲ್ಲಿ ಸದನದಲ್ಲಿರತಕ್ಕಂತಹ ಎಲ್ಲ ಹಿರಿಯರೂ ಕೂಡ ಇದು ನಿಜವಾಗಿಯೂ ಒಳ್ಳೆಯ ಕೆಲಸವಾಗಿದೆ, ಆದ್ದರಿಂದ ಇದನ್ನು ನಾವು ಒಪ್ಪಲೇಬೇಕೆಂದು ಎನ್ನತಕ್ಕಂತಹ ಮಾತನ್ನು ಹೇಳುವಾಗ ತಾತ್ವಿಕ ಹಿನ್ನೆಲೆಯಲ್ಲಿ ಇಡೀ ಭಾರತವು ಎಲ್ಲೋ ಒಂದೊಂದು ತಾವರೆ ಹೊರ ಹೊಮ್ಮಿರುವ ಒಂದು ದೊಡ್ಡ ಕೊಳಚೆ ಕೊಳ. ಕಾರ್ಯಸೌಧಗಳು, ವಿಮಾನ ನಿಲ್ದಾಣಗಳು, ಹೋಟೆಲ್‌ಗಳು, ಸಿನಿಮಾ ಮಂದಿರಗಳು ಮತ್ತು ಅರಮನೆಗಳು, ಅತ್ಯಾಧುನಿಕ ಶೈಲಿಯಲ್ಲಿ ಕೆಲವು ಜಾಗಗಳು ನಿರ್ಮಿಸಲ್ಪಟ್ಟಿವೆ. ಅದಕ್ಕನುಗುಣವಾಗಿ ಸಿಂಗರಿಸಿಕೊಂಡ ಗಂಡಸರು ಮತ್ತು ಹೆಂಗಸರು ಅವುಗಳನ್ನು ಉಪಯೋಗಿಸುತ್ತಾರೆ. ಆದರೆ, ಇವೆಲ್ಲಾ ಒಟ್ಟು ಜನಸಂಖ್ಯೆಯ ಸಾವಿರದ ಒಂದು ಭಾಗಕ್ಕೆ ಸಂಬಂಧಿಸಿದವು ಮಾತ್ರ. ಉಳಿದವರೆಲ್ಲಾ ದರಿದ್ರರು. ಕಳೆ ಗುಂದಿದವರು, ದುಃಖಿಗಳು ಮತ್ತು ಹಸಿದವರು. ಇವರ ಬಗ್ಗೆ ನಾವು ಯೋಚನೆ ಮಾಡಬೇಕಾದಾಗ ಈ ಮೀಸಲಾತಿಯನ್ನು ನಾವು ತಂದುಕೊಡಲೇಬೇಕು. ಇಲ್ಲಿ ಪ್ರಶ್ನೆ ಬಂದಿರುವುದು IIM ಮತ್ತು IIT ಯಲ್ಲಿ ಆಗಿರತಕ್ಕಂಥದ್ದು ನಿಜವಾಗಿಯೂ ಮೆರಿಟ್ ವಿಚಾರದಲ್ಲಿ ಮತ್ತು ಪ್ರತಿಭೆ ವಿಚಾರದಲ್ಲಿ ಬೇಕಾದಷ್ಟು ವಾದಗಳನ್ನು ಮಾಡಬೇಕಾಗಿದೆ. ಅದು ಸಂಪೂರ್ಣ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಇಲ್ಲಿ ಯಾರಾದರೂ ಅದರಿಂದ ಪದವೀಧರರಾಗಿ ಹೊರ ಬಂದರೆ, ಅವರಿಗೆ ತಿಂಗಳಿಗೆ ಕನಿಷ್ಟ ಒಂದು ಲಕ್ಷ ರೂಪಾಯಿಗಳ ಸಂಬಳ ನಿರ್ಧಾರವಾಗುತ್ತದೆ. ಈ ತರಹದ ದೊಡ್ಡ ಅಂತರ ಇರತಕ್ಕಂತಹ ಸನ್ನಿವೇಶದ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಏನು ಗೊತ್ತುವಳಿಯನ್ನು ತಂದಿದ್ದಾರೆ, ಮುಖ್ಯಮಂತ್ರಿಗಳು ತಂದಿರತಕ್ಕಂಥದ್ದಕ್ಕೆ ಇದರಿಂದ ಏನು ದೊಡ್ಡ ಪರಿಣಾಮ ಆಗುತ್ತದೆ ಎಂದು ನಾನೇನು ಭಾವಿಸಿಲ್ಲ.

ಆದ್ದರಿಂದ ನಮ್ಮ ವಿಚಾರದಲ್ಲಿ ಸರ್ಕಾರ ತತಕ್ಷಣ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ಹೇಳಿದಾಗ ಕೂಡ ಮಂಡಲ್ ವರದಿಯ ಆಯೋಗದ ಸಂಬಂಧದಲ್ಲಿ ನಾನು ಕೆಲವು ಹಿಂದುಳಿದ ಜನಾಂಗದವರ ಕೆಲವರ ಬಗ್ಗೆ ನಾನು ಪ್ರಶ್ನೆಗಳನ್ನು ಮಾಡುತ್ತೇನೆ ಎಂದು ಅಲ್ಲ, ಇದು ಒಂದು ಚರ್ಚೆಗೆ ಯೋಚನೆ ಮಾಡತಕ್ಕಂತಹ ವಿಷಯ ಎಂದು ತಾವು ಭಾವಿಸಬೇಕಾಗಿದೆ. ಈ ದೇಶದಲ್ಲಿ ಜಾತಿಯನ್ನು ಬಿಟ್ಟು ಮತ್ತೊಂದು ಜಾತಿಗೆ ಸೇರಿದ ತಕ್ಷಣವೇ, ಮತ್ತೊಂದು ಧರ್ಮಕ್ಕೆ ಸೇರಿದ ತಕ್ಷಣವೇ, ಆತನ ಪೂರ್ವವನ್ನು ಗುರುತಿಸದೇ ಇರತಕ್ಕಂತಹವರು ಯಾರಿದ್ದಾರೆ, ಅವರು ಆ ಬದಲಾವಣೆಗಳ ಮೂಲಕವಾಗಿ ಮುಖ್ಯ ವಾಹಿನಿಯಲ್ಲಿ ಬರದೇ, ಮತ್ತೆ ಅದರ stigma ಎಂದು ಏನು ಕರೆಯುತ್ತೇವೆ, ಅದರ ಶಾಪಕ್ಕೆ ಅವರು ಗುರಿಯಾಗಿರುತ್ತಾರೆ ಎನ್ನುವ ಕಾರಣಕ್ಕಾಗಿ ನಾವು ದಲಿತ ಬೌದ್ಧ ಧರ್ಮಕ್ಕೆ, ದಲಿತ ಕ್ರಿಶ್ಚಿಯನ್ನರ ಬಗ್ಗೆ ಬದಲಾವಣೆಗಳಾದರೂ ಕೂಡ ಅದರ ವಸ್ತು ಸ್ಥಿತಿಯಲ್ಲಿ ಬದಲಾವಣೆಗಳಾಗಿಲ್ಲ ಎಂದು ನಾವು ಅಂದುಕೊಂಡಿದ್ದೇವೆ. ಅದಕ್ಕಾಗಿ ಅವರಿಗೆ ಪ್ರತ್ಯೇಕವಾದ ಸವಲತ್ತುಗಳನ್ನು ಕೊಟ್ಟಿದ್ದೇವೆ. ಹಾಗಿರುವಾಗ ವೃತ್ತಿಯ ಪರವಾಗಿರತಕ್ಕಂತಹ ಜಾತಿ ಸೂಚಕ ಶಬ್ದಗಳ ಮೂಲಕವಾಗಿ, ಯಾರೋ ಬಸವಣ್ಣನವರು ಮಾಡಿದ ಕ್ರಾಂತಿಯ ಕಾರಣಕ್ಕಾಗಿ ಗಾಣಿಗರು, ಹಡಪದವರು, ಮಡಿವಾಳರು, ಇವರೆಲ್ಲಾ ಸೇರಿರತಕ್ಕಂತಹ ಜನ ಯಾರಿದ್ದಾರೆ, ಅವರು ಯಾವುದೇ ಕಾಲದಲ್ಲಿ ಲಿಂಗಾಯಿತ ಗಾಣಿಗ, ಲಿಂಗಾಯಿತ ಅಗಸ, ಲಿಂಗಾಯಿತ ಮಡಿವಾಳ, ಲಿಂಗಾಯಿತ ಹಡಪದ ಎಂದು ಬರೆದ ತಕ್ಷಣ ಅವರಿಗೆ ನೀವು 2(ಎ) caste certificate ಕೊಡಬೇಡಿ ಎಂದು ಹೇಳಿ ಪ್ರತಿಪಾದನೆ ಮಾಡುವಂತಹ backward classes ನಾಯಕರು ಇದ್ದಾರಲ್ಲಾ, ಇದಕ್ಕೆ ನಾವು ಏನು ಹೇಳಬೇಕು? ಒಂದು ಕಡೆಗೆ ದಲಿತ ಬೌದ್ಧರಿಗೆ ನೀವು reservation ಕೊಡಿ, ಅವರು ಬದಲಾವಣೆಯ ಕಾರಣಕ್ಕಾಗಿ ಎಲ್ಲಿದ್ದಾರೋ ಅಲ್ಲಿಯೇ ಇದ್ದಾರೆ ಎಂದು ಹೇಳಿ. ಅದಕ್ಕಾಗಿ Permanent Backward Class Commission ಮಾಡಿ ಅದರ ಮುಂದೆ ಎಷ್ಟೋ ಜನ ಇದರ ಬಗ್ಗೆ ಮನವಿಗಳನ್ನು ಕೊಟ್ಟರೂ ಕೂಡ, ಇವತ್ತಿಗೂ ಕೂಡ ಆ ಹಿಂದುಳಿದ ವರ್ಗದ ಜನಾಂಗದ hierarchy ಯಲ್ಲಿ ಮೇಲ್ವರ್ಗದ ಜನ ಯಾರಿದ್ದಾರೆ ಎಂದು ಗುರುತಿಸಿ ಅವರಿಗೆ ಇವರಿಂದ ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ಕೂಡ ವಿರೋಧ ಮಾಡಿದ್ದರಿಂದ ಇವತ್ತಿನವರೆಗೂ ಕೂಡ ಅದು ಆಗಲಿಲ್ಲ. ಅದನ್ನು ಮಾಡುವುದಕ್ಕಾಗಿ ಹಿಂದುಳಿದ ಜನಾಂಗದ ನಾಯಕರುಗಳು ಇದರ ಪರವಾಗಿ ಹೋದರೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಒಂದಕ್ಕೊಂದು ಹೋಲಿಸುವುದಕ್ಕೆ ಹೋಗಬೇಡಿ. ದಲಿತ ಕ್ರಿಶ್ಚಿಯನ್ ಆಗಬಹುದು, ಅಥವಾ ದಲಿತ ಬುದ್ದಿಷ್ಟ್ ಆಗಬಹುದು, ಅಲ್ಲಿ ನಾಮಾಂತರ ಆದ ತಕ್ಷಣ untouchability ಹೋಗಿಲ್ಲ. Stigma of untouchability ಎಲ್ಲಿಯವರೆಗೆ ಇರುತ್ತದೋ, ಅದಕ್ಕಾಗಿ ಅವರಿಗೆ ಒಂದು special category ಮಾಡಿ ಕೊಟ್ಟಂಥದ್ದು ಇದೆ. ಆ untouchability stigma ಇವರಲ್ಲಿ ಇತ್ತು ಎಂದರೆ, ನೀವು ಅವರಲ್ಲಿ ಸೇರಿಸಿಬಿಡಿ. ನಾಳೆ ತಪ್ಪು ತಿಳುವಳಿಕೆ ಬರುತ್ತದೆ. Backward Class Leaders ಬೇರೆಯವರು ಇವರು ಬೇಡವೆಂದು ಹೇಳುತ್ತಾರೆ, ಅವರು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇದು ಆಗಬಾರದು. ಅವರು ಬೇರೆ ಧರ್ಮಕ್ಕೆ ಹೋದರೆ ಅವರನ್ನು ಸೇರಿಸಬೇಡಿ ಎಂದು ರಿಜೆಕ್ಟ್ ಮಾಡಿ. ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಬೇರೆಯವರಿಗೆ ಹೋಲಿಸುವುದಕ್ಕೆ ಹೋದರೆ ಸಾಕಷ್ಟು ತಾಪತ್ರಯ ಆಗುತ್ತದೆ. ಉದಾಹರಣೆಗೆ ಆರ್ಥಿಕವಾಗಿ ಒಬ್ಬ Scheduled caste ಶಕ್ತಿ ಶಾಲಿ ಇರಬಹುದು, ಬಲಶಾಲಿ ಇರಬಹುದು, ಅವನು ನಿಮ್ಮ ಊರಿನಲ್ಲಿ ಒಂದು ಚಹಾ ಅಂಗಡಿ ಇಡುತ್ತಾನೆ. ಎಷ್ಟು ಜನ ಅವನ ಬಳಿ ಹೋಗಿ ಚಹಾ ಕುಡಿಯುತ್ತೀರಿ? ಅದನ್ನು ಒಬ್ಬ ಗಾಣಿಗ ಲಿಂಗಾಯಿತ ಆಗಿರಬಹುದು, ದೋಬಿ ಲಿಂಗಾಯಿತ ಆಗಿರಬಹುದು, ಮತ್ತೊಬ್ಬರಾಗಿರಬಹುದು. ಅವನು ಅಂಗಡಿ ಹಾಕಿದರೆ ಅಲ್ಲಿ ಎಲ್ಲರೂ ಹೋಗಿ ಚಹಾ ಕುಡಿಯುತ್ತಾರೆ ಹೊರತಾಗಿ, ಇವನ ಅಂಗಡಿಗೆ ಯಾರೂ ಬರುವುದಿಲ್ಲ. ಇದು ಎಲ್ಲಾ practical ಆಗಿ ಗೊತ್ತಿದ್ದೂ ಕೂಡ ಅದನ್ನು ಹೋಲಿಸಿ ನೀವು ಪದೇ ಪದೇ ಹೇಳಿಕೊಂಡು ಹೋದರೆ, ಇದು ನ್ಯಾಯ ಅಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತಹ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಉದಾಹರಣೆಗೆ ಕೊಡುವುದರ ಜೊತೆಗೆ, ಈಗ ಒಂದು ಉದಾಹರಣೆ ಹೇಳುತ್ತೇನೆ. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಎನ್ನತಕ್ಕಂತಹ ಪದವನ್ನೇ ಬಳಸುವುದಾದರೆ, ಆರ್ಥಿಕವಾಗಿ ಎನ್ನುವುದು ಇಲ್ಲ. ಉದಾಹರಣೆಗೆ ನನ್ನದನ್ನೇ ತೆಗೆದುಕೊಳ್ಳುತ್ತೇನೆ. ನಾನು ಜಂಗಮ ಆಗಿರುವುದರಿಂದ ನಮ್ಮ ಊರಿನಲ್ಲಿ ನಾನು ಏನೇ ತಪ್ಪು ಮಾಡಿದರೂ ಕೂಡ ಮಂಗಯ್ಯಪ್ಪ ಎನ್ನಬಹುದೇ ವಿನಃ ಇನ್ನೇನು ಶಬ್ಧದಿಂದ ನನಗೆ ಬೈಯ್ಯುವುದಿಲ್ಲ. ಏಕೆಂದರೆ ಸಾಮಾಜಿಕವಾಗಿ ನಾನು ಮೇಲಸ್ಥರದಲ್ಲಿದ್ದೇನೆ. ಆದ್ದರಿಂದ ಆ stigma ನನಗೆ ಅಟ್ಯಾಚ್ ಆಗುವುದಿಲ್ಲ ಎನ್ನುವ ಕಾರಣಕ್ಕಾಗಿ ಪ್ರತಿಭೆ ವಿಚಾರದಲ್ಲಿ

ಗುರುತಿಸಿದಾಗಲೂ ಈ ರೀತಿ ಮಾಡಿದ್ದೇವೆ. ಇದನ್ನು ನಾವು ಅನೇಕ ಭಾಷಣಗಳಲ್ಲಿ ಪ್ರಥಮವಾಗಿ ಪ್ರಸ್ತಾಪ ಮಾಡುತ್ತೇವೆ. ಜಾತಿಯ ಒಂದು ಸೋಂಕು ನಮ್ಮ ಮನದಾಳದಲ್ಲಿ ಇರಬಹುದು, ನನ್ನ ಹಿನ್ನೆಲೆಯಲ್ಲಿ. ಇವತ್ತು ಪ್ರತಿಭೆಯ ಮಾನದಂಡ ಯಾವುದು? ಯಾರೋ 100ಕ್ಕೆ 60 ಮಾರ್ಕ್ಸ್ ನಾನು SSLC ಪರೀಕ್ಷೆಯಲ್ಲಿ ತೆಗೆದುಕೊಂಡೆ ಅಂದ ತಕ್ಷಣ ಪ್ರತಿಭಾವಂತ ಆಗುವುದಿಲ್ಲ. ಒಬ್ಬ ಕುರುಬರ ಹುಡುಗ ಆರು ತಿಂಗಳ ನಂತರ ತನ್ನ ಕಳೆದುಹೋದ ಕುರಿಯನ್ನು ಸಂತೆಯಲ್ಲಿ ನೋಡಿದಾಗ, "ಇದು ನನ್ನದು, ನನ್ನ ಮಂದಿಯದು, ನನ್ನ ಕುರಿ ಇದು" ಎಂದು ಹೇಳಿ ಕಂಡು ಹಿಡಿಯುತ್ತಾನಲ್ಲಾ, ಅದೂ ಕೂಡ ಪ್ರತಿಭೆ. ಆದ್ದರಿಂದ ಪ್ರತಿಭೆಯ ಮಾನದಂಡಗಳಲ್ಲಿ ಆಗಿರತಕ್ಕಂತಹ ವ್ಯತ್ಯಾಸಗಳನ್ನು ನಾವು ಗುರುತಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈಗ ಜಂಗಮರಲ್ಲಿ ಮೂರರಲ್ಲಿ ಒಬ್ಬ ದಡ್ಡ ಇರಬಹುದು. ಇಲ್ಲಿ ಮೂವರು ದಡ್ಡರಲ್ಲಿ ಒಬ್ಬ ಶಾಣೆ ಆಗಿ ಬರುತ್ತಾನೆ. ಅದಕ್ಕಾಗಿ ದಯವಿಟ್ಟು ಮತ್ತೆ ನೀವು ಅದಕ್ಕೆ ಹೋಗಬೇಡಿ.

ಶ್ರೀ ಎಂ.ಪಿ. ಪ್ರಕಾಶ್ :- ನಾನು ಸಾಮಾಜಿಕ ಆರ್ಥಿಕ ಎನ್ನುವ ಮಾತನ್ನು ಕೇಳಲಿಲ್ಲ. ಸಾಮಾಜಿಕವಾಗಿ ಮೇಲಸ್ಥರದಲ್ಲಿರತಕ್ಕಂಥಹವನು ಬಹಳ ಕಷ್ಟವಾಗುತ್ತದೆ ಎಂದು ಹೇಳಿದೆ. ಈಗ ಅದರಲ್ಲಿ ಕೂಡ ಬಹಳ ದೊಡ್ಡ ಬಾಲಂಗೋಚಿ ಎಂದು ಹುಕ್ಕೇರಿ ನಾರಾಯಣನ ಬಾಲಂಗೋಚಿ ಕಾದಂಬರಿ ನೀವು ನೋಡಿರಬಹುದು. ಬಹಳ ಒಳ್ಳೆಯ ಸಮಾಜ ಸುಧಾರಣಾ ತಜ್ಞ, ಬ್ರಾಹ್ಮಣರಲ್ಲಿ ಕೂಡ ವರ್ಗಭೇದ ಹೇಗೆ ಮಾಡುತ್ತದೆ ಎನ್ನತಕ್ಕಂತಹ ತೊಂದರೆ, ಅವನನ್ನು ದಲಿತರ ಹುಡುಗರಾಗಲಿ, ಹಿಂದುಳಿದ ಜನಾಂಗದವರು ಆಟದಲ್ಲಿ ಸೇರಿಸಿಕೊಳ್ಳುವುದಿಲ್ಲ. ಇವನು ಬ್ರಾಹ್ಮಣ ಎಂದು ದೂರ ಇಡುತ್ತಾರೆ. ಅವನ ತಾಯಿ ಮತ್ತು ತಂದೆ ಆ ಜಾಗೀರುದಾರರ ಮನೆಯಲ್ಲಿ ಅಡುಗೆ ಆಳುಗಳು. ಅವರ ಮನೆಯ ಕಟ್ಟೆಯಲ್ಲಿ ಆ ಮನೆಯ ಹುಡುಗರ ಜೊತೆ ಆಟ ಆಡಬೇಕೆಂದರೆ, ನೀನು ನಮ್ಮ ಅಡುಗೆ ಆಳಿನ ಮಗ, ದೂರವಿರು ಎಂದು ಹೇಳುತ್ತಾರೆ. ಅಂತಹ ಮಾನಸಿಕ ವ್ಯತ್ಯಾಸವನ್ನು ಬಿಂಬಿಸುವಂತಹ ಒಂದು ಉತ್ತಮವಾದಂತಹ ಕಿಕ್ಕೇರಿ ನಾರಾಯಣರಾವ್ ಅವರ "ಬಾಲಂಗೋಚಿ" ಎನ್ನುವ ಕಾದಂಬರಿ. ಈ ಸಮಸ್ಯೆ ಅಷ್ಟು ಸುಲಭವಲ್ಲ. ತಮಗೆ ಉದಾಹರಣೆ ಹೇಳುವುದಾದರೆ ನಾವೆಲ್ಲರೂ ಕೂಡ ಶ್ರೀ ಕೆ.ಆರ್. ನಾರಾಯಣ್‌ರವರು ದಲಿತರು, ಅವರು Schedule caste, ಅವರು ಪ್ರಥಮ ಬಾರಿಗೆ ರಾಷ್ಟ್ರಪತಿಗಳಾದರು ಎಂದು ಹೇಳಿಕೊಂಡೆವು. ಆದರೆ ನಿಜವಾಗಿ ಅವರು ಅಗಸರು. ಅಗಸರು ಎಂದರೆ

ಅವರು ದೋಬಿಗಳು. ಅವರು untouchable ಅಲ್ಲ. He was a touchable man.

ಮಾನ್ಯ ಸದಸ್ಯರು :- ಕೇರಳದಲ್ಲಿ ಅವರೂ ಕೂಡ Schedule caste.

ಶ್ರೀ ಎಂ.ಪಿ. ಪ್ರಕಾಶ್ :- That what I am telling, I am a backward in Andhra Pradesh. Lingayat as such is a backward in Andhra Pradesh. So, ಆ ಕಾರಣಕ್ಕಾಗಿ ಸುಲಭವಾಗಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ :- ದಯವಿಟ್ಟು ಆ certificate ಇಲ್ಲಿ ತೆಗೆದುಕೊಳ್ಳಬೇಡಿ. ನಮಗೆಲ್ಲ ತೊಂದರೆ ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :- ಬೇಡ ಜಂಗಮ ಎಂದು ತೆಗೆದುಕೊಂಡು ಅನೇಕರು ಎಷ್ಟು ತೊಂದರೆ ಮಾಡಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆ. ಅದು ತಮಾಷೆ ಎಂದರೆ ಬೇಡ ಜಂಗಮ ಎನ್ನುವ ನಿರ್ಣಯದ ವಿಷಯದಲ್ಲಿ ಒಬ್ಬ ಸಾರಂಗ ಮಠದ ಸದಾನಂದ ಎನ್ನುವವನು ಚಿತ್ರದುರ್ಗದಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ಇದ್ದಾಗ, ಮಾನ್ಯ ಉಪಾಧ್ಯಕ್ಷರ ಅಣ್ಣನವರಾದಂತಹ ಎನ್.ವೈ. ಹನುಮಂತಪ್ಪನವರ ಪೀಠದ ಮುಂದೆ ಬಂದಾಗ ಅವರೂ ಕೂಡ ಆತನಿಗೆ ನಿರಾಕರಿಸುವುದಕ್ಕೆ ಸಾಧ್ಯವಾಗಲಿಲ್ಲ. ಅವನು, ನಾನು ಬೇಡ ಜಂಗಮ, ಶ್ರೀಶೈಲದ ಕಡೆಯಿಂದ ಬಂದಿದ್ದೇನೆ ಎಂದು ದಾಖಲಾತಿಗಳನ್ನು ತಂದನು. ಅದು ದೊಡ್ಡದಾದ Judgement ಆಯಿತು. ಅವರು ಇಲ್ಲಿ ಇಲ್ಲದೇ ಇದ್ದರೂ ಕೂಡ ಅದರ ಬಗ್ಗೆ ಏನೆಂದು ತಮಗೆ ಗೊತ್ತಿದೆ.

ಡಾ|| ಹೆಚ್.ಸಿ. ಮಹದೇವಪ್ಪ :- ಆ ತರಹ ಘಟನೆಗಳು ಇವೆ, ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡು ನೌಕರಿ ತೆಗೆದುಕೊಂಡು ಅದನ್ನು ರಾಜ್ಯಾಂಗಕ್ಕೆ ಬಾಹಿರವಾಗಿರುವುದನ್ನು ಸರ್ಕಾರ confirm ಮಾಡಿದಂತಹ ನಿದರ್ಶನಗಳು ಇವೆ.

ಶ್ರೀ ಎಂ.ಪಿ. ಪ್ರಕಾಶ್ :- ಆದುದರಿಂದ ನಾನು ಈ ರೀತಿ ವಿಷಯವನ್ನು ಹೇಳುತ್ತಾ ಹೋದರೆ ಜಾಸ್ತಿಯಾಗಬಹುದೇನೋ, ಏಕೆಂದರೆ ಈ ನಿರ್ಣಯದಲ್ಲಿ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಿದಿರಿ ಎನ್ನುವ ಕಾರಣಕ್ಕೆ ಹೇಳಬೇಕಾಗುತ್ತದೆ. ಹೋರಾಟಗಳು ಹೇಗೆ ಬಂದವು? ಸಾಮಾಜಿಕ ಬದಲಾವಣೆಗಳನ್ನು ತರುವಂತಾದ್ದು ಎಷ್ಟು ಕಷ್ಟದ ಕೆಲಸ ಎನ್ನುವಂತಹ ವಿಚಾರವನ್ನು ತಾವೇನು ಪ್ರಸ್ತಾಪ ಮಾಡಿದಿರಿ,

ಇದೂ ಕೂಡ ಅಂತಹ ವರ್ಗದ ವಿಚಾರದಲ್ಲಿ ಮಾಡಿದಿರಿ. ಯಾವ ವರ್ಗದ ಕಡೆಯಿಂದ ಬಂದಂಥವರು ಯಾವ ರೀತಿಯ ನಿರ್ಣಯಗಳನ್ನು ಕೊಡಬಹುದು ಎಂದು ಬಂದಾಗ ನಾನು ಕೇಳಿಕೊಳ್ಳುವುದು ಇಷ್ಟೇ. ನಾನು ಇನ್ಯಾರಿಗೂ ಹೋಲಿಸದೇ ಇದ್ದರೂ ಕೂಡ, ಅವರು ಪಾಪ ವೀರಶೈವರಾದರೂ ಕೂಡ, ಇವತ್ತಿಗೂ ಕೂಡ ಮುಖ್ಯವಾಹಿನಿಗೆ ಬರುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ತಾವೇನು ಹಿಂದುಳಿದ ಜನಾಂಗದ ಆಯೋಗವನ್ನು ಮಾಡಬೇಕೆಂದು ಕೇಳಿಕೊಂಡಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ಬಂದಕೂಡಲೇ ಅದನ್ನು ಖಂಡಿತವಾಗಿ ಕೂಡ ಅವರೊಡನೆ ಸಮಾಲೋಚನೆ ಮಾಡುತ್ತೇನೆ.... ನಾನು ಅದನ್ನು announce ಮಾಡುವುದಕ್ಕೆ ಅಧಿಕಾರ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ತಾವು ಗಟ್ಟಿಯಾಗಿ ಧೈರ್ಯ ಮಾಡಿ ಒಂದು ಬಾರಿ ಹೇಳಿಬಿಡಿ ನೋಡೋಣ ಏನಾಗುತ್ತದೆ? ನಾವು ನಿಮ್ಮ ಹಿಂದೆ ಇದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– 5ನೇ ತಾರೀಖು ಮಾಡುತ್ತೇವೆಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ :– ನಾನು ಹೇಳಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವಲ್ಲ, Government. Council ನಲ್ಲಿ ಸರ್ಕಾರ ಆಗಲೇ ಹೇಳಿಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಇಲ್ಲ, ಅದನ್ನು ಬೇಗನೆ ಮಾಡಬೇಕು. ಮಾಡಲೇಬೇಕು. ನಮ್ಮಲ್ಲಿ ಸ್ವಲ್ಪ ಆಂತರಿಕವಾಗಿ ಯಾವುದೇ ವಿವಾದವಿಲ್ಲ. ಮಾಡುವ ನಿರ್ಣಯದಲ್ಲಿ ಸ್ವಲ್ಪ ತಡವಾಗಿದೆ. ಇದು ನಮ್ಮ ಪಾರ್ಟಿಗೆ ಬಂದಿರತಕ್ಕಂಥಾದ್ದು. ಎಲ್.ಜಿ. ಹಾವನೂರರಂತಹವರೇ ದಿ: 22–05–1956ರಲ್ಲಿ ಹಿಂದುಳಿದ ಜನಾಂಗದ ಸಮ್ಮೇಳನವನ್ನು ಆ ಕಾಲದಲ್ಲಿ ಮಾಡಿದ್ದರು. ಆ ಹೋರಾಟದ ಪ್ರತಿಫಲ ಇದು. ಅದರ ಕತೆ ನಿಮಗೆಲ್ಲ ಗೊತ್ತಿರತಕ್ಕಂಥ ವಿಷಯ.

ಶ್ರೀ ಸಿದ್ಧರಾಮಯ್ಯ :– ಆ ಕಮಿಷನ್ permanent ಆಗಿ ಇರಬೇಕು. ಅದನ್ನು ನಿಷ್ಕ್ರಿಯ ಮಾಡಿ ಕೂರಿಸುವುದಿದೆಯಲ್ಲ, that is not correct.

ಶ್ರೀ ಎಂ.ಪಿ. ಪ್ರಕಾಶ್ :– ನಿಷ್ಕ್ರಿಯ ಆಗಿದೆ ಮತ್ತು ಅದು ಕಾಲಕಾಲಕ್ಕೆ ಬದಲಾವಣೆಯಾಗಬೇಕು. ಈ ಸಂದರ್ಭದಲ್ಲಿ ಇದಕ್ಕೆ ನೇರವಾಗಿ ಸಂಬಂಧ

ಇಲ್ಲದೇ ಇದ್ದರೂ ಕೂಡ ಯಾವುದೇ ಜಾತಿಯಿಂದ ಬಂದಿದ್ದರೂ ಕೆಲವರು ಹುಟ್ಟಿನಿಂದ ಅಪಮಾನಿತರು ಮತ್ತು ಉದ್ಯೋಗದಿಂದ ಕೆಲವರು ಅಪಮಾನಿತರು. ಈ ದೇಶದ ದೊಡ್ಡ ದುರಂತವೆಂದರೆ ಅದು. ಹುಟ್ಟಿನಿಂದಾದಂತಹ ಅಪಮಾನಕ್ಕೆ ಸರಿಯಾದಂತಹ ರೀತಿಯಲ್ಲಿ ನಾವು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಅದೇ ರೀತಿಯಾಗಿ ತಮ್ಮ ಕೆಲಸದ ಮೂಲಕ ಉಪೇಕ್ಷೆಗೊಳಗಾದಂಥ ಜನ ಸಮುದಾಯವಿದೆ. ಅದಕ್ಕೆ ಯಾವ್ಯಾವುದೋ ಪರಿವರ್ತನೆಗಳನ್ನು ಮಾಡಿಕೊಂಡು ಬಂದರೂ ಕೂಡ ಸಾಧ್ಯವಾಗಲಿಲ್ಲ. ನಾನು ಮಾನ್ಯ ನಾರಾಯಣ್‌ರವರು ಬೇರೆ ಕಡೆಗೆ ಬಂದಾಗ ಮಾಡಿರುವಂತಹ ಭಾಷಣವನ್ನು ಓದಿದ್ದೇನೆ. ಅವರು ಕರ್ನಾಟಕಕ್ಕೆ ಬಂದಂತಹ ಸಂದರ್ಭದಲ್ಲಿ ನೀವು ದೋಬಿಗಳನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕು. ಮಲಮೂತ್ರ ತೆಗೆಯುವಂತಹ ಜನ ಯಾರಿದ್ದಾರೆ, ಅವರು ಇವರಿಗಿಂತಲೂ ಕಷ್ಟದಲ್ಲಿದ್ದಾರೆ, ಅವರನ್ನು ಕೂಡ ನೀವು ಸೇರಿಸಿ ಎಂದು ಮಾನ್ಯ ನಾರಾಯಣ್‌ರವರು ಭಾಷಣ ಮಾಡಿರುವುದನ್ನು ಕೂಡ ನಾನು ಒಂದು ಕಡೆಗೆ ಓದಿದ್ದೇನೆ. ಅದು ಏನಾದರೂ ಇರಲಿ touchable and untouchable ವಿಷಯದಲ್ಲಿ ದೊಡ್ಡ ವಿವಾದವೇ ಇದೆ. ಇದನ್ನು ರಾಜಕೀಯವಾಗಿ ಯಾವ್ಯಾವ ರಾಜ್ಯಗಳು, ಯಾವ್ಯಾವ ರೀತಿಯಲ್ಲಿ, ಯಾವ್ಯಾವ ಸಂದರ್ಭದಲ್ಲಿ ತಮಗೆ ಅನುಕೂಲವಾಗುವಂತಹ ಬದಲಾವಣೆ ಮಾಡಿದರು ಎನ್ನುವುದು ಬೇಕಾದಷ್ಟು ಇದೆ. ಅವರು, ಇವರು ಎನ್ನುವುದಕ್ಕಿಂತ, ಅದನ್ನು ಎಲ್ಲರೂ ಕೂಡ ಮಾಡಿದ್ದೇವೆ. ಈ ಸಂದರ್ಭದಲ್ಲಿ permanent Backward Class Commission ಅನ್ನು ಪ್ರಾಯಶಃ ಇನ್ನು ಸ್ವಲ್ಪ ದಿವಸದಲ್ಲೇ ಖಂಡಿತವಾಗಿ announce ಮಾಡಿಸುತ್ತೇನೆ. ಆಗ ಮಾಡಿದರೆ ಈ ಜನರನ್ನು ಸೇರಿಸುವುದಕ್ಕೆ backward class leaders ಕೂಡ ಮುಂದೆ ಬರಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಿಂಗಾಯಿತ ಗಾಣಿಗರಾಗಿರಲಿ, ಲಿಂಗಾಯಿತ ಹಡಪನಾಗಿರಲಿ, ಲಿಂಗಾಯಿತ ಮಡಿವಾಳರಾಗಿರಲಿ ಅವರನ್ನು ಸೇರಿಸುವುದಕ್ಕೆ ಮುಂದೆ ಬರಬೇಕು. ಅವರು ಒಪ್ಪಿಕೊಂಡಿದ್ದಾರೆ ಎಂದ ಮೇಲೆ ಅದರಲ್ಲಿ ಅನ್ಯಾಯವಾಗಿದೆ ಎನ್ನುವುದು ಗೊತ್ತಿದ್ದು ಸುಮ್ಮನಾಗಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಇಲ್ಲ, ನಾನು ಅವತ್ತೇ welcome ಮಾಡಿಬಿಟ್ಟಿದ್ದೀನಿ, ಈಗಲೂ welcome ಮಾಡುತ್ತೇನೆ. ಆದರೆ ಈ Backward Class Commission ಅನ್ನೇ constitute ಮಾಡುವುದಿಲ್ಲವಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಖಂಡಿತವಾಗಿ ಒಳಮೀಸಲಾತಿ ತರುವಂತಾದ್ದರ ಅಗತ್ಯ ಕೂಡ ಇದೆ. ಸಂದರ್ಭ ಬಂದಾಗ ಅದನ್ನು ಬದಲಾವಣೆಯನ್ನು ನಾವು ಮಾಡಲೇಬೇಕಾಗುತ್ತದೆ. ಪ್ರಾರಂಭದಲ್ಲಿ ಡಾ॥ ಅಂಬೇಡ್ಕರ್‌ರವರು ಕೇವಲ ಹತ್ತು ವರ್ಷಕ್ಕೆ ಮೀಸಲಾತಿ ಹೇಳಿದ್ದು. ಅದಾದಮೇಲೆ ಬೆಳೆದುಕೊಳ್ಳುತ್ತಾ ಹೋಯಿತು. ಈಗಲೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಲಿಂಗಾಯಿತ ಗಾಣಿಗರು, ಲಿಂಗಾಯಿತರಲ್ಲಿ ಏನಾದರೂ ಒಳ ಮೀಸಲಾತಿ ತರುವಂತಹ ಯೋಚನೆ ಏನಾದರೂ ಇದೆಯೇ? ನಮ್ಮ ಕತೆ ಹೇಳಿ. ಅಲ್ಲೂ ಇದೆಯಾ ಹೇಗೆ ಎಂದು ಕೇಳುತ್ತಿರುವುದು.

ಶ್ರೀ ಎಂ.ಪಿ. ಪ್ರಕಾಶ್ :– ಅದರಲ್ಲಿ ಏನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅದರ ಜೊತೆಗೆ ಕೆಲವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ಕೇಂದ್ರಕ್ಕೆ ಒಂದು recommend ಮಾಡಬೇಕಾಗುತ್ತದೆ. ಈಗ committee ಕೂಡ form ಆಗಿಲ್ಲ. ನಮ್ಮ ಕಡೆ ಒಂದು ಕುಡುಬಿ ಜನಾಂಗ ಎಂದಿದೆ. ಅವರು ನಿಜವಾಗಿ ಪರಿಶಿಷ್ಟ ಪಂಗಡಕ್ಕೆ ಸೇರಬೇಕಾಗಿತ್ತು. ಅವರೂ ಇವತ್ತೂ ಹಿಂದುಳಿದ ವರ್ಗದಲ್ಲಿದೆ. ಅವರಲ್ಲಿ post master ಗಿಂತ ದೊಡ್ಡ post ನಲ್ಲಿ ಯಾರೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಜಾತಿವಾರು ಸಮೀಕ್ಷೆ 30ರದು ಬಿಟ್ಟುಹೋದಮೇಲೆ, ಅದನ್ನು ಮಾಡಿಯೇ ತೀರಬೇಕು. ಅದನ್ನು ಮಾಡದಿದ್ದರೆ ಬಹಳ ದೊಡ್ಡ ಕಷ್ಟವಾಗುತ್ತದೆ. ಆ ಕುಡುಬಿ ಜನಾಂಗದವರಿಗಂತೂ ಉಗುರು ಮತ್ತು ಕೂದಲನ್ನು ಆಹಾರದಲ್ಲಿ ಹಾಕಿ ತಿನ್ನುತ್ತಿದ್ದಂತಹ ಜನ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅವರಿಗೆ ಇನ್ನೂ recommend ಕೂಡ ಮಾಡಿಲ್ಲ. ಒಂದು ಸಲ ಕೇಂದ್ರಕ್ಕಾದರೂ ಹೋಗಲಿ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಮಾಧುಸ್ವಾಮಿಯವರೆ, ಈಗ ಒಳ ಮೀಸಲಾತಿ ಬಗ್ಗೆ ಮಾತನಾಡಲಿಲ್ಲ. ಮಂಡಲ್‌ರವರೆ ಒಪ್ಪಿದರು, ಅವರು ಒಪ್ಪಿ ಈ ವಿಚಾರವನ್ನು ಪ್ರಸ್ತಾಪ ಮಾಡಿ, ಅದರಲ್ಲಿ ಇವರೆಲ್ಲರನ್ನೂ ಕೂಡ ಸೇರಿಸಿದರು. ಕೇಂದ್ರ ಸರ್ಕಾರದ ಆಜ್ಞೆಯಲ್ಲಿದೆ, ಆದರೆ ರಾಜ್ಯ ಸರ್ಕಾರದ ಆಜ್ಞೆಯಲ್ಲಿ ಅದು ಇಲ್ಲ. ಆ ಕಾರಣಕ್ಕಾಗಿ ಅದನ್ನು ಸರಿಪಡಿಸಬೇಕು ಎನ್ನುವಂತಹ ಮಾತನ್ನು ಹೇಳಿ

ಸನ್ಮಾನ್ಯ ಮುಖ್ಯಮಂತ್ರಿಗಳು, "ಐ.ಐ.ಎಂ., ಐ.ಐ.ಟಿ ಮುಂತಾದ ಉನ್ನತ ಶಿಕ್ಷಣದಲ್ಲಿ ಇತರೇ ಹಿಂದುಳಿದ ವರ್ಗದವರ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವಂತೆ ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ" ಎನ್ನುವ ಗೊತ್ತುವಳಿಯನ್ನು ಇವತ್ತು ಸದನದಲ್ಲಿ ಮಂಡಿಸಿದ್ದಾರೆ. ಈ ವಿಚಾರದಲ್ಲಿ ಹಿರಿಯರು, ವಿರೋಧ ಪಕ್ಷದ ನಾಯಕರು, ನಾಯಕರೂ ಆದಂತಹ ಸನ್ಮಾನ್ಯ ಧರ್ಮಸಿಂಗ್‌ರವರು ಪ್ರಥಮದಲ್ಲಿ ಈ ಸದನದ ಗಮನಕ್ಕೆ ತಂದು ಒಂದು ಗೊತ್ತುವಳಿಯನ್ನು ಕೊಟ್ಟರು. ಪ್ರಾಯಶಃ ಇದು ಒಂದು ಉತ್ತಮವಾದಂತಹ ಬೆಳವಣಿಗೆ, ಅದು ಸರ್ವಾನುಮತದಿಂದ ಒಪ್ಪಿಗೆಯಾಗಲಿ ಎನ್ನುವ ಕಾರಣಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸಭಾನಾಯಕರು ಮಂಡಿಸಿರುವಂತಹ ಅಥವಾ ಬೆಂಬಲ ಸೂಚಿಸಿರುವಂತಹ ಈ ನಿರ್ಣಯವನ್ನು ಈ ಸದನ ಸರ್ವಾನುಮತದಿಂದ ಬೆಂಬಲಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಸರ್ಕಾರಿ ನಿರ್ಣಯ

ಉಪಾಧ್ಯಕ್ಷರು :- ಈಗ ಚರ್ಚೆ ಮುಗಿಯಿತು. ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ನಿರ್ಣಯ ಈ ರೀತಿ ಇದೆ.

"ಐ.ಐ.ಎಂ., ಐ.ಐ.ಟಿ ಮುಂತಾದ ಉನ್ನತ ಶಿಕ್ಷಣದಲ್ಲಿ ಇತರೇ ಹಿಂದುಳಿದ ವರ್ಗದವರ ಮೀಸಲಾತಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಕೈಗೊಂಡ ಪ್ರಾರಂಭಿಕ ಕ್ರಮಗಳನ್ನು ಬೆಂಬಲಿಸಲು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಭಾರತ ಸರ್ಕಾರವನ್ನು ಕೋರುವಂತೆ ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ"

ಮೇಲಿನ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಗಿದೆ

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಅಧ್ಯಕ್ಷರ ಹತ್ತಿರ ಮಾತನಾಡಿದ್ದೇನೆ. ಈಗ ತಮಗೂ ತಿಳಿಸುತ್ತಿದ್ದೇನೆ. ಇದು ಬಹಳ...

ಉಪಾಧ್ಯಕ್ಷರು :- ವಾಟಾಳ್ ನಾಗರಾಜ್‌ರವರೆ, ನಾಳೆ....

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ :- ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಅವಮಾನವಾಗುವಂಥ ನಡೆದ ಘಟನೆ:

ಶ್ರೀ ವಾಟಾಳ್ ನಾಗರಾಜ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೆ, ಶ್ರೀ ನಾರಾಯಣ ಮೂರ್ತಿ ಎನ್ನುವ ದೊಡ್ಡ ಮಹನೀಯ, ಅವರು ಇತ್ತೀಚಿನ ದಿವಸಗಳಲ್ಲಿ 15 ವರ್ಷಗಳಲ್ಲಿ ಜಗತ್ತಿನಲ್ಲಿ ನನ್ನನ್ನು ಬಿಟ್ಟರೆ, ಇನ್ನು ಯಾರು ಇಲ್ಲವೆಂಬ ವ್ಯಕ್ತಿಗತವನ್ನು ತೋರಿಸಿ, ಅವರಿಗೆ ಅವರನ್ನು ಬಿಟ್ಟರೆ ಈ ದೇಶದಲ್ಲಿ, ಪ್ರಪಂಚದಲ್ಲಿ, ಬೇರೆ ಯಾವ ಜನಾಂಗ ಇಲ್ಲ, ಯಾರು ಇಲ್ಲ. ತಾವು ಅತ್ಯಂತ ಮೇಧಾವಿ, ಬುದ್ಧಿವಂತ, ಮತ್ತು ಈ ದೇಶಕ್ಕೆ ನನ್ನನ್ನು ಬಿಟ್ಟರೆ ಮತ್ಯಾರೂ ಇಲ್ಲವೆನ್ನುವಂಥ ಹೆಗ್ಗಳಿಕೆಯಿಂದ, ನಿನ್ನೆ ಅವರದೇ ಆದಂತಹ ಸಂಸ್ಥೆಯಲ್ಲಿ, ಒಂದು ದೊಡ್ಡ ಸಮಾರಂಭ ಮಾಡಿದ್ದು, ಈ ಸಮಾರಂಭಕ್ಕೆ ವಿದೇಶದವರು ಬಂದಿದ್ದಾರೆ. ರಾಷ್ಟ್ರಗೀತೆಯೆಂದರೆ, ನಾರಾಯಣ ಮೂರ್ತಿಯವರಿಗೆ ಗೊತ್ತಿಲ್ಲ. ನಾರಾಯಣ ಮೂರ್ತಿ ಈ ದೇಶದವರಲ್ಲ, ಕರ್ನಾಟಕ ರಾಜ್ಯದವರಲ್ಲ, ಅಮೇರಿಕಾದವರಲ್ಲ, ರಷ್ಯಾದವರಲ್ಲ, ಅವರು ಚಂದ್ರಲೋಕದವರು ಇರಬಹುದು. ಈ ದೇಶದಲ್ಲಿ ರಾಷ್ಟ್ರಗೀತೆಗೆ ಎಷ್ಟು ಮಾನ್ಯತೆ ಇದೆ, ಎಷ್ಟು ಗೌರವವಿದೆ, ನಾವು ಎಷ್ಟು ಕೊಡಬೇಕಾಗಿದೆ. ಆದರೆ ರಾಷ್ಟ್ರಗೀತೆಯನ್ನು ಹಾಡುವುದರಿಂದ, ವಿದೇಶದವರಿಗೆ ಅಪಮಾನವಾಗುತ್ತದೆನ್ನುವ ರೀತಿಯಲ್ಲಿ ರಾಷ್ಟ್ರಗೀತೆಯನ್ನು ಹಾಡಲಿಲ್ಲ. ಇದುವರೆಗೂ ನಾಯಾಯಣಮೂರ್ತಿಯನ್ನು ಬಂಧಿಸಲಿಲ್ಲ. ಇದರ ಬಗ್ಗೆ ತನಿಖೆಯಾಗಲಿಲ್ಲ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ನೀವು ಯಾವ ರೀತಿ ಹೇಳಿದ್ದೀರಿ. ರಾಷ್ಟ್ರಗೀತೆಗೆ ಯಾವ ರೀತಿ ಅಗೌರವವನ್ನು ಮಾಡಿದ್ದೀರೆಂದು ಅವರನ್ನು ಕೇಳಲಿಲ್ಲ. ಇದರ ಜೊತೆಗೆ ಕಾವೇರಿ ಚಳುವಳಿ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಕಾವೇರಿ ಚಳುವಳಿ ಬೇಕೆ? ಏಕೆ ಚಳುವಳಿ ಮಾಡಬೇಕು? ಯಾವ ಉದ್ದೇಶಕ್ಕೆ ನಿಮ್ಮ ಚಳುವಳಿ? ಏನು ಎಂದು, ತೀವ್ರ ಲಘುವಾಗಿ ಮಾತನಾಡಿದ್ದಾರೆ. ಇವರು ಒಬ್ಬ ಕನ್ನಡದ ದ್ರೋಹಿ, ಎಂದು ನಾನು ನೇರವಾಗಿ ಹೇಳುತ್ತೇನೆ. ಇವರಿಗೆ ಕನ್ನಡದ ಬಗ್ಗೆಯೂ ಅಭಿಪ್ರಾಯವಿಲ್ಲ, ಕನ್ನಡಿಗರಿಗೂ